ಅಧ್ಯಕ್ಷರು :— ಈಗ ಅವಕಾಶ ಕೊಡುವುದಿಲ್ಲ, ತಾವು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು.

10. ವಿತ್ತೀಯ ಕಾರ್ಯಕಲಾಪ.

2000-2001ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

+ ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, "2000-2001ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಪಟ್ಟಿಯನ್ನು ಸಭೆಯ ಒಪ್ಪಿಗೆಗೆ ಮುಂದೆ ಮಂಡಿಸುತ್ತಿದ್ದೇನೆ."

ಅಧ್ಯಕ್ಷರು :— ಮಂಡಿಸಲಾಯಿತು.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಪೂರಕ ಅಂದಾಜುಗಳಿಗೆ ಸದನದ ಒಪ್ಪಿಗೆಯನ್ನು ಕೋರುತ್ತಿದ್ದೇನೆ. ಇದು ನಮ್ಮ ರಾಜ್ಯದ ಒಟ್ಟು ಆಯವ್ಯಯಕ್ಕೆ 3.5 ಪರ್ಸೆಂಟ್‌ಗೆ ಮಾತ್ರ ಸೀಮಿತವಾಗಿದೆ. ಒಟ್ಟು ಮೊತ್ತ ನಾವು ಕೇಳಿರತಕ್ಕದ್ದು 676.17 ಕೋಟಿ ರೂಪಾಯಿ. ಇದು ಇಂಡಸ್ಟ್ರೀಸ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮತ್ತು ಹೌಸಿಂಗ್. ಪ್ರಧಾನವಾಗಿ ಹೌಸಿಂಗ್‌ಗೆ 82 ಕೋಟಿ ರೂಪಾಯಿಗಳನ್ನು ರೂರಲ್‌ನಲ್ಲಿ ಆಶ್ರಯಕ್ಕೋಸ್ಕರ ಸಬ್ಸಿಡಿ ರೂಪದಲ್ಲಿ ಬಿಡುಗಡೆ ಮಾಡಿರತಕ್ಕದ್ದು. ಪ್ರಮುಖವಾದ ಖರ್ಚನ್ನು ನಾವು ನಮೂದಿಸಿದ್ದೇವೆ. ಹಾಗೆಯೇ ಮೇಜರ್ ಅಂಡ್ ಮಿಡಿಯಮ್ ಇರಿಗೇಷನ್, ಬೆಣ್ಣೆತೊರೆ ಪ್ರಾಜೆಕ್ಟ್, ವರಾಹಿ ಪ್ರಾಜೆಕ್ಟ್, ಅದೇ ರೀತಿ ಮೈನರ್ ಇರಿಗೇಷನ್ ಪಬ್ಲಿಕ್ ವರ್ಕ್ಸ್‌ಗೆ 130ಕೋಟಿ ರೂಪಾಯಿ, ಸಮಾಜ ಕಲ್ಯಾಣಕ್ಕೆ 36 ಕೋಟಿ ರೂಪಾಯಿ ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕೃಷ್ಣಾರವರು ಮುಖ್ಯಮಂತ್ರಿಗಳಾದ ಮೇಲೆ, ಅವರ ಒಂದು ಅಪಾರವಾದ 40 ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಬಹಳ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಂಡಿರುವವರಲ್ಲಿ ನಾನೂ ಒಬ್ಬ. ಕಾರಣ ಅವರಿಗೆ ಇರತಕ್ಕ 40 ವರ್ಷಗಳ ಅನುಭವದ ಜೊತೆಗೆ ಅವರ ಶಿಕ್ಷಣ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನಪರಿಷತ್‌ನ ಅನುವದ ಜೊತೆಗೆ ಈ ಸಾರಿ ಕಾಂಗ್ರೆಸ್ ಪಕ್ಷಕ್ಕೆ ಸಾಕಷ್ಟು ಬಹುಮತ ಸಿಕ್ಕಿದೆ. ನಾನು ಬಹಳ ದೊಡ್ಡ ಪ್ರಮಾಣದಲ್ಲಿ ಅವರ ಚೊಚ್ಚಲ ಬಜೆಟ್ ಭಾಷಣದಲ್ಲಿ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆ. ರಾಜ್ಯದ ಜನತೆ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ಆದರೆ ಆ ನಿರೀಕ್ಷೆಗೆ ತಕ್ಕಂತೆ ಕೆಲಸಗಳು ಆಗುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸುಮಾರು 676ಕೋಟಿ

ರೂಪಾಯಿಗಳಿಗೂ ಹೆಚ್ಚು ಹಣಕ್ಕೆ ಸದನದ ಒಪ್ಪಿಗೆಯನ್ನು ಕೇಳುವುದಕ್ಕೆ ಪೂರಕ ಅಂದಾಜನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಯಾವುದಾದರೂ ಒಂದು ಸರ್ಕಾರ ಸಪ್ಲಿಮೆಂಟರಿ ಬಜೆಟ್‌ನ್ನು ಹೊಂದಿರುತ್ತದೆ. ಕೆಲವು ಅನಿವಾರ್ಯವಾಗಿ ಅನಿರೀಕ್ಷಿತವಾಗಿ ನಾವು ನಿರೀಕ್ಷೆ ಮಾಡದಿರತಕ್ಕ ಕಾರ್ಯಕ್ರಮಗಳು ಬರುತ್ತವೆ. ಕೇಂದ್ರ ಸರ್ಕಾರ ವರ್ಷದ ಮಧ್ಯದಲ್ಲಿ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡುತ್ತದೆ. ಆ ಸಂದರ್ಭದಲ್ಲಿ ರಾಜ್ಯಸರ್ಕಾರವು ತನ್ನ ಪಾಲಿನ ಹಣವನ್ನು ಕೊಡಬೇಕಾಗುತ್ತದೆ. ಇನ್ನು ಕೆಲವು ಅನಿವಾರ್ಯವಾಗಿರತಕ್ಕ ಮಳೆ ಹೆಚ್ಚಾಗಿ ರಸ್ತೆಗಳು ಕೆಟ್ಟುಹೋದರೆ ಯಾವುದಾದರೂ ಇಲಾಖೆಯ ಹಣವನ್ನು ಕಡಿಮೆಮಾಡಿ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ನಾವು ಹಣವನ್ನು ಕೊಡಬೇಕಾಗುತ್ತದೆ. ಮತ್ತು ಕಾನೂನಿನ ಸಂರಕ್ಷಣೆ ದೃಷ್ಟಿಯಿಂದ ನಾವು ನಿರೀಕ್ಷೆ ಮಾಡದಂಥ ಅನೇಕ ಘಟನಾವಳಿಗಳು ನಡೆದುಬಿಡುತ್ತವೆ. ಆ ಸಂದರ್ಭದಲ್ಲಿ ಸಹಿತ ಕೆಲವೊಮ್ಮೆ ನಾವು ಏನು ಆಯವ್ಯಯದಲ್ಲಿ ಹಣವನ್ನು ಇಟ್ಟುಕೊಂಡಿರುತ್ತೇವೆ, ಅದಕ್ಕಿಂತಲೂ ಹೆಚ್ಚಿನ ಹಣವನ್ನು ಕೊಡತಕ್ಕಂಥ ಅನಿವಾರ್ಯ ಪ್ರಸಂಗಗಳು ಬರುತ್ತವೆ. ಅದನ್ನು ನಾನು ಸಹಿತ ಅರ್ಥಮಾಡಿಕೊಂಡಿದ್ದೇನೆ. ಕೆಲವು ಅನಿವಾರ್ಯವಾದ ಪ್ರಸಂಗಗಳು ಎಲ್ಲ ಸರ್ಕಾರಗಳು ಇದ್ದಾಗಲೂ ಸಹಿತ ಬಂದಿವೆ. ಅದರ ಜೊತೆಗೆ ಕೇಂದ್ರ ಸರ್ಕಾರದವರು ಕೆಲವು ಯೋಜನೆಗಳನ್ನು ಮತ್ತು ರಾಜ್ಯ ಸರ್ಕಾರಕ್ಕೆ ಸಹಕಾರ ಕೊಡತಕ್ಕಂಥಾದ್ದನ್ನು ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಕಣ್ಣುಮುಚ್ಚಿಕೊಂಡು ಇರುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದವರು ಆ ಯೋಜನೆ ಕಾರ್ಯಗತವಾಗಬೇಕೆಂದು ಹೇಳಿದಾಗ ನಾವು ರಾಜ್ಯ ಸರ್ಕಾರದ ಪಾಲನ್ನು ಕೊಡಲೇಬೇಕಾಗುತ್ತದೆ. ಅದರ ಜೊತೆಗೆ ನಾವು ಸಹಿತ ಕೆಲವೊಮ್ಮೆ ರಾಜ್ಯ ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಉದಾಹರಣೆಗೆ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ, ಮಾನ್ಯ ಜೆ.ಹೆಚ್. ಪಟೇಲರು, ನಾವೆಲ್ಲರೂ ಗೌರವಾನ್ವಿತ ಸತ್ಯಸಾಯಿಬಾಬಾ ಅವರನ್ನು ಭೇಟಿ ಮಾಡಿದ್ದೆವು. ಆಗ ಅವರು ಕೆ.ಐ.ಎ.ಡಿ.ಬಿ.ಯಿಂದ 50 ಎಕರೆ ಜಮೀನನ್ನು ಕೊಡಿ, 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಾನು ಒಳ್ಳೆಯ ಆಸ್ಪತ್ರೆಯನ್ನು ಕರ್ನಾಟಕಕ್ಕೆ ಕೊಡುತ್ತೇನೆ. ಎನ್ನತಕ್ಕಂಥ ಮಾತನ್ನು ಬಾಬಾರವರು ಹೇಳಿದ್ದರು. ಸನ್ಮಾನ್ಯ ಸಾಯಿಬಾಬಾರವರು ಅತ್ಯಂತ ಉತ್ತಮವಾಗಿರತಕ್ಕಂಥ, ಸುಸಜ್ಜಿತವಾಗಿರತಕ್ಕಂಥ ಆಸ್ಪತ್ರೆಯನ್ನು ಕಟ್ಟಿದ್ದಾರೆ. ಬಹುಶಃ ಕರ್ನಾಟಕ ರಾಜ್ಯದ ಜನತೆಗೆ ಬಾಬಾರವರು ಕೊಟ್ಟಿರತಕ್ಕಂಥ ಒಂದು ದೊಡ್ಡ ಸಹಸ್ರಮಾನದ ಕೊಡುಗೆ ಇದೆಂದು ನಾನು ಭಾವಿಸಿದ್ದೇನೆ. ಹೀಗೆ ಆಗಿರತಕ್ಕಂಥ ಆಸ್ಪತ್ರೆಯನ್ನು ಪುಟ್ಟಪರ್ತಿಗೆ ಹೋಗಿ ತಾವು ನೋಡಿರಬಹುದು. ಇದು ನಿಜವಾಗಿಯೂ ಮೆಚ್ಚತಕ್ಕದ್ದು. ಈಗ ಇಂಥಾದಕ್ಕೆ ಮಾನ್ಯ ಮುಖ್ಯಮಂತ್ರಿಗಳು ನಾವು ಬಜೆಟ್‌ನಲ್ಲಿ ಹಣವನ್ನು ಇಟ್ಟುಕೊಂಡಿರಲಿಲ್ಲ, ಕೆ.ಐ.ಎ.ಡಿ.ಬಿ.ಗೆ ಐದೂವರೆ ಕೋಟಿ ದುಡ್ಡನ್ನು ನಾವು ಕೊಡಬೇಕಾಗಿತ್ತು, ಅದಕ್ಕೋಸ್ಕರ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ನವೆಂಬರ್, ಡಿಸೆಂಬರ್‌ನಲ್ಲಿ ಬಾಬಾರವರು ಉದ್ಘಾಟನೆಯನ್ನು

ಸಹಿತ ಮಾಡುವವರಿದ್ದಾರೆ. ಇದು ಅನಿವಾರ್ಯವಾಗಿರತಕ್ಕಂಥ ಕಾರ್ಯಕ್ರಮ, ಇದು ಸ್ವಾಗತಾರ್ಹವಾದುದು ಎಂದು ನಾನು ಒಪ್ಪುತ್ತೇನೆ. ಅದೇ ರೀತಿಯಲ್ಲಿ ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದವರು ಆಂಧ್ರಪ್ರದೇಶದ ಕೊಪ್ಪಂದ ದ್ರಾವಿಡಿಯನ್ ವಿಶ್ವವಿದ್ಯಾನಿಲಯದಲ್ಲಿ ಒಂದು ಬಸವ ಪೀಠವನ್ನು ಸ್ಥಾಪನೆ ಮಾಡುವುದಕ್ಕೋಸ್ಕರ, ಬಸವ ತತ್ವಗಳ ಪ್ರಚಾರಕ್ಕೋಸ್ಕರ 50 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಅದಕ್ಕೆ ವಿಶೇಷ ಅನುದಾನವಾಗಿ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಇದು ಸಹಿತ ಅನಿವಾರ್ಯವಾದದ್ದು, ಮತ್ತು ಇದನ್ನು ನಾವು ವಿರೋಧ ಮಾಡುವುದಕ್ಕೆ ಆಗದೇ ಇರತಕ್ಕದ್ದು. ಈ ಬಾಬ್ತಿಗೆ ಖರ್ಚು ಮಾಡಿರುವುದು ಒಳ್ಳೆಯ ಕೆಲಸ. ಅದೇರೀತಿಯಲ್ಲಿ ಕೆಲವು ಅನಿವಾರ್ಯವಾದ ಟೀಕೆಯನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅನಿವಾರ್ಯವಾಗಿ, ಉದಾಹರಣೆಗೆ, ಕರ್ನಾಟಕ ವಿಧಾನಪರಿಷತ್ತಿನ ಸಂಸದೀಯ ಪದಾಧಿಕಾರಿಗಳ ಉಪಯೋಗಕ್ಕೆ ವಾಹನ ಖರೀದಿಸಲು ಐದೂವರೆ ಲಕ್ಷ ರೂಪಾಯಿ, ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಗೆ ಐದೂವರೆ ಲಕ್ಷ, ವಿರೋಧ ಪಕ್ಷದ ನಾಯಕರಿಗೆ ಹೊಸ ಕಾರು ಖರೀದಿಸುವುದಕ್ಕೆ ಐದೂವರೆ ಲಕ್ಷ ರೂಪಾಯಿ ಮತ್ತು ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಚೇತರ ಡೆಸ್ಕ್‌ಟಾಪ್ ಕಂಪ್ಯೂಟರ್ ಖರೀದಿಸಲು ಒಂದು ಕೋಟಿ ತೊಂಬತ್ತೈದು ಲಕ್ಷ ರೂಪಾಯಿಕೊಟ್ಟಿದ್ದಾರೆ. ಮತ್ತು ಶಾಸಕರ ಭವನದಲ್ಲಿ ಸೋಲಾರ್ ವ್ಯವಸ್ಥೆ ಇಂಥಾದ್ದೆಲ್ಲ ಕೊಟ್ಟಿದ್ದಾರೆ. ಇದನ್ನೆಲ್ಲ ವಿರೋಧ ಮಾಡುವುದಕ್ಕೆ ಹೋಗದಿದ್ದರೂ ಕೂಡ ಕೆಲವು ಅನಿವಾರ್ಯವಾಗಿರತಕ್ಕಂಥ ವಿಚಾರಗಳು ಎನ್ನುವುದನ್ನು ನಾನು ಸಹಿತ ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳಿಂದ ನಮಗೆ ನಿರಾಸೆಯಾಗಿರತಕ್ಕದ್ದು ಏನೆಂದರೆ, ಬಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರ ಈ ಬಗ್ಗೆ ಯೋಚನೆ ಮಾಡಿರಲಿಲ್ಲವೇ? ಇದು ಒಂದು ಕೆಟ್ಟ ಸಂಪ್ರದಾಯವಲ್ಲವೆ? ಈಗ ಮೂರೂವರೆ ಪರ್ಸೆಂಟ್ ಮಾತ್ರ ಬಜೆಟ್‌ನಲ್ಲಿ ಸಪ್ಲಿಮೆಂಟರಿ ಬಜೆಟ್ ಎಂದು ತಾವು ಹೇಳುತ್ತಿದ್ದೀರಿ. ನಾವು ಕೂಡ 4 ಪರ್ಸೆಂಟ್, 5 ಪರ್ಸೆಂಟ್ ವರೆಗೆ ಮತ್ತು ಅನೇಕ ಸಂದರ್ಭದಲ್ಲಿ 6 ಪರ್ಸೆಂಟ್ ವರೆಗೂ ಸಪ್ಲಿಮೆಂಟರಿ ಬಜೆಟ್‌ನ್ನು ಮಂಡಿಸಿರುವುದನ್ನು ನಾವು ನೋಡಿದ್ದೇವೆ. ಆದರೆ ಪ್ರಥಮವರ್ಷದಲ್ಲಿ ತಾವು ಇದನ್ನು ಮಾಡಿದ್ದೀರಿ. ತಾವು ಅಧಿಕಾರಕ್ಕೆ ಬಂದಿದ್ದು ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿ. ಮಾರ್ಚ್‌ನಲ್ಲಿ ತಾವು ಬಜೆಟ್ ಮಂಡನೆ ಮಾಡಿದ್ದೀರಿ. ಈ ನಾಲ್ಕು ತಿಂಗಳ ಅವಧಿಯಲ್ಲಿ ನೀವು ಯೋಚನೆ ಮಾಡುವುದಕ್ಕೆ ಆಗಿರಲಿಲ್ಲವೆ? ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದರು? ನಾವು ಭ್ರಷ್ಟಾಚಾರದ ಮೇಲೆ ಧರ್ಮಯುದ್ಧವನ್ನು ಮಾಡುತ್ತೇವೆ, ಧರ್ಮಯುದ್ಧವನ್ನು ನಾವು ಸಾರಿದ್ದೇವೆ ಎಂದು ಹೇಳಿದರು. ಮತ್ತು ನಮ್ಮ ಸರ್ಕಾರದಲ್ಲಿ ಮಂತ್ರಿಗಳು ವಿದೇಶಗಳಿಗೆ ಹೋಗುವುದಿಲ್ಲ, ಹಿಂದಿನ ಸರ್ಕಾರದಲ್ಲಿ ಇದ್ದಂಥ ಮಂತ್ರಿಗಳೆಲ್ಲ ಮೋಜನ್ನು ಮಾಡುವುದಕ್ಕೆ ವಿದೇಶಕ್ಕೆ ಹೋಗಿದ್ದರು. ನನ್ನ ಸರ್ಕಾರದಲ್ಲಿ ಯಾರೂ ಸಹಿತ ಮಂತ್ರಿಗಳು ಸರ್ಕಾರದ ವೆಚ್ಚದಲ್ಲಿ

ವಿದೇಶಕ್ಕೆ ಹೋಗುವುದಿಲ್ಲ! ಎನ್ನತಕ್ಕಂಥ ಮಾತನ್ನು ಕೂಡ ಹೇಳಿದರು. ಈಗ ಕಾಲ ಬಂದಿದೆ, ತಮಗೆ ಇದನ್ನು ನಾವು ಕೇಳತಕ್ಕಂಥ ಒಂದು ಸಂದರ್ಭ ಇವತ್ತು ಬಂದಿದೆ. ಏಕೆಂದರೆ ತಾವು ಅಧಿಕಾರಕ್ಕೆ ಬಂದು 13 ತಿಂಗಳು ಆಗಿದೆ. ಒಂದು ಪ್ಲಾನ್ ಇನ್ನೊಂದು ನಾನ್ ಪ್ಲಾನ್ ಗವರ್ನ್‌ಮೆಂಟ್ ಎಕ್ಸಪೆಂಡಿಚರ್‌ನ್ನು ಕಡಿಮೆ ಮಾಡುವುದಕ್ಕೆ ತಾವು ತೆಗೆದುಕೊಂಡಿರತಕ್ಕಂಥ ಕ್ರಮಗಳು ಏನು ಎನ್ನುವುದನ್ನು ಈ ಸದನಕ್ಕೆ, ರಾಜ್ಯದ ಜನತೆಗೆ ತಾವು ತಿಳಿಸಬೇಕಾಗುತ್ತದೆ. ಈಗ ಬಜೆಟ್‌ನ ಮೇಜರ್ ಡಿವಿಯೇಶನ್ ಯಾವುದೂ ಇಲ್ಲದೇ ಇರಬಹುದು. ಆದರೆ ಪ್ಲಾನಿಂಗ್ ಸರಿಯಾಗಿ ಮಾಡಿಲ್ಲ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಈಗ ನಾನು ರಾಜಕೀಯವಾಗಿ ಟೀಕೆ ಮಾಡುವುದಕ್ಕೆ ಬಯಸುವುದಿಲ್ಲ. ಏಕೆಂದರೆ ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಹೇಳಿಬಿಟ್ಟಿದ್ದೀರಿ. ಬಳ್ಳಾರಿ ಜಿಲ್ಲೆಯ ಜನ ಕಾದುಕೊಂಡಿದ್ದಾರೆ. ಮೂರೂವರೆ ಸಾವಿರ ಕೋಟಿ ರೂಪಾಯಿಗಳ ಪ್ಯಾಕೇಜ್ ಪ್ರೋಗ್ರಾಮ್‌ಗೆ ಅವರು ತಮಗಾಗಿ ಕಾದಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಪೂರಕ ಬಜೆಟ್‌ನಲ್ಲಿ ಹೇಳಿರತಕ್ಕಂಥ ವಿಚಾರ.

"......ಸರ್ಕಾರವು ಉತ್ತರ ವಿಭಾಗದಲ್ಲಿ ಈ ದಿಸೆಯಲ್ಲಿ ಒಟ್ಟಾರೆ 76 ಕೋಟಿ ರೂಪಾಯಿಗಳ ಹೆಚ್ಚುವರಿ ಅನುದಾನದ ಅಗತ್ಯವಿರುತ್ತದೆ. ಏಳೂವರೆ ಕೋಟಿ ರೂಪಾಯಿಗಳು ದಕ್ಷಿಣ ಮತ್ತು ಉತ್ತರ ಭಾಗಗಳಕಾಮಗಾರಿಗಳಿಗೆ ಬೇಕಿದ್ದು, ಈಗ 170 ಲಕ್ಷ ರೂಪಾಯಿಗಳನ್ನು ಬಳ್ಳಾರಿ ಜಿಲ್ಲೆಯ ವಿಶೇಷ ಪ್ಯಾಕೇಜ್ ಪ್ರೋಗ್ರಾಂಗೆ ವಿನಿಯೋಗಿಸಲು ಸಿಗುತ್ತದೆ." ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಈಗ ತಾವು ಬಳ್ಳಾರಿ ಜಿಲ್ಲೆಗೆ ಮೂರು ಸಾವಿರ ಕೋಟಿ ರೂಪಾಯಿಗಳ ಪ್ಯಾಕೇಜ್ ಪ್ರೋಗ್ರಾಂ ಕೊಡುತ್ತೇವೆ ಎಂದು ಹೇಳಿರುವುದು. ಆದರೆ ಅದರ ವಿವರಣೆಯನ್ನು ಎಲ್ಲೂ ಸಹಿತ ತಾವು ಇದುವರೆಗೂ ಕೊಟ್ಟಿಲ್ಲ. ಬಳ್ಳಾರಿ ಜಿಲ್ಲೆಗೆ ಮಾತ್ರ ಏಕೆ ಕೊಡುತ್ತೀರಿ? ಬೇರೆ ಜಿಲ್ಲೆಗೆ ಏಕೆ ಕೊಟ್ಟಿಲ್ಲ ಎಂದು ಹೇಳಿದಾಗ ಎಲ್ಲ ಜಿಲ್ಲೆಗಳಿಗೂ ವಿಶೇಷವಾದ ಕಾರ್ಯಕ್ರಮ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಸಹಿತ ತಾವು ಹೇಳಿದ್ದೀರಿ. ಮುಂದಿನ ಬಜೆಟ್ ನಲ್ಲಿ ತಾವು ಇದನ್ನು ಮಾಡುತ್ತೀರಿ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೂ ಸಹಿತ ಯಾವ ಜಿಲ್ಲೆಗೂ ತಾವು ವಿಶೇಷವಾಗಿ ಇದನ್ನು ಮಾಡಿಲ್ಲ. ಈಗ ಮೂರು ಸಾವಿರ ಕೋಟಿ ರೂಪಾಯಿಗಳನ್ನು ನೀವು ಕೊಡುವಂಥವರು 12 ತಿಂಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ನೀವು ಮಾಡಿರತಕ್ಕಂಥ ಸಹಾಯ ಏನು? ಎಲ್ಲಿ ಹಣವನ್ನು ಇಟ್ಟುಕೊಂಡಿದ್ದೀರಿ? ಏಕೆ ಈ ರೀತಿ ಪೊಳ್ಳು ಘೋಷಣೆಗಳನ್ನು ಮತ್ತು ನಂಬಿಕೆಗಳನ್ನು ಹುಟ್ಟಿಸತಕ್ಕಂಥ, ಕೆಲಸವನ್ನು ಮಾಡುತ್ತೀರಿ? ಇದನ್ನು ನಾನು ಕೇಳಲೇಬೇಕಾಗುತ್ತದೆ. ಅದೇ ರೀತಿಯಲ್ಲಿ ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಬಹಳ ತಡವಾಗಿ ಕೇಂದ್ರ ಸರ್ಕಾರಕ್ಕೆ ಪ್ರಕೃತಿ ವಿಕೋಪ ನಿಧಿಗೆ 350 ಕೋಟಿ ರೂ.ಗಳ ಹಣ ಬೇಕು ಎಂದು ಕೇಳಿದ್ದಾರೆ. ಅಧಿಕಾರಿಗಳು ಇದರ ಬಗ್ಗೆ ಯೋಚನೆ ಮಾಡುವುದಿಲ್ಲವೇನು? 2000-01ರಲ್ಲಿ ಕೇಂದ್ರ ಸರ್ಕಾರ ಅನುದಾಗಿ 26

ಕೋಟಿಯನ್ನು 79 ಕೋಟಿಯಲ್ಲಿ ಕೊಟ್ಟಿದ್ದಾರೆ. ನಮ್ಮದ್ದು 17.05 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗುತ್ತದೆ. ಇದನ್ನು ಪೂರಕ ಬಜೆಟ್‌ನಲ್ಲಿ ತಂದಿದ್ದೇವೆ ಎಂದು ಹೇಳಿದ್ದೀರಿ. ಈಗ 11ನೇ ಫೈನಾನ್ಸ್ ಕಮೀಷನ್ ಆದಮೇಲೆ ಅವರು ಕ್ಲಿಯರ್ ಆಗಿ ಈ ಬಗ್ಗೆ ಡಿಫೈನ್ ಮಾಡಿಬಿಟ್ಟಿದ್ದಾರೆ- only special cases, may be for political reasons or some other reasons- ಅವರು ಕೊಟ್ಟುಕೊಂಡು ಹೋಗುತ್ತಾರೆ. ಕೆಲವರಿಗೆ ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ಕೇಂದ್ರಸರ್ಕಾರ ಇದುವರೆಗೂ ಏನೂ ಕೊಟ್ಟಿಲ್ಲ. ಇದು ನಮಗೆ ಗೊತ್ತಿದೆ. ಕೊಡಬೇಕು ಎಂದು ನಾವು ಆಗ್ರಹ ಮಾಡುತ್ತಿದ್ದೇವೆ. ಈ ಕನಿಷ್ಟ ಜ್ಞಾನ ಸಹಿತ ಅಧಿಕಾರಿಗಳಿಗೆ ಇರಲಿಲ್ಲವೇ? ಏಕೆ ಇದನ್ನು ಮಾಡಿರಲಿಲ್ಲ? ಆಯಿತು. ಇದನ್ನು ಮಾಡಿದ ಮೇಲೆ ನಮ್ಮ ಸರ್ಕಾರ ಇದ್ದಾಗ ಹೊಸ ಜಿಲ್ಲೆಗಳನ್ನು ಮಾಡಿದ್ದೆವು. ತಾವು ಸಹಿತ ಗದುಗಿಗೆ ಹೋದಂಥ ಸಂದರ್ಭದಲ್ಲಿ ಹಿಂದಿನ ಸರ್ಕಾರದ ಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಒಳ್ಳೆಯ ಕೆಲಸ ಮಾಡಿದರು ಎಂದು ತಾವು ಹೇಳಿದ್ದೀರಿ. ನಾವು ಹೊಸ ಏಳು ಜಿಲ್ಲೆಗಳನ್ನು ಯಾವುದೇ ಸಮಸ್ಯೆ ಇಲ್ಲದೆ ಬಗೆಹರಿಸಿದೆವು. ಈಗ ಅವರಿಗೆ ವಿಶೇಷವಾದ ಒಂದು ಕಾರ್ಯಕ್ರಮ ಆಗಲೇಬೇಕಾಗುತ್ತದೆ. ಅದು ಚಾಮರಾಜನಗರ ಜಿಲ್ಲೆ ಇರಬಹುದು, ಕೊಪ್ಪಳ ಜಿಲ್ಲೆ ಇರಬಹುದು, ದಾವಣಗೆರೆ ಜಿಲ್ಲೆ ಇರಬಹುದು ಅಥವಾ ಬಾಗಲಕೋಟೆ ಜಿಲ್ಲೆ ಇರಬಹುದು, ಈ ಏಳು ಜಿಲ್ಲೆಗಳಿಗೂ ಸಹಿತ ಈ ಒಂದು ವರ್ಷದಲ್ಲಿ ಇದುವರೆಗೂ ಸಹತಿ ವಿಶೇಷವಾದ ಕಾರ್ಯಕ್ರಮವನ್ನು ನೀವು ಹಾಕಿಕೊಂಡಿಲ್ಲ. ಈಗಾಗಲೇ ತಾವು ಹೋಗಿ ನೋಡಿದ್ದೀರಿ. ಜಿಲ್ಲಾಧಿಕಾರಿಗಳ ಕಚೇರಿ ಅಸಿಸ್ಟೆಂಟ್ ಕಮೀಷನರ್ ಅವರ ಕಚೇರಿಯಲ್ಲಿ ಕೆಲಸ ಮಾಡುತ್ತಿವೆ. ಈಗ ಹೊಸ ಜಿಲ್ಲೆಗಳಿಗೆ ನಾವು ಎಲ್ಲಾ ಸೌಲಭ್ಯಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ, ಹೊರತು ಕೊಟ್ಟಿದ್ದು ಏನು? ತಾವು ಹೇಳಿರತಕ್ಕಂಥಾದ್ದು ಹೊಸ ಜಿಲ್ಲೆಗಳಿಗೆ ಪೆಟ್ರೋಲ್, ಬಾಡಿಗೆ, ಕಚೇರಿ ವೆಚ್ಚ ಇದನ್ನು ಮಾತ್ರ ಈ ಅಭಿಯಾಚನೆಯಲ್ಲಿ ಸೇರಿಸಿದ್ದೀರಿ ಹೊರತು ಹೊಸದಾಗಿ ಈ ಜಿಲ್ಲೆಗಳಿಗೆ ಹುಡ್ಕೋದಿಂದ ಸಾಲ ತೆಗೆದುಕೊಂಡು ಮಾಡುತ್ತೇವೆ ಎನ್ನತಕ್ಕಂಥ ಭರವಸೆ ಕೊಟ್ಟಿದ್ದೀರಾ? ಅದನ್ನು ಸಹಿತ ತಾವು ಮಾಡುವುದಕ್ಕೆ ಹೋಗಿಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಈ ಸಪ್ಲಿಮೆಂಟರಿ ಬಜೆಟ್‌ನ್ನು ಮಾಡತಕ್ಕಂಥ ಸಂದರ್ಭದಲ್ಲಿ ತಮಗೆ ಸಿಕ್ಕಂಥ ಆರುತ ತಿಂಗಳ ಅವಧಿಯಲ್ಲಿ ಸರಿಯಾದ ರೀತಿಯಲ್ಲಿ ತಾವು ಪ್ಲಾನಿಂಗ್ ಅನ್ನು ಮಾಡುವುದಕ್ಕೆ ಹೋಗಿಲ್ಲ. ಮತ್ತು ಇದುವರೆಗೂ ಎಕ್ಸ್‌ಪೆಂಡಿಚರ್- ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನ್ನು ಕಡಿತ ಮಾಡುವುದಕ್ಕೆ ಸಹಿತ ಸರ್ಕಾರದವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ.

1.10 ಪಿ.ಎಂ.

ಆದರೆ, ಹಿಂದಿನ ಸರ್ಕಾರದ ಬಗ್ಗೆ ನೀವು ಬಹಳ ದೊಡ್ಡದೊಡ್ಡದಾಗಿ ಭಾಷಣ ಮಾಡಿ ಟೀಕೆಗಳನ್ನು ಮಾಡಿದ್ದೀರಿ. ತಾವು ಮಾಡಿರತಕ್ಕ ಎಲ್ಲಾ ಹೇಳಿಕೆಗಳನ್ನು ಈ ಸಂದರ್ಭದಲ್ಲಿ

ಹೇಳುವ್ವುದಕ್ಕೆ ಹೋಗುವ್ವುದಿಲ್ಲ. ಆದರೆ, ತಾವೇ ಇವ್ವುಗಳನ್ನೆಲ್ಲಾ ಒಂದು ಸಾರಿ ಯೋಚನೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ಭ್ರಷ್ಟಾಚಾರದ ವಿರುದ್ಧ ಧರ್ಮ ಯುದ್ಧ ಮತ್ತು ಆಯವ್ಯಯದ ವೆಚ್ಚದಲ್ಲಿ ಅನಗತ್ಯವಾದ ವೆಚ್ಚಗಳನ್ನು ಕಡಿತ ಮಾಡತಕ್ಕಂಥಾದ್ದು. ಇದು ಯಾವುದು ಆಗಿದೆ ಎಂಬುದನ್ನು ದಯವಿಟ್ಟು ತಾವ್ವು, ನನಗೆ ಹೇಳಬೇಕು. ಮತ್ತೆ ತಾವು ಬಹಳ ದೊಡ್ಡದಾಗಿ ಪ್ರಚಾರವನ್ನು ತೆಗೆದುಕೊಂಡಿದ್ದೀರಿ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಮೊನ್ನೆ ದೆಹಲಿಗೆ ಹೋಗಿದ್ದೆ. ಈಗ ಕರ್ನಾಟಕದಲ್ಲಿ ಬಹಳಷ್ಟು ಪತ್ರಿಕೆಗಳು ಇವೆ. ಮತ್ತು ನಮ್ಮ ಕನ್ನಡದ ಪತ್ರಿಕೆಗಳೂ ಇವೆ. ಹಾಗೂ ಕರ್ನಾಟಕದಲ್ಲಿ ಪ್ರಕಟವಾಗತಕ್ಕಂಥ ಇಂಗ್ಲೀಷ್ ಪತ್ರಿಕೆಗಳೂ ಸಹ ಇವೆ. ಇವುಗಳಿಗೆಲ್ಲಾ ತಾವು ಪ್ರಕಟಣೆಯನ್ನು ಕೊಡಿ ಜಾಹಿರಾತುಗಳನ್ನು ಕೊಡಿ. ನಮ್ಮದೇನೂ ತಕರಾರು ಇಲ್ಲ. ಆದರೆ, ನಾನು ಮೊನ್ನೆ ಕರ್ನಾಟಕ ಭವನದಲ್ಲಿ ಕುಳಿತಿದ್ದಾಗ, ಕರ್ನಾಟಕದಲ್ಲಿ ಪ್ರಕಟಣೆಯಾಗದೇ ಇರತಕ್ಕಂಥ ಪಯನಿಯರ್ ಎಂಬ ಒಂದು ಇಂಗ್ಲೀಷ್ ಪೇಪರ್ ನೋಡಿದೆ. ಇದು ಎಲ್ಲಿ ಪ್ರಕಟವಾಗುತ್ತದೋ, ಯಾರು ನೋಡುತ್ತಾರೊ ಗೊತ್ತಿಲ್ಲ. ಎಲ್ಲಾ ಇಲಾಖೆಯವರು ಒಂದೊಂದು ಫುಲ್ ಪೇಜ್ ಪ್ರಕಟಣೆ, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಭಾವಚಿತ್ರ ಮತ್ತು ಸಂಬಂಧಪಟ್ಟ ಮಂತ್ರಿಗಳ ಫೋಟೋ ಜೊತೆಗೆ ಅಧಿಕಾರಿಗಳ ಫೋಟೋ ಕೂಡ ಪ್ರಕಟವಾಗಿರುತ್ತವೆ. ಮತ್ತೆ ನೀವು ಒಂದು ವರ್ಷದಲ್ಲಿ ಏನೂ ಸಾಧನೆ ಮಾಡಿರುವುದಿಲ್ಲವೆಂದೂ ಹೇಳಿಕೊಂಡಿದ್ದೀರಿ. ಇಷ್ಟೊಂದು ಜಾಹಿರಾತುಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಬರೀ ಭರವಸೆಗಳು. ಆಗಿರತಕ್ಕ ಕೆಲಸಗಳು ಏನೂ ಇಲ್ಲ. ಡಾ ರಾಜ್ ಕುಮಾರ್ ರವರನ್ನು ಬಿಡುಗಡೆ ಮಾಡಿಕೊಂಡು ಬಂದು ಕರ್ನಾಟಕಕ್ಕೆ ಅರ್ಪಣೆ ಮಾಡಿದ್ದೇವೆಂದು ಹೇಳಿದ್ದೀರಿ. ಆಯಿತು, ಅದನ್ನು ಒಪ್ಪೋಣ, ನೀವು ಅವರನ್ನು ಅರ್ಪಣೆ ಮಾಡಿದ್ದೀರೋ ಅಥವಾ ಅವರು ಬಂದಿದ್ದಾರೋ. ಇದನ್ನು ನೀವು ಒಂದು ಸಾಧನೆ ಎಂದ ಹೇಳಿಕೊಳ್ಳಲಾಗುವುದಾದಲ್ಲಿ ನಮ್ಮದೇನೂ ತಕರಾರು ಇಲ್ಲ. ಮತ್ತೆ ನಿನ್ನೆ ನೀವು ಎಂತಹ ಘಟನೆಗಳು ಬಂದರೂ ಸಹಿತ ಈ ಸರ್ಕಾರ, ಯಶಸ್ವಿಯಾಗಿ ನಿರ್ವಹಿಸುತ್ತದೆ ಎಂದು ಹೇಳಿದ್ದೀರಿ. ಅದನ್ನು ಸಾಧನೆ ಎಂದು ನೀವು ಪತ್ರಿಕೆಗಳಲ್ಲಿ ಜಾಹಿರಾತು ಕೊಡುತ್ತಾ ಇದ್ದರೆ ನಮ್ಮದೇನೂ ತಕರಾರು ಇಲ್ಲ. ಯಾವ ಪುರುಷಾರ್ಥ ಸಾಧನೆಗೋಸ್ಕರ, ಹೊರಗಡೆಯ ಪತ್ರಿಕೆಗಳಿಗೆ ಈ ಜಾಹಿರಾತುಗಳನ್ನು ಕೊಟ್ಟಿದ್ದೀರೋ ನನಗಂತೂ ಅರ್ಥವಾಗುತ್ತಾ ಇಲ್ಲ. ನಾನು ಇದೊಂದೇ ಅಲ್ಲ ಹೇಳತಕ್ಕಂಥಾದ್ದು. ಎಕ್ಸ್‌ಪೆಂಡೀಚರನ್ನು ಕಟ್ ಮಾಡಲಿಕ್ಕೆ ಸರ್ಕಾರದ ಆಡಳಿತದಲ್ಲಿ ಬಿಗಿ ತರುತ್ತೇವೆ, ತಹಶೀಲ್ದಾರ್ ಮಟ್ಟದಲ್ಲಿ, ಅಸಿಟೆಂಟ್ ಕಮಿಷನರ್ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬಿಗಿ ತರುತ್ತೇವೆಂದು ಹೇಳಿದ್ದೀರಿ. ಹಾವೇರಿಯ ಜಿಲ್ಲಾಧಿಕಾರಿಗಳ ಬಗ್ಗೆ ಒಂದು ವಿಶೇಷ ಚರ್ಚೆಗೆ ಸಮಯ ಕೊಡಬೇಕೆಂದು ನಾನು ಕೇಳಿದ್ದೇನೆ. ಈ ಸರ್ಕಾರದಲ್ಲಿ ಭ್ರಷ್ಟಾಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರು. ರಾಜಕೀಯದಲ್ಲಿರುವಂತಹ ಭ್ರಷ್ಟಾಚಾರವನ್ನು

ತಡೆಯುವುದಕ್ಕೆ ಅವರೊಬ್ಬರು ಹೊಣೆಗಾರರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಚುನಾವಣಾ ಪದ್ಧತಿ ಬದಲಾವಣೆಯಾಗಬೇಕು, ಅವೆಲ್ಲಾ ಮಾಡೋಣ. ಆದರೆ, ತಾವು ಆಡಳಿತದಲ್ಲಿರುವಂತಹ ಭ್ರಷ್ಟಾಚಾರವನ್ನು ತೆಗೆಯುತ್ತೇವೆಂದು ಘೋಷಣೆ ಮಾಡಿದ್ದೀರಿ. ಕುಡಿಯುವ ನೀರಿನ ಬಾವಿಗಳನ್ನು ಕೊಡತಕ್ಕ ವಿಚಾರದಲ್ಲಿ ಮಾತನಾಡಲು ಈ ಸದನದಲ್ಲಿ ನನಗೆ ಅವಕಾಶ ಮಾಡಿಕೊಡಿ. ಈ ವಿಷಯದಲ್ಲಿ ನಾನು ಹೇಳಬೇಕಾಗಿದೆ. ಯಾವ ರೀತಿ ಹಣ ದುರುಪಯೋಗವಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಈ ವಿಷಯವನ್ನು ಸರ್ಕಾರ ಬಹಳ ತೀವ್ರವಾಗಿ ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ಪೂರಕ ಬಜೆಟ್ ನಿಂದ ಹೊಸದಾಗಿ ನೀವು ರಿಸೋರ್ಸ್ ಮೊಬಲೈಸೇಷನ್‌ಗೆ ತೆಗೆದುಕೊಂಡಿರತಕ್ಕ ಕ್ರಮಗಳೇನು? ತಾವು ಒಂದು ಕಡೆ ಹೇಳಿದ್ದೀರಿ. 15 ಪರ್ಸೆಂಟ್‌ನಷ್ಟು ಎಕ್ಸೈಸ್ ರೆವಿನ್ಯೂನಲ್ಲಿ ಜಾಸ್ತಿಯಾಗಿದೆ ಎನ್ನುವ ಮಾತನ್ನು ಹೇಳಿದ್ದೀರಿ. ಅದು 15 ಪರ್ಸೆಂಟ್ ಜಾಸ್ತಿಯಾಗಿದೆಯೋ, 10 ಪರ್ಸೆಂಟ್ ಜಾಸ್ತಿಯಾಗಿದೆಯೋ ಮುಂದಿನ ಮಾರ್ಚ್‌ನಲ್ಲಿ ನಮಗೆ ಗೊತ್ತಾಗುತ್ತದೆ. ಇದು 15 ಅಲ್ಲ 20 ಪರ್ಸೆಂಟ್ ಆಗಬೇಕೆಂಬುದೇ ನಮ್ಮ ಆಸೆ. ಆದರೆ, ಬೇರೆ ರಿಸೋರ್ಸ್ ಮೊಬಲೈಸೇಷನ್ ಮಾಡಿಕೊಳ್ಳುವುದಕ್ಕೆ ತಾವೇನು ಮಾಡಿದ್ದೀರಿ? ತಾವು ಜನಗಳ ಮೆಚ್ಚುಗೆಗಳಿಸುವುದಕ್ಕೆ ಬಹುಶಃ ಪ್ಲಾನ್ ಸೈಜನ್ನು ಏಳು ಸಾವಿರದ ಇನ್ನೂರು ಕೋಟಿ ರೂಪಾಯಿ ಮಾಡಿದ್ದೀರೆಂದು ನನಗೆ ಜ್ಞಾಪಕವಿದೆ. ನೀವು ಪ್ಲಾನ್ ಸೈಜನ್ನು ಅನಿವಾರ್ಯವಾಗಿ ಕಟ್ ಮಾಡಲೇಬೇಕಾಗುತ್ತದೆ. ಇಲ್ಲದೇಹೋದರೆ ಈ ಹಣವನ್ನು ಈ 670 ಕೋಟಿ ರೂಪಾಯಿಗಳಿಗೆ ಎಲ್ಲಿಂದ ಸೇರಿಸಿಕೊಳ್ಳುತ್ತೀರಿ? ನೀವು ಪ್ಲಾನ್ ಸೈಜನ್ನು ಕಟ್ ಮಾಡಿ, without mentioning and taking action on the extra resource mobilisation ಅಥವಾ ನಾನಾ ಪ್ಲಾನ್ ಎಕ್ಸ್‌ಪೆಂಡೀಚರನ್ನು ನೀವು ಕಟ್ ಮಾಡದೇ, ಜನಗಳಿಗೆ ಕೊಟ್ಟಿರತಕ್ಕ ಭರವಸೆಗಳನ್ನು ಹೇಗೆ ಈಡೇರಿಸುತ್ತೀರಿ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ತಿಳಿಸಬೇಕೆಂದು ಒತ್ತಾಯವನ್ನೂ ಸಹಿತ ಮಾಡುತ್ತೇನೆ. ಮತ್ತೊಂದು ತಾವು ಹೇಳಬೇಕು. ನೀವು ಎಷ್ಟು ಸಾರಿ ಓವರ್ ಡ್ರಾಫ್ಟ್, ಎಷ್ಟು ಸಾರಿ ವೇಸ್ ಅಂಡ್ ಮೀನ್ಸ್ ಮೂಲಕ ದುಡ್ಡನ್ನು ತೆಗೆದುಕೊಂಡಿದ್ದೀರಿ. ಎಷ್ಟುಸಾರಿ ಟ್ರೆಜರಿ ಬ್ಯಾನ್ ಹಾಕಿದ್ದೀರಿ ಎಂಬುದನ್ನೂ ಸಹಿತ ಹೇಳಬೇಕಾಗುತ್ತದೆ. ಏಕೆಂದರೆ, ಅನೇಕ ಜನ ನಮಗೆ ಬಂದು ಹೇಳಿದ್ದಾರೆ. ನಮಗೆ ದುಡ್ಡು ಬಂದಿಲ್ಲ, ದುಡ್ಡು ಬಂದಿಲ್ಲ ಎಂಬುದನ್ನು ಹೇಳಿದ್ದಾರೆ. ಆದ್ದರಿಂದ, ಈ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಸರ್ಕಾರದಲ್ಲಿ ಹಣಕಾಸಿನ ಕೊರತೆ ಇದೆಯೋ ಇಲ್ಲವೋ, ಕಳೆದ 11 ತಿಂಗಳಲ್ಲಿ ತಾವು ಮ್ಯಾನೇಜ್ ಮಾಡಿರುವುದು ಹೇಗೆ ಎನ್ನುವುದನ್ನು ತಿಳಿಸಬೇಕು. ಏಕೆಂದರೆ, ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೇಂದ್ರಸರ್ಕಾರದ ಸಹಕಾರದಿಂದ, ನಬಾರ್ಡ್‌ನಿಂದ ಬರತಕ್ಕ ಕೆಲಸಗಳು ಸ್ವಲ್ಪ ಮಟ್ಟಿಗೆ ಆಗುತ್ತಾ ಇವೆ. ಹಿಂದಿನ ಸರ್ಕಾರ ಬಹಳ ಮಂದಗತಿಯಿಂದ ಮಾಡುತ್ತಾ ಇತ್ತು, ನಾವು ಬಹಳ ವೇಗವಾಗಿ ಮಾಡುತ್ತಾ ಇದ್ದೇವೆಂದು

ಹೇಳುತ್ತಾ ಇದ್ದೀರಿ. ಸಂತೋಷ. ಅಲ್ಲಿರತಕ್ಕ ನ್ಯೂನತೆಗಳನ್ನೆಲ್ಲಾ ತೆಗೆದು ಆದಷ್ಟು ಹೆಚ್ಚಿಗೆ ನಬಾರ್ಡ್‌ನಿಂದ ಹಣವನ್ನು ತೆಗೆದುಕೊಂಡು ಬಂದು ರೂರಲ್ ರೋಡ್ಸ್‌ಗಳನ್ನು, ಇನ್‌ಫ್ರಾಸ್ಟ್ರಕ್ಚರನ್ನು ಡೆವಲಪ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ನಬಾರ್ಡ್‌ನಿಂದ ಇನ್ನೂ ಹೆಚ್ಚಿಗೆ ಹಣ ತೆಗೆದುಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಆ ವಿಚಾರದಲ್ಲಿ ನನಗೆ ಸಂತೋಷ ಇದೆ. ಈ ನಬಾರ್ಡ್ ಕೆಲಸಗಳಲ್ಲಿ ಕ್ವಾಲಿಟಿ ಮೈನ್‌ಟೇನ್ ಮಾಡತಕ್ಕಂಥಾದ್ದು ಬಹಳ ಅವಶ್ಯಕ ಇದೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಿ. ಇದು ಒಂದು ಕೆಲಸ ಆಗುತ್ತಾ ಇದೆ. ನಮ್ಮ ಸರ್ಕಾರ ಇದ್ದ ಸಂದರ್ಭದಲ್ಲಿ ಬೆಂಗಳೂರು ಸಿಟಿಯಲ್ಲಿ ಬಾಂಡ್ ಯೋಜನೆಯಿಂದ 120 ಕೋಟಿ ರೂ.ಗಳಷ್ಟು ಹಣ ಸಂಗ್ರಹಣೆ ಮಾಡಿದರು. ಆ 120 ಕೋಟಿ ರೂಪಾಯಿಗಳ ಬಾಂಡ್ ಯೋಜನೆ ಒಂದು ಆಗುತ್ತಾ ಇದೆ. ಆಮೇಲೆ ಕೃಷ್ಣಾ ಜಲಭಾಗ್ಯ ನಿಗಮದಿಂದ ಸುಮಾರು 5-6 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ತೆಗೆದುಕೊಂಡಿದ್ದೇವೆ. ಆ ಸಾಲದಲ್ಲಿ ಯು.ಕೆ.ಪಿ. ಕೆಲಸ ನಡೆಯುತ್ತಾ ಇದೆ. ಅದನ್ನು ಬಿಟ್ಟು, ಕೇಂದ್ರ ಸರ್ಕಾರದಿಂದ ಇ.ಎ.ಎಸ್. ಮತ್ತು ಜೆ.ಆರ್.ವೈ.ಸ್ಕೀಮ್‌ನಿಂದ ಬರತಕ್ಕ ದುಡ್ಡನ್ನು ಬಿಟ್ಟು, ಇನ್ನು ಯಾವ ಅಭಿವೃದ್ಧಿ ಕೆಲಸಗಳು ಆಗುತ್ತಾ ಇವೆ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ ಮತ್ತು ಈ ರಾಜ್ಯದ ಜನತೆಗೂ ಅರ್ಥವಾಗುತ್ತಾ ಇಲ್ಲ. ಇವತ್ತು ಟ್ರಜರಿ ಬಹಳ ಚೆನ್ನಾಗಿದೆ, ಟ್ರಜರಿಯಲ್ಲಿ ನಮಗೆ ದುಡ್ಡು ಇದೆ, ನಾವೆಲ್ಲಾ ಕೂಡಿಸಿಕೊಂಡಿದ್ದೇವೆಂದು ತಾವೇನು ಹೇಳುತ್ತಿದ್ದೀರಿ. ಇದು ಅರ್ಥಹೀನವಾಗಿರತಕ್ಕ ಮಾತು ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮಲ್ಲಿ ಆರ್ಥಿಕ ಶಿಸ್ತು ತರುವುದಕ್ಕೂ ನೀವು ಪ್ರಯತ್ನ ಮಾಡಿಲ್ಲ. ತಾವೇನು ಬಜೆಟ್‌ನಲ್ಲಿ ಸರ್ಕಾರದ ಕೆಲವು ಕಾರ್ಯಕ್ರಮಗಳನ್ನು ಹೇಳಿದ್ದೀರಿ. ಆ ಬಜೆಟ್ಟನ್ನು ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಆದರೆ, ಬಜೆಟ್‌ನ ಯೋಜನೆಗಳೇನಿವೆ, ಸ್ತ್ರೀಶಕ್ತಿಯಿಂದ ಹಿಡಿದು ಎಲ್ಲಾ ಕಾರ್ಯಕ್ರಮಗಳು, ಯಾವ ಕ್ಷೇತ್ರದಲ್ಲೂ ಸಹಿತ ಇದುವರೆಗೂ ಕಾರ್ಯಾಚರಣೆ ಆಗಿಲ್ಲ. ನಗರ ಪ್ರದೇಶಗಳಿಗೂ ಸಹಿತ ಆಗಿಲ್ಲ.

ಶ್ರೀಮತಿ ಮೋಟಮ್ಮ:— ಸ್ತ್ರೀಶಕ್ತಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ರಾಯಚೂರಿನಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆಯಲ್ಲ. ಕೆಲವು ಜಿಲ್ಲೆಗಳಲ್ಲಿ ಮಾಡುವುದಕ್ಕಾಗಿಲ್ಲ, ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಧ್ಯಕ್ಷರೇ, ನಾನು ಸ್ತ್ರೀಶಕ್ತಿ ಮತ್ತು ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬೆಳಿಗ್ಗೆಯಿಂದ ಬಹಳ ಸಿಟ್ಟಿನಲ್ಲಿ ಇರುವಹಾಗೆ ಕಾಣುತ್ತದೆ. ಆದರೆ, ತಾವು ಸ್ತ್ರೀಶಕ್ತಿ ಕಾರ್ಯಕ್ರಮಕ್ಕೆ ಈ ವರ್ಷ ಜಿಲ್ಲಾವಾರು ಎಷ್ಟು ಹಣವನ್ನು ಕೊಡುತ್ತಿದ್ದೀರಿ ಎನ್ನುವುದನ್ನು ತಿಳಿಸಬೇಕು. ನಿಮಗೆ ಕೊಡುವುದಕ್ಕೆ ದುಡ್ಡು ಇಲ್ಲ. ಒಂದು ಘೋಷಣೆ ಮಾಡಿದರು. ನಾವೆಲ್ಲಾ

ಶಾಸಕರಾದ ತಕ್ಷಣವೇ ಪ್ರತಿಯೊಂದು ಕ್ಷೇತ್ರದಲ್ಲೂ ಸಹಿತ, ಒಂದೊಂದು ತಾಲ್ಲೂಕಿಗೂ ಒಂದೊಂದು ಕೋಟಿ ರೂಪಾಯಿಗಳನ್ನು ರಸ್ತೆ ಮಾಡುವುದಕ್ಕೆ ಕೊಡುತ್ತೇವೆ ಎಂಬ ಭರವಸೆಯನ್ನು ಕೊಟ್ಟಿದ್ದರು. ಸುಮಾರು 15-20 ಲಕ್ಷ ರೂಪಾಯಿಗಳ ಕೆಲಸ ಒಂದೊಂದು ಕ್ಷೇತ್ರದಲ್ಲಿ ಆಗಿದೆ. ಟೆಂಡರ್ ಕರೆದಿದ್ದಾರೆ, ಕೆಲವು ಕಡೆ ಆಗಿದೆ ಕೆಲವು ಕಡೆ ಆಗಿಲ್ಲ. ಅದನ್ನು ಬಿಟ್ಟು ಇನ್ನು ಯಾವ ಕಾರ್ಯಕ್ರಮ ಆಗಿದೆ ಎನ್ನುವುದನ್ನು ಸರ್ಕಾರ ತಿಳಿಸಬೇಕಾಗಿದೆ. ಕೇಂದ್ರ ಸರ್ಕಾರದಿಂದ ಬರತಕ್ಕ ಗ್ರಾಮೀಣಾಭಿವೃದ್ಧಿಗೆ, ಕುಡಿಯುವ ನೀರಿಗೆ, ಸಂಬಳಸಾರಿಗೆಯೊಂದನ್ನು ಬಿಟ್ಟು ಬಾಕಿ ಯಾವ ಯೋಜನೆಗಳಿಗೆ ನೀವು ಹಣವನ್ನು ಖರ್ಚುಮಾಡಿದ್ದೀರಿ ಎಂಬುದು ಈ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಗೊತ್ತಾಗಬೇಕು. ತಾವೇನು ಬಜೆಟ್‌ನಲ್ಲಿ ಹೇಳಿದ್ದೀರಿ, ಇದು ಸತ್ಯಕ್ಕೆ ದೂರವಾಗಿರತಕ್ಕ ವಿಚಾರ. ನೀವೇನು ಆಕಾಶದಲ್ಲಿ ಬುಟ್ಟಿಯನ್ನು ಹಾರಿಸುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ, ಅದು ಸಾಧ್ಯವಿಲ್ಲದೇ ಇರತಕ್ಕ ಮಾತು. ವಾಸ್ತವಿಕತೆಗೆ ಬಹಳ ದೂರ ಇರತಕ್ಕಂಥ, ಪ್ರಚಾರಕೋಸ್ಕರ ನಾವು ರಿಸೋರ್ಸ್ ಮೊಬಲೈಸ್ ಮಾಡುತ್ತೇವೆಂದು ಹೇಳಿ, ಪ್ಲಾನ್ ಸೈಜನ್ನು 7200 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದು ಈಗ670 ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಬಜೆಟನ್ನೂ ತೆಗೆದುಕೊಂಡು ಬಂದು ರಿಸೋರ್ಸ್ ಮೊಬಲೈಸೇಷನ್ ಹೇಗೆ ಮಾಡುತ್ತೇವೆಂಬ ಸಿಸ್ಟನ್ನೂ ಸಹಿತ ತೋರಿಸದೇ, ಆಡಳಿತದಲ್ಲಿ ಇದುವರೆಗೂ ಯಾವುದೇ ರೀತಿಯ ಬದಲಾವಣೆ ಆಗಿರುವುದಿಲ್ಲ. ಇದಕ್ಕೆ ನೇರವಾಗಿ ನೀವೇ ಜವಾಬ್ದಾರರು. ಯಾವುದೇ ಆಡಳಿತದಲ್ಲಿ ಬದಲಾವಣೆ ಆಗಬೇಕಾದರೂ ಸಹಿತ, ಅದಕ್ಕೆ ನೇರವಾಗಿ ತಾವೇ ಜವಾಬ್ದಾರರು. ತಾಲ್ಲೂಕು ಹಂತದಲ್ಲಿ ಮತ್ತು ಜಿಲ್ಲಾ ಹಂತದಲ್ಲಿರತಕ್ಕ ಆಡಳಿತಕ್ಕೆ ನೇರವಾಗಿ ತಾವು ಜವಾಬ್ದಾರರು. ಇವತ್ತಿನ ಸನ್ನಿವೇಶದಲ್ಲಿ ತಮ್ಮ ಶಾಸಕಾಂಗ ಪಕ್ಷದಲ್ಲೇ ಕೇಳಿ. ಆಡಳಿತದಲ್ಲಿ ಏನಾದರೂ ಬದಲಾವಣೆ ಆಗಿದೆಯೇ, ಶಿಸ್ತು ಬಂದಿದೆಯೋ, ಭ್ರಷ್ಟಾಚಾರ ಕಡಿಮೆಯಾಗಿದೆಯೇ? ಯಾವ ಹಂತದಲ್ಲೂ ಸಹಿತ ಬದಲಾವಣೆಯಾಗಿಲ್ಲ. ನಾನು ಬಹಳ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳಬೇಕಾಗಿದೆ. ಈ ಸರ್ಕಾರದಿಂದ, ಹಣಕಾಸಿನ ವಿಚಾರದಲ್ಲಿ ಜನ ಏನು ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು, ಆ ನಿರೀಕ್ಷೆಯನ್ನು ನೀವು ತಲುಪುವುದಕ್ಕೆ ಆಗಿಲ್ಲ. ವಿಶ್ವ ಬ್ಯಾಂಕಿನ ಅಧ್ಯಕ್ಷರು ಇಲ್ಲಿಗೆ ಬಂದಿದ್ದಾಗ ಸುಮಾರು ಹದಿನೈದು ಸಾವಿರ ಕೋಟಿ ರೂಪಾಯಿಗಳ ಸಾಲನ್ನು ತೆಗೆದುಕೊಳ್ಳತಕ್ಕ ಯೋಜನೆಯನ್ನು ತಯಾರು ಮಾಡಿರುವುದಾಗಿ ತಾವು ಹೇಳಿದ್ದೀರಿ. ಈ ಹದಿನೈದು ಸಾವಿರ ಕೋಟಿ ರೂಪಾಯಿ ಹಣವನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಒಪ್ಪಿಗೆಯನ್ನು ಕೊಟ್ಟಿದೆಯೇ? ತಮಗೆ ಇನ್ನು ಅಧಿಕಾರದ ಅವಧಿ ಇರುವುದು ನಾಲ್ಕು ವರ್ಷಗಳು ಮಾತ್ರ. ಇದನ್ನು ಸಹ ತಾವು ತಿಳಿಸಬೇಕಾಗುತ್ತದೆ. ಮೊನ್ನೆ ಇದರ ಬಗ್ಗೆ ಚರ್ಚೆಯಾದಂಥ ಸಂದರ್ಭದಲ್ಲಿ ಹದಿನೈದು ಸಾವಿರ ಕೋಟಿ ಸಾಲ ಬರುತ್ತದಲ್ಲ ಅದರಲ್ಲಿ ಕೊಡಲಿ ಎಂದು ಪ್ರಸ್ತಾಪವಾಯಿತು. ಯಾವ್ಯಾವ ಯೋಜನೆಗಳಿಗೆ, ಏನೇನು ಮಾಡುತ್ತೇವೆ ಎಂಬ ಬಗ್ಗೆ ತಿಳಿಸುತ್ತೇವೆಂದು

ಮುಖ್ಯಮಂತ್ರಿಯವರು ಹೇಳಿದ್ದರು. ಇದನ್ನು ಅವಶ್ಯಕವಾಗಿ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ. ಅಭಿವೃದ್ಧಿ ಕೆಲಸಗಳಿಗೆ ಹಣವು ಬಿಡುಗಡೆಯಾಗುತ್ತಿಲ್ಲ. ಬಡವರಿಗೆ 12 ಲಕ್ಷ ಮನೆಗಳನ್ನು ಐದು ವರ್ಷಗಳಲ್ಲಿ 85 ಕೋಟಿ ವೆಚ್ಚದಲ್ಲಿ ಕಟ್ಟಿಕೊಡುವ ಕಾರ್ಯಕ್ರಮವೇನಿದೆ ಇದು ಬಹಳ ಒಳ್ಳೆಯ ಕಾರ್ಯಕ್ರಮ. ಈ ಸಾಧನೆಯನ್ನು ಕರ್ನಾಟಕದ ಯಾವ ಮುಖ್ಯಮಂತ್ರಿಗಳೂ ಮಾಡಲಾಗದಿರುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದಂತೆ ಗುರಿಯನ್ನು ತಾವು ಮುಟ್ಟಿದರೆ ನಿಜವಾಗಿಯೂ ಅಭಿನಂದನಾರ್ಹರಾಗುತ್ತೀರಿ. ಆದರೆ ಕಳೆದ 12 ತಿಂಗಳುಗಳಲ್ಲಿ ಯಾವುದೇ ಮನೆಗಳು ಆಗಿಲ್ಲವೆಂಬುದು ತಮಗೆ ಗೊತ್ತಿದೆ. ಇಂದಿರಾ ಆವಾಸ್‌ನಲ್ಲಿ ಆಗಿದೆ, ಕೇಂದ್ರ ಸ್ರಾಕರದಿಂದ ಹಣ ಬರುತ್ತದೆ, ಆ ಕೆಲಸವಾಗಿದೆ. ಅಂಬೇಡ್ಕರ್ ಯೋಜನೆಯಲ್ಲಿ ಆಗಿದೆ, ಅದಕ್ಕೆ ಎಸ್‌ಸಿ.ಸಿ.ಯಲ್ಲಿ ಹಣ ಬರುತ್ತದೆ ಆಗಿದೆ. ಆದರೆ ಆಶ್ರಯ ಯೋಜನೆಯಲ್ಲಿ ಈ ವರ್ಷದ ಫಲಾನುಭವಿಗಳ ಪಟ್ಟಿಯನ್ನೇ ಮಾಡಲು ಆಗಿಲ್ಲ. ಅದಕ್ಕೆ ಇರುವ ಕಾರಣಗಳ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಿಲ್ಲ. ತಮಗೆ ಉಳುದಿರುವ ಅಧಿಕಾರದ ಅವಧಿಯಲ್ಲಿ 12 ಲಕ್ಷ ಮನೆಗಳನ್ನು ಹೇಗೆ ಕಟ್ಟುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ತಮ್ಮ ಸರ್ಕಾರ ಇವತ್ತು ರೈತರ ಪಾಲಿಗೆ ಶಾಪವಾಗಿಬಿಟ್ಟಿದೆ. ಕಾರಣ ರೈತರು ಬೆಳೆದ ಉತ್ಪನ್ನವನ್ನು ಕೊಂಡುಕೊಳ್ಳಲು ನೂರು ಕೋಟಿ ರೂಪಾಯಿಗಳ ಬಿಡುಗಡಿಯಾಗಿ ಮಾರುಕಟ್ಟೆ ಪ್ರವೇಶವನ್ನು ಸರ್ಕಾರ ಮಾಡಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಆದರೆ ನನಗೆ ಗೊತ್ತಿರುವಂತೆ ಒಂದು ಪೈಸೆ ಬಿಡುಗಡೆಯಾಗಿಲ್ಲ. ಬಿಡುಗಡೆ ಮಾಡಿದ್ದರೆ ಎಲ್ಲಿ, ಎಷ್ಟು ಬಿಡುಗಡೆ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕಾಗಿ ಒತ್ತಾಯಿಸುತ್ತೇನೆ. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ವರ್ಗದವರ ಅಭಿವೃದ್ಧಿ ಕೆಲಸಗಳ ಬಗ್ಗೆ ಉತ್ತರ ಕೊಡುತ್ತೀರೆಂದು ಭಾವಿಸಿದ್ದೆ. ತಮ್ಮ ಅಧ್ಯಕ್ಷತೆಯಲ್ಲಿ ಎಸ್.ಸಿ.ಪಿ ಕೆಲಸವನ್ನು ರಿವ್ಯೂ ಮಾಡಲು ಒಂದು ಸಮಿತಿ ಇದೆ. ಮೂರು ಇಲ್ಲವೆ ನಾಲ್ಕು ತಿಂಗಳಿಗೆ ಒಂದು ಸಲ ಹಣಕಾಸು ಸಚಿವರು, ಗೃಹಸಚಿವರು ಇತರೆ ನಾಲ್ಕೈದು ಮಂತ್ರಿಗಳನ್ನು ಕರೆದು ಆ ಪೂಲ್ ಫಂಡ್ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ, ಆ ಕಾರ್ಯಕ್ರಮ ಜಾರಿಗೆ ಬರುತ್ತಿದೆಯೋ ಇಲ್ಲವೋ, ರಾಜ್ಯದಲ್ಲಿರುವ 20 ಪರ್‌ಸೆಂಟ್ ಪರಿಶಿಷ್ಟ ಜಾತಿ, ಪಂಗಡದ ಜನರ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ ಎಂಬ ಬಗ್ಗೆ ಸಮಿತಿಯ ಸಭೆಯಾಗಿದೆಯೇ ಎಂದು ಕೇಳಿದರೆ, ಸಮಿತಿ ಸಭೆಯಾಗಿಲ್ಲವೆಂದು ಸಮಾಜ ಕಲ್ಯಾಣ ಸಚಿವರು ಉತ್ತರ ಕೊಟ್ಟರು. ಈಗಲಾದರೂ ಆ ಸಭೆಯನ್ನು ಮಾಡಬೇಕು, ಇದರ ಜೊತೆಗೆ ರೈತರ ಸಹಕಾರಕ್ಕೆ ತಾವು ಬರಬೇಕು. ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಚಿವರುಗಳ ಕಾರ್ಯವೈಖರಿಯನ್ನು ರಿವ್ಯೂ ಮಾಡುವವರಿದ್ದಾರೆ, ಅದರ ಆಧಾರದ ಮೇಲೆ ರಾಜಕೀಯ ಕ್ರಮವನ್ನು ತೆಗೆದುಕೊಳ್ಳುವುದಾಗಿ ಹೇಳಿರುವುದು ಸಂತೋಷದ ವಿಚಾರ. ಅದು ತಮ್ಮ ಪಕ್ಷಕ್ಕೆ ಸಂಬಂಧಪಟ್ಟ ವಿಚಾರ. ಆದರಿಂದ ಜನರಿಗೆ, ಅಧಿಕಾರಿಗಳಿಗೆ ಬೇರೆ ನಿರ್ದೇಶನ ಹೋಗುತ್ತದೆ. ಸರ್ಕಾರ ಡೀಸ್ಟಾಬಿಲೈಸ್ ಆಗುತ್ತದೆ. ಸಚಿವರುಗಳು

ತೀರ್ಮಾನ ತೆಗೆದುಕೊಳ್ಳಲು ಹಿಂದುಮುಂಧು ನೋಡುತ್ತಾರೆ. ಅಧಿಕಾರಿಗಳಿಗೆ ಇವರು ತಮ್ಮ ಅಧಿಕಾರದಿಂದ ಹೋಗುತ್ತಾರೆ, ಮತ್ತೊಬ್ಬರು ಬರುತ್ತಾರೆಂದು ಕೆಲಸವನ್ನೇ ಮಾಡಲು ಹೋಗುವುದಿಲ್ಲ. ಹೋದ ತಿಂಗಳು ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಲಿ ನೋಡೋಣ ಎಂದು ಹೇಳುತ್ತಿದ್ದರು. ಈಗ ಸಚಿವ ಸಂಪುಟ ವಿಸ್ತರಣೆ ಯಾವಾಗ ಆಗುತ್ತದೋ ಒಂದು ಕೆಲವರಿಗೆ ಹೆದರಿಕೆಯು ಪ್ರಾರಂಭವಾಗಿದೆ. ಸಚಿವಸಂಪುಟದ ಕೆಲವು ಸಹೋದ್ಯೋಗಿಗಳು, ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ರೂಪದಲ್ಲಿ ಈ ವರ್ಷದ ಸಾಮಾನ್ಯ ವರ್ಗಾವಣೆಯಲ್ಲಿ ಯಾವುದೇ ವರ್ಗಾವಣೆಯನ್ನು ಮಾಡುವುದಿಲ್ಲವೆಂದು ಹೇಳಿ ಎಷ್ಟು ಸಾವಿರ ಅಧಿಕಾರಿಗಳಿಗೆ ಅನಗತ್ಯವಾಗಿ ವರ್ಗಾವಣೆಯನ್ನು ಮಾಡಿದ್ದಾರೆ. ಇದು ಸರ್ಕಾರದ ನೀತಿಯೇ? ತಾವು ಅನಾವಶ್ಯಕವಾಗಿ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದ್ದೀರಿ. ಹಿಂದಿನ ಸರ್ಕಾರದ ಆಡಳಿತದಲ್ಲಿ ವ್ಯವಸ್ಥೆ ಕುಸಿದುಬಿಟ್ಟಿದೆಯೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಹಿಂದಿ ಸರ್ಕಾರವೇನೋ ದೊಡ್ಡ ಅಪರಾಧ ಮಾಡಿದೆಯೊಂಬ ನಿಟ್ಟಿನಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಟೀಕೆಗಳನ್ನು ಮಾಡಿದ್ದೀರಿ. ತಾವು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಇದರ ಬಗ್ಗೆ ವಿಚಾರಣೆಯಾಗಬೇಕು, ಇಷ್ಟೊಂದು ನೌಕರರ ವರ್ಗಾವಣೆ ಅವಶ್ಯಕತೆ ಇತ್ತೆ? ಎಷ್ಟು ವ್ಯವಹಾರವಾಗಿದೆಯೆಂಬ ಬಗ್ಗೆ ಬಹಳ ನೋವಿನಿಂದ ಹೇಳಬೇಕಾಗಿದೆ. ಯಾವ ಕಾಲದಲ್ಲೂ ಆಗಿಲ್ಲ, ಕೇವಲ ತಮ್ಮ ಕಾಲದಲ್ಲಾಗಿದೆಯೆಂದು ನಾನು ಹೇಳುವುದಿಲ್ಲ. ಆದರೆ ಅಗಾಧವಾಗಿ ಆಗಿರುವ ವರ್ಗಾವಣೆಯ ಬಗ್ಗೆ ನೌಕರರ ಸಂಘದ ಅಧ್ಯಕ್ಷರೇ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? ಹೀಗಾದರೆ ಆಡಳಿತದಲ್ಲಿ ಪ್ರಾಮಾಣಿಕತೆ ಎಲ್ಲಿ ಬರುತ್ತದೆ? ಭ್ರಷ್ಟಾಚಾರವನ್ನು ನಿಭಾಯಿಸಲು ಹೇಗೆ ಸಾಧ್ಯವಾಗುತ್ತದೆ? ವೆಚ್ಚವನ್ನು ಕಡಿಮೆ ಮಾಡುವ ಕೆಲಸ ಹೇಗೆ ಆಗುತ್ತದೆ? ನಾಲ್ಕನೆ ದರ್ಜೆ ನೌಕರರ ವರ್ಗಾವಣೆ ವಿಧಾನಸೌಧದಲ್ಲಿ ಆಗುತ್ತದೆ ಅಂದರೆ ಅದರ ಅರ್ಥವೇನು? ಇದು ಅರ್ಥವಾಗದಿರುವ ವಿಚಾರವಾಗಿದೆ. ತಾವು ರಾಜಕೀಯದಲ್ಲಿ ಯಾವ ಮಟ್ಟದಲ್ಲಿ ಇದ್ದೀರಿ ಆದರಿಂದ ಜನರು ಆಡಳಿತವನ್ನು ನಿರೀಕ್ಷೆ ಮಾಡಿದ್ದಾರೆ. ಅದಕ್ಕೆ ತಕ್ಕಂತೆ ತಾವು ನಡೆದಿಲ್ಲ. ಈ ಎಲ್ಲಾ ವಿಚಾರಗಳು ತಮ್ಮ ಗಮನಕ್ಕೆ ಬಂದಿದೆ. ತಾವು ರಾಜಕೀಯವಾಗಿ ಆ ಧೈರ್ಯವನ್ನು, ಪ್ರೌಢಿಮೆಯನ್ನು ತೋರಿಸಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ತಾವು ರಾಜಕೀಯವಾಗಿ ನಿಶಕ್ತರು ಎಂಬ ಭಾವನೆ ಜನರಲ್ಲಿ ಬರುತ್ತದೆ. ಆಡಳಿತ ಕುಸಿಯುತ್ತದೆ. ಇಷ್ಟು ಮಾತುಗಳನ್ನು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ಧನ್ಯವಾದವನ್ನು ಅರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಪೂರಕ ಅಂದಾಜಿನ ಮಂಡನೆ ಮಾಡಿದ್ದಾರೆ. 626

ಕೋಟಿ ಬಜೆಟ್‌ನ ಒಟ್ಟಿಗೆ ಸಲುವಾಗಿ ಮಂಡನೆ ಮಾಡಿದ್ದಾರೆ. ತುರ್ತು ಸನ್ನಿವೇಶಕ್ಕೆ ತಕ್ಕಂತೆ ಹಣವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಪೂರಕ ಅಂದಾಜು ಬರುತ್ತದೆ. ಬೇಡಿಕೆ ಸಂಖ್ಯೆ 10 ರಲ್ಲಿ 2 ರಿಂದ 4 ರವರೆಗಿನ ವಿಚಾರದಲ್ಲಿ 'ಪ್ರಧಾನ ಮಂತ್ರಿಯ ಗ್ರಾಮೋದಯ ಯೋಜನೆಯ ಅಡಿ ಸಹಾಯಧನವರನ್ನು ಮಂಜೂರು ಮಾಡಿದೆ, ಪ್ರಥಮ ಕಂತಿನ ಹಣವಾಗಿ 563.43 ಲಕ್ಷವನ್ನು ಬಿಡುಗಡೆ ಮಾಡಿದೆ. ಅದಕ್ಕಾಗಿ ಈ ಸಾಲಿನಲ್ಲಿ ಹಣವನ್ನು ಅವಶ್ಯಕವಾಗಿ ಕಲ್ಪಿಸಬೇಕಾಗಿರುವುದರಿಂದ, ಈ ಕಾರ್ಯಕ್ರಮ ಹೊಸ ಕಾರ್ಯಕ್ರಮವಾಗಿರುವುದರಿಂದ ಹೊಸ ಸೇವೆಗಳಲ್ಲಿ ಬರುತ್ತದೆ' ಎಂದು ಇದೆ. ಈ ರೀತಿ ಇರುವುದಕ್ಕೆ ಪೂರಕ ಬಜೆಟ್‌ನಲ್ಲಿ ಅವಕಾಶವನ್ನು ಕಲ್ಪನೆ ಮಾಡಬಹುದು. ಏಕೆಂದರೆ ಕೇಂದ್ರದ ಹೊಸ ಯೋಜನೆಗಳು ಬರುತ್ತಿರುತ್ತವೆ. ಅದಕ್ಕೆ ನಾವು ಪೂರಕವಾಗಿ ಸ್ಪಂದಿಸಬೇಕಾಗುತ್ತದೆ. ಅದನ್ನು ಮಾಡಬಹುದು. ಆದರೆ ಮೊನ್ನೆ ಬಜೆಟ್ಟನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಇದನ್ನು ಸೇರಿಸಿದ್ದರೆ, ಈ ಪೂರಕ ಬಜೆಟ್‌ನ ಅವಶ್ಯಕತೆ ಇರುತ್ತಿರಲಿಲ್ಲ. ಕೆಲವೊಂದು ವಿಷಯಗಳ ಬಗ್ಗೆ ಮೊನ್ನೆ ಮಂಡನೆ ಮಾಡಿದಂಥ ಸಂದರ್ಭದಲ್ಲಿ ಪ್ರಿವಿಂಕಟ್ ಮಾಡಿ, ಮಾಡಿದ್ದಾರೆ ಪೂರಕ ಬಜೆಟ್ಟನ್ನು ಈ ಬಗ್ಗೆ ತರುವ ಅವಶ್ಯಕತೆ ಬರುತ್ತಿರಲಿಲ್ಲ ಎಂದು ನನ್ನ ಅಭಿಪ್ರಾಯ. ಡಿಮ್ಯಾಂಡ್ ನಂ-೧೦ರಲ್ಲಿ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ೧೩ ಕೋಟಿ ೨೨ ಲಕ್ಷ ರೂಪಾಯಿಗಳು. ಇದು ನಾನ್ ಪ್ಲಾನ್ ಗ್ರಾಂಟ್ ಇನ್ ಏಡ್. ಇದು ಪಾಲಿಸಿ ಡಿಸಿಷನ್. ೬ ಕೋಟಿ ೭೮೪ ಲಕ್ಷ ರೂ.ಗಳನ್ನು ಎನ್.ಜಿ.ಎಫ್.ಗೆ ಲೋನ್ ಎಂದು ತೋರಿಸಿದ್ದಾರೆ. ಇಂಥಾವುಗಳನ್ನೆಲ್ಲಾ ಬಜೆಟ್ ಮಂಡನೆಯ ಸಮಯದಲ್ಲಿ ಮಾಡಬಹುದಾಗಿತ್ತು. ಹಾಗೆ ಮಾಡದೇ ಅದನ್ನು ಈಗ ಅಡಿಶನಲ್‌ಆಗಿ ತೆಗೆದುಕೊಂಡಿದ್ದಾರೆ. ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನಕ್ಕೆ ಐದು ಕೋಟಿ, ಮೊನ್ನೆ ನಡೆದ ಐ.ಟಿ. ಪ್ರದರ್ಶನಕ್ಕೆ ೭೫ ಲಕ್ಷ ರೂಗಳು-ಮುಂತಾಗಿ ಮಾಡಿದ್ದಾರೆ. ಆದರೆ ಕೆಲವೊಂದು ಐಟಂಸ್‌ಗಳು ಏನಿವೆ ಅವುಗಳನ್ನು ಮೊದಲೇ ಬಜೆಟ್‌ನಲ್ಲಿ ಮಂಡಣೆ ಮಾಡಿದ್ದರೆ ಪೂರಕ ಅಂದಾಜಿನಲ್ಲಿ ಬರುತ್ತಿರಲಿಲ್ಲ. ಇನ್ನೊಂದು ವಿಚಾರ ಹೇಳುವುದಾದರೆ, ಗದಗ್ ಕೋ-ಆಪರೇಟಿವ್ ಟೆಕ್ಸೈಲ್ ಮಿಲ್‌ಗೆ ಒಂದು ಕೋಟಿ ೩೮೪ ಲಕ್ಷ ರೂಪಾಯಿಗಳು. ಫಾರ್ಮರ್ಸ್ ಕೊ-ಆಪರೇಟಿವ್ ಸ್ಪಿನ್ನಿಂಗ್ ಮಿಲ್- ಹುಲಕೋಟಿ, ಇದಕ್ಕೆ ಒಂದು ಕೋಟಿ 398 ಲಕ್ಷ ರೂಪಾಯಿಗಳು. ಇವುಗಳನ್ನು ಕೂಡ ಮೊದಲೇ ವಿಚಾರ ಮಾಡಿ ಬಜೆಟ್‌ನಲ್ಲಿ ಸೇರಿಸಬಹುದಾಗಿತ್ತು. ಇಲ್ಲಿ ಸೇರಿಸುವ ತುರ್ತು ಅಗತ್ಯ ಏನಿತ್ತು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಆ ಬಗ್ಗೆ ಇಲ್ಲಿ ವಿವರಗಳನ್ನು ಕೊಟ್ಟಿಲ್ಲ. ಮಾನ್ಯ ಸಿಂಧ್ಯಾರವರು ಕೆಲವೊಂದು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಮುಖ್ಯವಾಗಿ ರಾಜ್ಯದಲ್ಲಿ ಸಿಬ್ಬಂದಿವರ್ಗದವರ ಟ್ರಾನ್ಸ್‌ಫರ್ ಬಗ್ಗೆ ಪ್ರಸ್ತಾಪಿಸ ಬಯಸುತ್ತೇನೆ ಈಗಿನ ವಿಧಾನದಲ್ಲಿ ನೌಕರ ವರ್ಗದವರಿಗೆ ಸೆಕ್ಯುರಿಟಿ ಎನ್ನುವುದು ಇರುವುದಿಲ್ಲ. ಇವೊತ್ತಿನ ವರೆಗೂ ಕೆಲವು ವರ್ಗಾವಣೆಗಳು ನಡೆಯುತ್ತಿವೆ. ಆ ಸಮಸ್ಯೆಯು

ಇಂದಿಗೂ ಮುಂದುವರಿದಿದೆ. ಟ್ರಾನ್ಸ್‌ಫರ್ ವಿಚಾರದಲ್ಲಿ ಎಷ್ಟು ಒತ್ತಡ ಇತ್ಯಾದಿಗಳು ಇರುತ್ತವೆ ಎಂಬುದು ಎಲ್ಲರೂ ತಿಳಿದಿರುವ ವಿಚಾರವಾಗಿದೆ. ಈ ಟ್ರಾನ್ಸ್‌ಫರ್ ಎನ್ನುವಂತಾದ್ದು ಕ್ಯಾನ್ಸರ್ ಕಾಯಿಲೆ ಇದ್ದ ಹಾಗೆ. ಇದರ ಬಗ್ಗೆ ವಿಚಾರ ವಿಮರ್ಶೆ ಮಾಡಲು ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ನಮ್ಮನ್ನೆಲ್ಲಾ ಕರೆದಿದ್ದರು. ಈ ಕುರಿತು ಸಲಹೆ ಸೂಚನೆಗಳನ್ನು ಕೇಳಿದರು. ಇದಕ್ಕೆ ಅಂತಿಮವಾಗಿ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಲೇ ಬೇಕು. ಮುಖ್ಯಮಂತ್ರಿಗಳು ಮಂತ್ರಿಗಳು, ಪ್ರತಿಪಕ್ಷದ ನಾಯಕರು, ಇತರ ಪಕ್ಷಗಳ ನಾಯಕರುಗಳ ಮೇಲೆ ಮೂರು ತಿಂಗಳ ಕಾಲ ಭಾರಿ ಒತ್ತಡ ಉಂಟು ಮಾಡುತ್ತಾರೆ. ಈ ಸಮಯದಲ್ಲಿ ಯಾವುದೇ ಕೆಲಸ ಮಾಡಲು ಕಷ್ಟವಾಗುವಂಥ ಪರಿಸ್ಥಿತಿ ಉಂಟಾಗುತ್ತದೆ. ಈ ಸಮಯದಲ್ಲಿ ಸರಕಾರದ ಆಡಳಿತ ಯಂತ್ರವು ಪೂರ್ಣವಾಗಿ ನಿಂತು ಹೋಗುವುದನ್ನು ಕಾಣುತ್ತೇವೆ. ಕೆಲವೊಮ್ಮೆ ಕೆಲವೊಬ್ಬ ಅಧಿಕಾರಿಗಳಿಗೆ 3-4 ಸಾರಿ ಟ್ರಾನ್ಸ್‌ಫರ್ ಆರ್ಡರ್‌ಗಳು ಆಗಿರುತ್ತವೆ. ಈ ಸಮಸ್ಯೆ ಕುರಿತು ಒಂದು ಸೂಕ್ತ ನಿಯಂತ್ರಣವನ್ನು ಹಾಕಿಕೊಳ್ಳಬೇಕು. ಇದರ ಬಗ್ಗೆ ಸೂಕ್ತ ಚಿಂತನೆಯು ನಡೆಯಬೇಕು. ಇದರ ಮೂಲಕ ಸರಕಾರದ ಆಡಳಿತಕ್ಕೆ ಕುತ್ತು ತರುವಂಥ ವ್ಯವಸ್ಥೆಯು ಕೂಡ ಆಗುತ್ತಿದೆ. ಇನ್ನು ಒಟ್ಟು ಬಳ್ಳಾರಿ ಡೆವಲಪ್ ಮೆಂಟ್ ಬಗ್ಗೆ ೩,೩೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿಯ ಅದರಲ್ಲಿ ಬಳ್ಳಾರಿ ಥರ್ಮಲ್ ಪ್ಲ್ಯಾಂಟ್‌ಗೆ ೨೬೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ನಾನು ಹಿಂದೆ ಬಳ್ಳಾರಿ ಜಿಲ್ಲೆಗೆ ಸಂದರ್ಶನ ನೀಡಿದಾಗ ಅಲ್ಲಿನ ಸಂಬಂಧಪಟ್ಟವರನ್ನು ಮತ್ತು ಕೆಲವು ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ ಅಲ್ಲಿ ಸರಕಾರ ಒಂದು ಪೈಸೆ ಹಣವನ್ನು ಬಿಡುಗಡೆ ಮಾಡಿಲ್ಲ ಹಾಗೂ ಯಾವುದೇ ಕೆಲಸ ಪ್ರಾರಂಭವಾಗಿಲ್ಲ ಎಂಬ ವಿಚಾರ ತಿಳಿದು ಬಂತು. ಆದರೆ ಸಾಕಷ್ಟು ಸಿಬ್ಬಂದಿಯನ್ನು ಅಲ್ಲಿಗೆ ಹಾಕಲಾಗಿದೆ. ಕೆಲಸವಿಲ್ಲದ ಸಿಬ್ಬಂದಿಗಳು ಸುಮ್ಮನೆ ಸಂಬಳವನ್ನು ಪಡೆಯುತ್ತಿದ್ದಾರೆ. ಮೂ ಜನ ಇಂಥ ಸಿಬ್ಬಂಧಿವರ್ಗ ಕೆಲಸವಿಲ್ಲದೆ ಇದ್ದಾರೆ. ಥರ್ಮಲ್ ಪ್ಲ್ಯಾಂಟ್ ಬಗ್ಗೆ ಪಾಲಿಸಿ ಡಿಸಿಶನ್ ತೆಗೆದುಕೊಂಡು ಬೇರೆ ರೀತಿಯಲ್ಲಿ ಕಾರ್ಯಗತ ಮಾಡುತ್ತಿದ್ದೀರೋ? ಹೇಗೇ? ಎಂಬ ಬಗ್ಗೆ ತಾವುಗಳು ಹೇಳಬೇಕು. ಏಕೆಂದರೆ ೩೩೦೦ಕೋಟಿ ರೂಪಾಯಿಗಳ ಸ್ಪೆಶಲ್ ಪ್ಯಾಕೇಜ್‌ನ್ನು ಹಿಂದಿನ ಬಜೆಟ್‌ನಲ್ಲಿ ತಾವುಗಳು ಅನೌನ್ಸ್ ಮಾಡಿದ್ದೀರಿ. ಆದರೆ ಯಾವುದೇ ಕೆಲಸ ಪ್ರಾರಂಭವಾಗಿಲ್ಲವಾದ ಕಾರಣ ಆ ಕುರಿತು ಸ್ಪಷ್ಟನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪೂರಕ ಅಂದಾಜಿನಲ್ಲಿ ತಂದಿರುವ ವಿಚಾರಗಳನ್ನು ಮೊದಲೆ ವಿಚಾರ ಮಾಡ ಬಜೆಟ್‌ನಲ್ಲಿ ಸೇರಿಸಬಹುದಾಗಿತ್ತು. ಹೀಗಾಗಿ ಅವುಗಳು ಪೂರಕ ಬಜೆಟ್‌ನಲ್ಲಿ ಹಾಕುವ ಅವಶ್ಯಕತೆ ಬರುತ್ತಿರಲಿಲ್ಲ. ಆ ಸಂದರ್ಭದಲ್ಲಿ ಇಲ್ಲಿ ಕೆಲವು ಐಟಂಸ್‌ಗಳೇನಿವೆ ಅಂದರೆ ಪೂರಕ ಬಜೆಟ್‌ನಲ್ಲಿ ಬರುವಂಥವುಗಳು. ಅವುಗಳನ್ನು ಕನ್ಸಿಡರ್ ಮಾಡುವಂಥಾದ್ದು ಆಗಿದ್ದು ಉಳಿದ ಕೆಲವನ್ನು ಕನ್ಸಿಡರೇಶನ್ ಮಾಡಲು ಬರುವುದಿಲ್ಲ ಎಂಬ ಮಾತನ್ನು ಈ ಸಂಧರ್ಭದಲ್ಲಿ ಹೇಳಿ ಮೇಲ್ಕಾಣಿಸಿದ ವಿಚಾರಗಳನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ, ಆ ಕಡೆ ಪಕ್ಷದಿಂದ ಒಬ್ಬರು, ಈ ಕಡೆ ಪಕ್ಷದಿಂದ ಒಬ್ಬರು ಹಾಗೂ ಪಕ್ಷೇತ್ರ ಸದಸ್ಯರ ಪರವಾಗಿ ಜಯಪ್ರಕಾಶ ಹೆಗ್ಡೆಯವರು ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ನನ್ನ ಗಮನಕ್ಕೆ ಬಂದ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅತಿವೃಷ್ಟಿಯ ನಷ್ಟಕ್ಕೆ ಪರಿಹಾರಧನವನ್ನು ಹಂಚುವ ಬಗ್ಗೆ ಕೆಲವೊಂದು ಚೆಕ್‌ಗಳನ್ನು ಹಂಚಿದರು. ಮನೆ ಕಳೆದುಕೊಂಡವರಿಗೆ, ಮನೆ ಕುಸಿದು ಬಿದ್ದಂತವರಿಗೆ. ಚೆಕ್‌ಗಳನ್ನು ಕೊಟ್ಟಿದ್ದಾರೆ. ಮೊನ್ನೆ ಪತ್ರಿಕೆಗಳಲ್ಲಿ ಬಂದ ಸುದ್ದಿ ಪ್ರಕಾರ ಹುಬ್ಬಳ್ಳಿಯಲ್ಲಿ ೩೦೦ ರೂಪಾಯಿಗಳ ಚೆಕ್ ಕೊಟ್ಟಿದ್ದು ಕೂಡ ಬೌನ್ಸ್ ಆಗಿದೆ. ಹೀಗೆ ೩೦೦ ರೂಪಾಯಿಗಳ ಸರಕಾರಿ ಚೆಕ್ ಬೌನ್ಸ್ ಆದರೆ ಸರಕಾರದ ಗುಡ್‌ವಿಲ್ ಏನಾಗುತ್ತದೆಂದು ವಿಚಾರ ಮಾಡಬೇಕು. ಹಾಗಾದರೆ ಸರಕಾರದಲ್ಲಿ ಖಜಾನೆಯಲ್ಲಿ ಹಣವಿಲ್ಲವೋ? ಅಥವಾ ಜಿಲ್ಲಾ ಖಜಾನೆಗೆ ಸದರಿ ಹಣ ಜಮಾ ಆಗಿದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಒಂದು ವೇಳೆ ಹಣ ಜಮಾ ಆಗದಿದ್ದರೂ ಚೆಕ್ಕನ್ನು ಹೇಗೆ ಕೊಟ್ಟರು? ಕೇವಲ ಒಂದೆರಡು ಕಡೆಗಳಲ್ಲಿ, ೩೦೦-೪೦೦ ರೂಪಾಯಿಗಳ ಸಣ್ಣ ಸಣ್ಣ ಚೆಕ್‌ಗಳು ಬೌನ್ಸ್ ಆಗಿದ್ದಾವೆಂದು ಪತ್ರಿಕೆಗಳಲ್ಲಿ ಬಂದಿದೆ. ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಎಸ್ಟಿಮೇಟ್ಸ್ ಏನಿದೆ ಇದನ್ನು ಪ್ರತಿ ವರ್ಷವೂ ಸದನದಲ್ಲಿ ಮಂಡಿಸಿ ಮಂಜೂರು ಮಾಡಿಸಿಕೊಳ್ಳುವ ಸಂಪ್ರದಾಯವು ನಡೆದುಕೊಂಡು ಬಂದಿರುವಂತಾದ್ದು. ನಮ್ಮ ನಾಯಕರು ಸಾಕಷ್ಟು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಇವೊತ್ತು ರಾಜ್ಯ ಮತ್ತು ಕೇಂದ್ರದ ಅನೇಕ ಯೋಜನೆಗಳಿವೆ. ೫೦:೫೦ ಭಾಗದಷ್ಟು ಹಣ ಕೊಡುವ ಅನೇಕ ಯೋಜನೆಗಳಿವೆ. ಇಂಥ ಸಂದರ್ಭದಲ್ಲಿ ಮ್ಯಾಚಿಂಗ್ ಹಣವನ್ನು ನಾವು ಕೊಡದೇ ಕೆಲಸವಾಗದೇ ಇರತಕ್ಕಂಥಾದ್ದು ಸಾಕಷ್ಟು ಇವೆ. ನಾವು ಕೇಂದ್ರದಿಂದ ಬರುವಂಥ ೭೫-೨೫ ಭಾಗ. ೫೦:೫೦ ಭಾಗದ ಬಹಳಷ್ಟು ಯೋಜನೆಗಳನ್ನು ಉಪಯೋಗಿಸಿಕೊಳ್ಳುತ್ತಾ ಇಲ್ಲ. ಇಂಥ ಯೋಜನೆಗಳು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿರುತ್ತವೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿಯೇ ಎಕನಾಮಿಕಲಿ ಇಂಪಾರ್ಟೆಂಟ್ ರೋಡ್ ಎಂದು ಅತ್ತಿಬೆಲೆ ಇಂದ ದಾಬಸ್‌ಪೇಟೆಯವರೆಗೆ ಸುಮಾರು ೧೭೫ ಕಿ.ಮೀ. ರಸ್ತೆಗಾಗಿ ೩೫ ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥಾದ್ದುಯ ಕೇಂದ್ರದವರು ಕೊಟ್ಟಂಥ ೫೦ ಭಾಗದ ಹಣವನ್ನು ನಾವು ಪಡೆದಿದ್ದೇವೆ. ಆದರೆ ರಾಜ್ಯದಿಂದ ಬರಬೇಕಾದ ಹಣವನ್ನು ತುಂಬಿಲ್ಲ. ಹಾಗಾಗಿ ಕಾಮಗಾರಿ ನಿಂತಿದೆ. ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು. ಮಾನ್ಯ ಲೋಕೋಪಯೋಗಿ ಸಚಿವರು ಕೂಡ ಇಲ್ಲಿ ಉಪಸ್ಥಿತರಿದ್ದಾರಮ. ನ್ಯಾಶನಲ್ ಹೈವೇ

೨೦೭ ಎಂದು ಸೇರಿಸಿಕೊಂಡು ಒಂದು ವರ್ಷದಿಂದ ಆ ಕೆಲಸ ಆಗಿಲ್ಲ. ಅಲ್ಲಿ ಕೇಂದ್ರದವರ ಅರ್ಧಭಾಗದ ಹಣ ಖರ್ಚು ಮಾಡಿದ್ದಾರೆ. ರಾಜ್ಯ ಸರ್ಕಾರದ ಹಣ ಬಿಡುಗಡೆ ಮಾಡದ ಕಾರಣ ಕೆಲಸ ಅರ್ಧಂಬರ್ಧ ಆಗಿದೆ. ಕೆಲಸಗಳು ಅಲ್ಲಿಗೆ ನಿಂತಿ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಸಪ್ಲಿಮೆಂಟರಿ ಎಸ್ಟಿಮೇಟನ್ನು ಈಗ ಇಲ್ಲಿ ತಂದಿದ್ದಾರೆ, ಅದರಲ್ಲಿ ಈ ಕುರಿತಾದ ಯಾವುದೇ ಪ್ರಸ್ತಾವನೆ, ಪ್ರಸ್ತಾವವು ಇಲ್ಲ. ತಂದಿರುವ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಆ ಕೆಲಸಕ್ಕೆ ಹಣ ತೊಡಗಿಸುವ ಮೊತ್ತವನ್ನು ಸೇರಿಸಬೇಕಾಗುತ್ತದೆ. ಅದನ್ನು ಸೇರಿಸಬೇಕೆಂದು ಒತ್ತಾಯಿಸುತ್ತೇನೆ. ಇದರ ಜೊತೆಗೆ ಅನಿರೀಕ್ಷಿತವಾಗಿ ಆಗುವಂಥ ಕೆಲವು ಘಟನೆಗಳು. ಪ್ರಕೃತಿ ವಿಕೋಪದಿಂದ ಉಂಟಾಗಿರುವಂಥ ಅನಾಹುತಗಳ ಪರಿಹಾರಕ್ಕಾಗಿ ನಿಧಿಯನ್ನು ಸ್ಥಾಪಿಸುವ ಬಗ್ಗೆ ಈಗಾಗಲೇ ಕೆಲವರು ಪ್ರಸ್ತಾಪ ಮಾಡಿದ್ದರು. ಅದಕ್ಕಾಗಿ ಕೊಡುವ 10 ಕೋಟಿ ಹಣವನ್ನು ಮಾರ್ಕೆಟ್ ಇಂಟರ್‌ವೆನ್ಶನ್‌ಗೆ ಕೊಡುವಂಥ ಹಣವನ್ನು ಸೇರಿಸಿಲ್ಲ. ಆದಕ್ಕಾಗಿ 100 ಕೋಟಿ ಹಣವನ್ನು ಕೊಡುತ್ತೇವೆಂದು ಹೇಳಿದ್ದರೂ ಇದರಲ್ಲಿ ಪ್ರಸ್ತಾವವಿಲ್ಲ. ರೈತರಿಗೆ ಬೆಲೆ ಕುಸಿತ ಮತ್ತಿತರ ಕಾರಣಗಳಿಂದಾಗುವ ನಷ್ಟವನ್ನು ಪರಿಹರಿಸಲು ಈ ನಿಧಿಯನ್ನು ಸ್ಥಾಪಿಸುತ್ತೇವೆಂದು ಕೃಷಿ ಸಚಿವರು ಹೇಳಿದ್ದರು. ಇವೊತ್ತು ತೊಗರಿ, ಮೆಕ್ಕೆಜೋಳ, ಜೋಳ, ರಾಗಿ, ಮುಂತಾದ ಬೆಳೆಗಳ ಬೆಲೆ ಕುಸಿತದಿಂದ ರೈತರು ಭಾರಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇವೊತ್ತು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ 676 ಕೋಟಿ ರೂಪಾಯಿಗಳನ್ನು ತೋರಿಸುತ್ತಾ ಇದ್ದಾರೆ ಅದಕ್ಕೆ ಈ ನೂರು ಕೋಟಿ ಹಣವನ್ನು ತೊಡಗಿಸುದ್ದೇವೆ ಎಂಬ

1.40 ಪಿ.ಎಂ.

ಬಗ್ಗೆ ಇದರಲ್ಲಿ ನಮೂದಿಸಿಲ್ಲ. ಅದಕ್ಕೂ ನೂರು ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೇವೆ ಎನ್ನುವುದು ಇದರಲ್ಲಿ ನಮಗೆ ಕಾಣುತ್ತಿಲ್ಲ. ಅದೇ ರೀತಿ ಮಾರ್ಕೆಟ್ ಇಂಟರ್‌ವೆನ್ಶನ್‌ಗೆ ನೂರು ಕೋಟಿ ರೂಪಾಯಿಗಳನ್ನು ತೊಡಗಿಸುತ್ತೇವೆ ಎನ್ನುವುದು ಇದರಲ್ಲಿ ಇಲ್ಲ. ಪ್ರಕೃತಿ ವಿಕೋಪಕ್ಕೆ ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ ಅದು ಬರುತ್ತದೆ ಎನ್ನುವ ದೃಷ್ಟಿಯಿಂದ ನಷ್ಟವಾಗಿರುವಂಥದ್ದಕ್ಕೆ ನೂರು ಕೋಟಿ ರೂಪಾಯಿಗಳನ ಹಣವನ್ನು ಒಂದು ರಿವಾಲ್ವಿಂಗ್ ಫಂಡನ್ನು ಮಾಡುವುದಕ್ಕೆ ಇದರಲ್ಲಿ ತೊಡಗಿಸುವುದು ಅಗತ್ಯ ಇದರ ಜೊತೆಗೆ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಬಜೆಟನ್ನು ಮಂಡಿಸಿದ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸಕರಿಗೂ ಇವತ್ತೇನು ಪಾರ್ಲಿಮೆಂಟ್ ಸದಸ್ಯರಿಗೆ ಎರಡು ಕೋಟಿ ರೂಪಾಯಿಗಳನ್ನು ಅವರ ಕ್ಷೇತ್ರದ ಅಭಿವೃದ್ಧಿಗಾಗಿ ಕೊಡುತ್ತೇವೆಂದು ಹೇಳಿದ್ದಾರೆ, ಅದೇ ರೀತಿ ಇಲ್ಲಿ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುವುದರಲ್ಲಿ ಅಟ್‌ಲೀಸ್ಟ್ ಇಲ್ಲಿ 50 ಲಕ್ಷ ರೂಪಾಯಿಗಳನ್ನಾದರೂ ಸೇರಿಸುವಂತಹದ್ದು, 124 ಜನ ಶಾಸಕರಿಗೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಸವಲತ್ತುಗಳನ್ನು ಕೊಡುವಂಥದ್ದಾಗಲಿ, ಇವತ್ತೇನೂ

ಎಲ್ಲಿಯೂ ಕಾಣುತ್ತಿಲ್ಲ ಇವತ್ತು ಶಾಸಕರಿಗೆ ಜಿಲ್ಲಾ ಪರಿಷತ್ತಿನಲ್ಲೂ ಏನೂ ಹಣ ಸಿಗುವುದಿಲ್ಲ. ಅವರ ಕ್ಷೇತ್ರಕ್ಕೆ ಅಭಿವೃದ್ಧಿ ಖರ್ಚಿಗೇನಾದರೂ ಬರುತ್ತದೆ ಎನ್ನುತ್ತಾರೆ. ತಾಲ್ಲೂಕು ಪಂಚಾಯಿತಿ ಅದರ ಅಭಿವೃದ್ಧಿಗೂ ಅಲ್ಲೇನು ಹಣ ಸಿಗುತ್ತಿಲ್ಲ. ಶಾಸಕರಿಗೆ ಸಿಗುವ ಹಣ ಅವರ ಕ್ಷೇತ್ರಕ್ಕೆ ಪೂರಾ ಖರ್ಚು ಮಾಡತಕ್ಕ ಹಣವನ್ನು ಆಯಾ ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಖರ್ಚು ಮಾಡಿಕೊಳ್ಳುತ್ತಾರೆ. ಒಟ್ಟಾರೆ ಶಾಸಕರಿಗೆ ಯಾವುದೂ ಹಣ ಇಲ್ಲ. ಮೊನ್ನೆ ತಾನೆ ಒಂದು ಬಿಲ್ಲನ್ನು ತಂದರು. ಪಾರ್ಲಿಮೆಂಟ್ ಸದಸ್ಯರಿಗೆ ಮಂತ್ರಿಗಳಿಗೆ ಕೊಡುವ ಎಲ್ಲಾ ಸವಲತ್ತನ್ನು ಕೊಡಬೇಕೆಂದು ಹೇಳಿ ತಂದರು. ಇವತ್ತು ಎರಡು ಕೋಟಿ ರೂಪಾಯಿಗಳ ನಿಧಿ ಎಲ್ಲಿ ಹೋಗುತ್ತದೇ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಏನೂ ಬರುತ್ತಿಲ್ಲ. ಅವರಿಗೆ ಪಿಎಗಳನ್ನು ಕೊಡತಕ್ಕದ್ದು ಮತ್ತು ಬೇರೆ ಬೇರೆ ರೀತಿಯಲ್ಲಿ ಸವಲತ್ತುಗಳನ್ನು ಕೊಡತಕ್ಕದ್ದು ಅವಕಾಶ ಪಾರ್ಲಿಮೆಂಟ್ ಸದಸ್ಯರಿಗೆ ಇದೆ. ಅದೇ ರೀತಿ ಬೇರೆ ಬೇರೆ ರಾಜ್ಯಗಳಲ್ಲೂ ಶಾಸಕರಿಗೆಂದು ನಿಧಿ ಇದೆ. ಆ ರೀತಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯ ಶಾಸಕರಿಗೆ ನಿಧಿಯನ್ನು ಕೊಟ್ಟು ಅವರ ಕ್ಷೇತ್ರದ ರೀತಿ ನೀತಿಗಳು, ನಾರ್ಮ್ಸ್ ಗೈಡ್‌ಲೈನ್ಸ್ ಏನು ಬೇಕೋ ಮಾಡಲಿ. ಅದು ಎಲ್ಲರಿಗೂ ಗೊತ್ತಾಗುತ್ತದೆ. ಆ ರೀತಿ ಅಭಿವೃದ್ಧಿ ದೃಷ್ಟಿಯಿಂದ ಶಾಸಕರ ನಿಧಿಯನ್ನು ಸ್ಥಾಪನೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಘೋಷಣೆಯನ್ನು ಮಾಡಬೇಕು. ಈ ಸಪ್ಲಿಮೆಂಟ್ರಿ ಎಸ್ಟಿಮೇಟ್‌ನಲ್ಲಿ ಅದನ್ನು ಸೇರಿಸಿಕೊಂಡು ಅವತ್ತು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಹಣ ಬರುವುದು ಇದೆ. ಹೆಚ್ಚು ಹಣ ಬರುತ್ತದೆ. ಆ ರೀತಿ ಬರುವುದನ್ನು ಸೇರಿಸಿಕೊಂಡು ಶಾಸಕರುಗಳಿಗೆ 50 ಲಕ್ಷ ರೂಪಾಯಿಗಳನ್ನು ಕೊಡುವಂಥಾದ್ದಾದರೂ ಮೊದಲನೇ ಕಂತಾಗಿ ಕೊಡುವ ಕಾರ್ಯ ಈ ಸಾರಿಯಾಗಬೇಕು. ಕೇಂದ್ರ ಸರ್ಕಾರದಿಂದ ಬರುವ ಹಣ ಮತ್ತು ನಮ್ಮ ಬಾಗದಿಂದ ತುಂಬುವುದು, ತಮ್ಮ ಕೆಲಸಕಾರ್ಯಗಳಾಗುವ ದೃಷ್ಟಿಯಿಂದ ಹೆಚ್ಚು ಕಾರ್ಯ ಮಾಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :— ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜು ಪಟ್ಟಿಯ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸುತ್ತಾ ಮುಖ್ಯವಾಗಿ ನನಗೆ ಅತೀವ ಸಂತೋಷವನ್ನು ತಂದಂಥ ವಿಷಯವೆಂದರೆ ಮಾನ್ಯ ಮುಖ್ಯ ಮಂತ್ರಿಗಳ ಪಟ್ಟಿಯಲ್ಲಿ ವರಾಹಿ ಯೋಜನೆಗೆ 7ಕೋಟಿ 21ಲಕ್ಷ ರೂಪಾಯಿಗಳನ್ನು ಇಟ್ಟಿದೆ ಎಂದು ಹೇಳಿದ್ದು. ಏಕೆಂದರೆ ಪ್ರತಿಯೊಂದು ಬಾರಿಯೂ ರಾಜ್ಯಪಾಲರ ಭಾಷಣದಲ್ಲಾಗಲಿ, ಬಜೆಟ್ ಅಧಿವೇಶನದಲ್ಲಾಗಲಿ ಅದರ ಬಗ್ಗೆ ನಾನು ಚರ್ಚೆಯನ್ನು ಮಾಡುತ್ತಾ ಬಂದಿದ್ದೇನೆ. ಮೊನ್ನೆ ನಾನೊಂದು ಪ್ರಶ್ನೆಯನ್ನು ಕೇಳಿದಾಗ, ಮಾನ್ಯ ಭಾರಿ ನೀರಾವರಿ ಸಚಿವರು ಎರಡುಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದರು. ಆದರೆ ಇಲ್ಲಿ 7 ಕೋಟಿ 21 ಲಕ್ಷ ರೂಪಾಯಿಗಳನ್ನು ಇಟ್ಟಿದೆ ಎಂದು ಬಂದಿದೆ. ಅದು 7 ಕೋಟಿ 21 ಲಕ್ಷ ರೂಪಾಯಿಗಳಲ್ಲಿ 2 ಕೋಟಿ ಸೇರಿದೆಯೋ ಅಥವಾ ಅದಲ್ಲದೆ 7

ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಇಟ್ಟಿದ್ದಾರೋ ಎಂಬ ಬಗ್ಗೆ ಸ್ವಲ್ಪ ಮಾಹಿತಿ ಬೇಕಾಗಿದೆ. ಏಕೆಂದರೆ ಇದು ನಮ್ಮ ಭಾಗದ ರೈತರಿಗೆ ಬಹಳ ಉಪಯೋಗವಾಗುವಂಥದ್ದು. ಆ ಭಾಗಕ್ಕೆ ಬಂದ ನೀರೆಲ್ಲ ಸಮುದ್ರಕ್ಕೆ ಹೋಗುವಾಗ ಇದೊಂದು ಯೋಜನೆಯಿಂದ ಸ್ವಲ್ಪವಾದರೂ ರೈತರು ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವಾದರೆ ನಮ್ಮ ಸಕ್ಕರೆ ಕಾರ್ಖಾನೆಗಳು ಉಳಿಯುವ ಸಾಧ್ಯತೆಗಳಿವೆ ಎಂದು ಹೇಳುತ್ತೇನೆ. ಮತ್ತೆ ಈ ಒಂದು ಸಣ್ಣ ನೀರಾವರಿಗೆ ಹಿಂದೆ ಇದ್ದ ಹಾಗೆ ಈ ಬಾರಿಯೂ ಬಹಳ ಕಡಿಮೆಯಾಗಿದೆ. ಈ ಬಾರಿ ಪುನ: ಅದನ್ನು ಸ್ವಲ್ಪ ಕಡೆಗಾಣಿಸಿದ ಹಾಗೆ ಕಂಡುಬರುತ್ತಿದೆ. ಅದಕ್ಕೇನಾದರೂ ಸ್ವಲ್ಪ ಹಣವನ್ನು ಇಡುವಂಥಾದ್ದು, ಮುಖ್ಯವಾಗಿ ಇನ್ನೊಂದು ಆಶ್ರಯ ಯೋಜನೆಯಲ್ಲಿ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಕೊನೆಯ ಹಂತದಲ್ಲಿ ಕೆಲವು ಸಾವಿರ ಮನೆಗಳನ್ನು ಬಿಡುಗಡೆ ಮಾಡಿದರು. ಅದಕ್ಕೆ ನಮ್ಮ ಸರ್ಕಾರ ಬಂದ ಮೇಲೆ ಸ್ವಲ್ಪ ಹಣವನ್ನು ಮಾನ್ಯ ಖರ್ಗೆಯವರು ಇಲ್ಲಿ ಪ್ರತಿಪಕ್ಷದಲ್ಲಿದ್ದಾಗ ಆ ಮನೆಗಳಿಗೂ ಹಣವನ್ನು ಕೊಡಬೇಕೆಂದು ಚರ್ಚೆಯನ್ನು ಪ್ರಾರಂಭ ಮಾಡಿದ್ದರು. ಆ ಹಣವನ್ನು ನಮ್ಮ ಸರ್ಕಾರ ಬಂದ ಮೇಲೆ ಆ ಮನೆಗಳಿಗೆ ಬಿಡುಗಡೆ ಮಾಡಿದ್ದರು. ಆದರೆ ಈ ಬಾರಿ ಏನಾಗಿದೆ 12 ಲಕ್ಷ ಮನೆಗಳನ್ನು ಮಾಡುತ್ತೇವೆ ಎಂದು ಹೇಳಿ 700 ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಹಿಂದೆ ಯಾರ್‍ಯಾರಿಗೆ ಮನೆಗಳನ್ನು ಬಿಡುಗಡೆ ಮಾಡಿತ್ತೋ ಅವರ ಹೆಸರುಗಳನ್ನು ಪುನ: ಈ ಪಟ್ಟಿಯಲ್ಲಿ ಬರುವುದಿಲ್ಲ. ಏಕೆಂದರೆ ಅದನ್ನು ಮಾವು ಅಪ್ರೂವ್ ಮಾಡಿಯಾಗಿದೆ. ಅವರಿಗೆ ಪುನ: ಡುಪ್ಲಿಕೇಷನ್ ಆಗಬಾರದು. ಅದಕ್ಕೂ ಸ್ವಲ್ಪ ಹಣವನ್ನು ಇಡುವ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಾ ಕದಡಿ ಪೋರ್ಟಿನ ಬಗ್ಗೆ ಹಿಂದಿನ ಅಂದಾಜು ಪಟ್ಟಿಯಲ್ಲಿ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈಗಾಗಲೇ ನಾವು ಅದರ ಬಗ್ಗೆ ಟೆಂಡರನ್ನು ಕರೆದು ಪ್ರೈವೇಟೈಜ್ ಮಾಡುವುದು ಎಂದು ಹೇಳಿ ತೀರ್ಮಾನವನ್ನು ಮಾಡಿದ್ದೇವೆ. ಪುನ: ಅದಕ್ಕೆ 5 ಕೋಟಿ ರೂಪಾಯಿಗಳ ಅಗತ್ಯ ಬರುವುದಿಲ್ಲ. ಅದನ್ನು ಬೇರೆಯದಕ್ಕೆ ಉಪಯೋಗ ಮಾಡಬಹುದು. ಕಾರವಾರದಲ್ಲಿ ಡ್ರೆಡ್ಜಿಂಗನ್ನು ಮಾಡಿದ್ದೇವು. ಅದಕ್ಕೆ ಹಣವನ್ನು ಕೊಟ್ಟಿಲ್ಲ. ಇದರಲ್ಲಿ ಅದಕ್ಕೆ ಹಣವನ್ನು ಇಟ್ಟಿಲ್ಲ. ಈ 5 ಕೋಟಿ ರೂಪಾಯಗಳನ್ನು ಅಲ್ಲಿ ಪ್ರೈವೇಟೈಜ್ ಮಾಡುವಾಗ ಆ ತದ್ರಿ ಪೋರ್ಟಿಗೆ ಆವಶ್ಯಕತೆ ಇಲ್ಲ ಎಂದು ಹೇಳಿ, ಮುಖ್ಯವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಯಾವ ರೀತಿಯಲ್ಲಿ ಉಚ್ಚನ್ಯಾಯಾಲಯಗಳನ್ನು ತೆರೆಯಬೇಕೆಂದು ಬೇಡಿಕೆಯನ್ನು ಇಟ್ಟಿದ್ದಾರೆ, ನಾವು ಅಷ್ಟು ದೊಡ್ಡ ಬೇಡಿಕೆಯನ್ನು ಇಡುತ್ತಿಲ್ಲ. ಜಿಲ್ಲಾ ನ್ಯಾಯಾಲಯಗಳನ್ನು ಈಗ ಹೊಸ ಜಿಲ್ಲೆಯಾದ ಮೇಲೆ ಕೊಟ್ಟಿಲ್ಲ. ಅದಕ್ಕೆ ಹಿಂದೆ ಸಹಾ ನಾನು ಪ್ರಯತ್ನವನ್ನು ಮಾಡಿದೆ. ಹೈಕೋರ್ಟಿಗೆ ಅದರ ಬಗ್ಗೆ ನಮ್ಮ ಉಡುಪಿ ಜಿಲ್ಲಾ ನ್ಯಾಯವಾದಿಗಳ ಸಂಘದವರು ಒತ್ತಡವನ್ನು

ಇಟ್ಟಿದ್ದಾರೆ ನಾನು ಮೊನ್ನೆ ದಿವಸ ಮಾನ್ಯ ಚಂದ್ರೇಗೌಡರ ಹತ್ತಿರ ಇದರ ಬಗ್ಗೆ ಚರ್ಚೆಯನ್ನು ಮಾಡಿದೆ. ಅವರು ಹೇಳಿದರು, ಹೊಸ ಕಟ್ಟಡವನ್ನು ಕಟ್ಟಿದ ಮೇಲೆ ನ್ಯಾಯಾಲಯವನ್ನು ತೆರೆಯುವುದಾದರೆ ವರದು ಮತ್ತು ನಮ್ಮದು ಇಬ್ಬರ ಅವಧಿಯೂ ಮುಗಿದಿರುತ್ತದೆ. ಏಕೆಂದರೆ ಈ ಅಂದಾಜು ಪಟ್ಟಿಯಲ್ಲೂ ಸಹ ಹಣವನ್ನು ಇಟ್ಟಿಲ್ಲ. ಪುನ: ಅಂದಾಜುಪಟ್ಟಿಯಲ್ಲಿ ಹಣವನ್ನು ಇಟ್ಟು ಕೋರ್ಟಿನ ಕಟ್ಟಡವನ್ನು ಕಟ್ಟಿ ಪ್ರಾರಂಭ ಮಾಡುವುದಕ್ಕೆ ಇನ್ನು ಐದು ವರ್ಷಗಳಾಗುತ್ತದೆ. ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ ಈಗ ಇರುವ ಕಟ್ಟಡದಲ್ಲೇ ಸ್ವಲ್ಪ ಬದಲಾವಣೆಯನ್ನು ಮಾಡಿ. ಒಂದು ಕೋರ್ಟ್ ಹಾಲ್ ಈಗ ಇದೆ ಎಂದು ಸಂಘದವರು ಹೇಳುತ್ತಾರೆ. ಅದರಲ್ಲಿಯೇ ಪ್ರಾರಂಭ ಮಾಡಿದರೆ ಬಂದಂಥ ಜಿಲ್ಲಾ ನ್ಯಾಯಾಧೀಶರು ಇನ್ನು ಏನೇನು ಬೇಕೊ ಅದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು :— ತಾವು ಏನು ಡಿಮ್ಯಾಂಡ್ ಇದೆಯೋ, ಅದರ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಜಯಪ್ರಕಾಶ್ ಹೆಗಡೆ :— ಆ ಡಿಮ್ಯಾಂಡ್‌ನಲ್ಲಿ ಇದನ್ನು ಸೇರಿಸಬೇಕೆಂದು ಹೇಳುತ್ತಿರುವುದು.

ಅಧ್ಯಕ್ಷರು :— ಹೊಸದಾಗಿ ಎಲ್ಲಾ ಹೇಳುತ್ತಿದ್ದೀರಲ್ಲ.

ಶ್ರೀ ಜಯಪ್ರಕಾಶ್ ಹೆಗಡೆ :— ಈಗ ಕೇಳದೆ ಇದ್ದರೆ ಇನ್ನು ಹೊಸ ಅಂದಾಜುಪಟ್ಟಿ ಬರುವುದು ಮಾರ್ಚಿಗೆ. ಆಗ ನ್ನು ಮಾತನಾಡಬೇಕಾಗುತ್ತದೆ. ಈ ಬೇಡಿಕೆಯಲ್ಲೇನಾದರೂ ಸೇರಿಸುವುದಕ್ಕೆ ಸಾಧ್ಯವಾದರೆ ಜಿಲ್ಲಾ ನ್ಯಾಯಾಲಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಹಕಾರವನ್ನು ಕೊಟ್ಟಿದ್ದರೆ ಬಹಳ ಸಂತೋಷವಾಗುತ್ತಿತ್ತು. ಮೊನ್ನೆ ನಾನು ಮತ್ತು ಮಾನ್ಯ ಸಿಂಧ್ಯಾರವರು ಒಂದು ವಿಷಯವನ್ನು ಚರ್ಚೆ ಮಾಡಿದೆವು. ಬಚ್ಚೇಗೌಡರು ಸಂಸದರಿಗೆ 1 ಎರಡು ಕೋಟಿ ರೂಪಾಯಿಗಳ ಅನುದಾನ ಅವರ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದವರು ಕೊಡುತ್ತಾರೆಂದು ಹೇಳಿದರು. ನಮಗೆ ಆ ರೀತಿ ಅಭಿವೃದ್ಧಿ ಹಣವನ್ನು ಇಟ್ಟಿಲ್ಲ. ಆದರೆ ಸಂಸದರಿಗೆ ಡೆಪ್ಯೂಟಿ ಮಿನಿಸ್ಟರ್ ಕೇಡರ್‌ನ್ನು ಕೊಟ್ಟು ಅವರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡುವುದರ ಬಗ್ಗೆ ಸದನದಲ್ಲಿ ಚರ್ಚೆಯನ್ನು ಮಾಡಿತ್ತು. ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆಯನ್ನು ಮಾಡಿ ಇದರ ಬಗ್ಗೆ ಮಾಹಿತಿಯನ್ನು ಕೊಡುತ್ತೇವೆಂದು ಹೇಳಿದ್ದರು. ಪ್ರಾಯಶ: ತಾವು ಚರ್ಚೆಯನ್ನು ಮಾಡಿರಲಿಕ್ಕಿಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಮ್ಮ ಮುಖೇನ ತರುವುದಕ್ಕೆ ಪ್ರಯತ್ನ ಪಡುತ್ತೇನೆ. ತಾವು ಅವರ ಹತ್ತಿರ ಚರ್ಚೆಯನ್ನು ಮಾಡಿ ನಮಗೆ ಹೇಳಿದರೆ ಸಾಕು. ಅಥವಾ ಈ ಸದನದಲ್ಲಿ ಪುನ: ಅವರು ಇದ್ದಾಗ ಇನ್ನೊಂದು ಸಾರಿ

ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟರೆ ಬಹಳ ಒಳ್ಳೆಯದು. ಏಕೆಂದರೆ ಇದು ಎಲ್ಲಾ ಶಾಸಕರ ಒಂದು ಅಭಿಪ್ರಾಯವಾಗಿದೆ. ಹೆಚ್ಚಿನವರು ಬಂದು ಇದರ ಬಗ್ಗೆ ನನ್ನ ಹತ್ತಿರ ಹೇಳಿದರು. ನೂರು ಕೋಟಿ ರೂಪಾಯಿಗಳ ಒಂದು ನಿಧಿಯನ್ನು ಮಾಡಿ ಮಾರ್ಕೆಟ್ ಇಂಟರ್‌ವೆನ್ಷನ್ನು ಸರ್ಕಾರ ಮಾಡುತ್ತದೆಂದು ಕೇಳಿದ್ದಾರೆ. ಅದರ ಬಗ್ಗೆ ಇದರಲ್ಲೇನು ಇಲ್ಲ. ಆದರೆ ಮೊನ್ನೆ ದಿವಸ ನಾನು ತೆಂಗು ಬೆಳೆಯ ಬೆಲೆ ಕುಸಿತದ ಬಗ್ಗೆ ಮಾತನಾಡಿದಾಗ ಸರ್ಕಾರ ಉತ್ತರ ಕೊಡುವಾಗ ಸರ್ಕಾರ ಮಾರ್ಕೆಟ್‌ನಲ್ಲಿ ಯಾವುದೇ ರೀತಿಯ ಇಂಟರ್‌ವೆನ್ಷನ್ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದೆ ಒಂದು ಕಡೆಯಲ್ಲಿ ನೂರು ಕೋಟಿ ರೂಪಾಯಿಗಳ ಮಾರ್ಕೆಟ್ ಇಂಟರ್‌ವೆನ್ಷನ್‌ಗೆ ಇಡುತ್ತೇವೆಂದು ಹೇಳುತ್ತೀರಿ. ಇನ್ನೊಂದು ಕಡೆಯಲ್ಲಿ ನಾವು ಆ ಕಾರ್ಯಕ್ರಮವನ್ನು ಇಟ್ಟಿಲ್ಲ ಎಂದು ಮಾನ್ಯ ತೋಟಗಾರಿಕಾ ಸಚಿವರ ಪರವಾಗಿ ಕೃಷಿ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 100 ಕೋಟಿ ರೂಪಾಯಿಗಳನ್ನು ಇಟ್ಟದ್ದು ಹೌದೆಂದಾರೆ ಇಮ್ಮಿಡಿಯೇಟ್ ಆಗಿ ಮಾರ್ಕೆಟ್ ಇಂಟರ್‌ವೆನ್ಷನ್ ಮಾಡಬೇಕು. ಕೇವಲ ತೆಂಗು ಬೆಳೆ ಒಂದೇ ಅಲ್ಲ ಎಲ್ಲಾ ಬೆಳೆಗಳ ಬೆಲೆ ಕುಸಿತ ಎನಾಗಿದೆ, ಎಲ್ಲದರ ಬಗ್ಗೆಯೂ ಮಾರ್ಕೆಟ್ ಇಂಟರ್‌ವೆನ್ಷನ್‌ನನ್ನು ಸರ್ಕಾರ ಮಾಡಬೇಕು. ನಾನು ಒಂದು ಬೆಳೆ ಬಗ್ಗೆ ಹೇಳುವುದಿಲ್ಲ. ರೈತರು ಎಂದರೆ ಯಾವ ಯಾವ ಬೆಳೆಯನ್ನು ಬೆಳೆಯುತ್ತಾರೆ, ಎಲ್ಲಾ ಬೆಳೆಯ ಬಗ್ಗೆಯೂ ಮಾರ್ಕೆಟ್ ಇಂಟರ್‌ವೆನ್ಷನ್‌ನನ್ನು ಸರ್ಕಾರ ಮಾಡಬೇಕು ಎಂದು ಹೇಳಿ ತಾವು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದಿರುವ ಪೂರಕ ಬಜೆಟ್ ಟಿಪ್ಪಣಿ ಸಂ.1, ಬಾಬ್ತು ಸಂಖ್ಯೆ 5ರಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನ ಬ್ಯಾಂಕಿನ ಸಾಲ ಚುಕ್ತಾ ಮಾಡುದಕ್ಕೆ ಮತ್ತು ಅಲ್ಲಿನ ನೌಕರರಿಗೆ ಸಂಬಳ ಎರಡು ತಿಂಗಳ ಸಂಬಳವನ್ನು ಕೊಡುವ ಕಾರಣಕ್ಕಾಗಿ 1322 ಲಕ್ಷ ರೂಪಾಯಿಗಳನ್ನು ಸಾದಿಲ್ವಾರು ನಿಧಿಯಿಂದ ತೆಗೆದುಕೊಳ್ಳಲಾಗಿದೆ. ಅದನ್ನು ವಾಪಸ್ ತುಂಬಲಿಕ್ಕೋಸ್ಕರ ತಾವು ಪೂರಕ ಅಂದಾಜಿನಲ್ಲಿ ಬೇಡಿಕೆಯನ್ನು ಮಂಡನೆ ಮಾಡಿದ್ದೀರಿ. ಸಾರ್ವ ಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಆದರ ಮೇಲೆ ಒಂದು ರಿಪೋರ್ಟ್ ಕೂಡ ಇದೆ. ಅದನ್ನು ನೋಡಿದರೆ ಆಶ್ಚರ್ಯ ಆಗುತ್ತದೆ. ಈ ಸ್ಥಿತಿಯಲ್ಲಿ ಇದನ್ನು ನಡೆಸುವುದಕ್ಕಿಂತ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅನ್ನು ಬೀಗ ಹಾಕಿ ಇಡುವಂತಹದು ಬಹಳ ಒಳ್ಳೆಯದು. ಮುಚ್ಚುವುದು ಒಳಿತು. ಏಕೆಂದರೆ ಬಹಳ ಹಿನ್ನಲೆ ಇಟ್ಟುಕೊಂಡು ರೈತರು ಉದ್ಧಾರವಾಗಲಿ, ಇದರ ಉಪಕರಣಗಳು, ಬೀಜ, ಗೊಬ್ಬರ ರೈತರಿಗೆ ಒಳ್ಳೆಯ ಉದ್ದೇಶಕ್ಕೋಸ್ಕರ ಸಿಗಲಿ ಎಂದು ಹೇಳಿ ಆರಂಭ ಮಾಡಿರತಕ್ಕಂಥ ಸಂಸ್ಥೆ. ಅಲ್ಲಿ ಹಾಕಿರತಕ್ಕಂಥ ಅಧಿಕಾರಿಗಳು ಮತ್ತು ಅವರ ಅವ್ಯವಹಾರದಿಂದಾಗಿ ಸಾಕಷ್ಟು ದೊಡ್ಡ ಹಾನಿಯನ್ನು ಅನುಭವಿಸಿದೆ. ಇವತ್ತು ಆ ಸಂಸ್ಥೆ ಹಾನಿ ಆದರೆ ರೈತರಿಗೆ ಹಾನಿ ಆಗುತ್ತದೆ. ಈ ಸ್ಥಿತಿಯಲ್ಲಿ ಇವತ್ತು

ಸಂಬಳ ಕೊಡುವುದಕ್ಕೆ ಸಾದಿಲ್ವಾರು ನಿಧಿಯಿಂದ ಎತ್ತಿಕೊಡುವಂತಹ ಪರಿಸ್ಥಿತಿ ನಿರ್ಮಾಣ ಆಗುವುದಾದರೆ, ಅದು ಮಾಡತಕ್ಕಂಥ ಸಾಕಷ್ಟು ವ್ಯವಹಾರಗಳು ಇವೆ. ಇವತ್ತು ಪವರ್ ಟಿಲ್ಲರ್ ತೆಗೆದುಕೊಳ್ಳುವುದಾದರೆ ಸಬ್ಸಿಡಿ ಕೊಡುವುದಾದರೆ ಅಲ್ಲೇ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ವ್ಯವಸಾಯ ಇಲಾಖೆಯ ಮಂತ್ರಿಗಳು ಈಗಾಗಲೇ ಒಂದು ಸುತ್ತೋಲೆಯನ್ನು ಕೊಟ್ಟಿದ್ದಾರೆ. ಬೇರೆ ಕಡೆ ಕೊಂಡುಕೊಂಡರೆ ಸಹಾಯಧನ ಸಿಗುವುದಿಲ್ಲ. ಅಲ್ಲೇ ತೆಗೆದುಕೊಳ್ಳುತ್ತೇವೆ. ಎಲ್ಲವನ್ನೂ ಕೂಡ ಅಲ್ಲೇ ತೆಗೆದುಕೊಂಡರು ಸಾಕಷ್ಟು ಲಾಭ ಗಳಿಸುವಂತಹ ವ್ಯವಹಾರ ಅಲ್ಲಿ ಆದರೂ ಕೂಡ ಅಲ್ಲಿ ನೌಕರರಿಗೆ ಸಂಬಳ ಕೊಡಲು ಯೋಗ್ಯತೆ ಇಲ್ಲ. ಬ್ಯಾಂಕಿನ ಸಾಲವನ್ನು ಚುಕ್ತಾ ಮಾಡಲಿಕ್ಕೆ ಸಾಧ್ಯ ಇಲ್ಲ ಎಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ತಾವು ಗಮನಿಸಬೇಕು. ಸ್ವತಃ ಆ ಇಲಾಖೆಯೇ ಸರಿ ಇಲ್ಲ. ಬೇರೆ ಬೇರೆ ಇಲಾಖೆಗಳಿಗೆ ಅದು ಸಾಲ ಕೊಟ್ಟಿದೆ. ಅದನ್ನು ವಸೂಲಿ ಮಾಡಿ. ಅದು ಬೇರೆ ಬೇರೆ ಕಾರ್ಪೊರೇಷನ್ ಮೇಲೆ ಹಾಕಿರತಕ್ಕಂಥ ಶೇರು ಬಂಡವಾಳವನ್ನು ವಾಪಸ್ ತೆಗೆದುಕೊಳ್ಳಿ. ಆಗ ಬಹುಶಃ ಸಾದಿಲ್ವಾರು ನಿಧಿಯಿಂದ ಹಣ ಕೊಡುವಂತಹ ಅವಶ್ಯಕತೆ ಬರುವುದಿಲ್ಲ. ದಯವಿಟ್ಟು ಅದರ ಆಡಳಿತದ ಬಗ್ಗೆ ಸರಿಯಾದ ರೀತಿಯ ಗಮನ ಹರಿಸದೇ ಹೋದರೆ ತುಂಬಾ ದೊಡ್ಡ ಹಾನಿ ಕರ್ನಾಟಕ ರಾಜ್ಯದ ರೈತರಿಗೆ ಆಗುತ್ತದೆ. ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಆ ಸಂಸ್ಥೆ ಇವತ್ತು ನಡೆಯುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕೃಷಿ ಸಚಿವರು) :— ಮಾನ್ಯ ಅಧ್ಯಕ್ಷರೇ, 89 ಕೋಟಿ ರೂಪಾಯಿ ಇಲ್ಲಿಯವರೆಗೆ ನಷ್ಟ ಆಗಿರತಕ್ಕಂಥದ್ದು ಅದನ್ನು ಒನ್ ಟೈಮ್ ಸೆಟಲ್‌ಮೆಂಟ್ ಮಾಡುವುದರಿಂದ ನಮಗೆ ಸಾಕಷ್ಟು ರೀತಿಯಲ್ಲಿ ಕನ್ಸೆಷನ್ ಸಿಗುತ್ತದೆ ಎಂದು ಬ್ಯಾಂಕಿನವರು ಮುಂದೆ ಬಂದಿದ್ದರಿಂದ ಅದನ್ನು ಸೆಟಲ್‌ಮೆಂಟ್ ಮಾಡುವುದಕ್ಕೋಸ್ಕರ ನಾವು ಹಣವನ್ನು ಕೊಟ್ಟು ಇವತ್ತು ಸೇವಿಂಗ್ಸ್ ಆಗಿದೆ.

ಶ್ರೀ ಅರಗ ಜ್ಞಾನೇಂದ್ರ :— ನಾನು ಹೇಳುವುದು, ಇದು ನೀವು ಒಂದು ಸಾರಿ ಸೆಟಲ್‌ಮೆಂಟ್ ಮಾಡುತ್ತೀರಿ. ಮುಂದಿನ ಸಾರಿಯೂ ನೀವು ಸಾದಿಲ್ವಾರು ನಿಧಿಯಿಂದ ಹಣವನ್ನು ಕೊಡಬೇಕಾಗುತ್ತದೆ. ಇದೇ ಪರಿಸ್ಥಿತಿಯಲ್ಲಿ ಅದರ ಅಡ್ಮಿನಿಸ್ಟ್ರೇಷನ್ ನಡೆದರೆ ನೀವು ಸಾದಿಲ್ವಾರು ನಿಧಿಯಿಂದ ಹಣ ಕೊಡಬೇಕಾಗುತ್ತದೆ. ಅದನ್ನು ಏನಾದರೂ ಬದಲಾವಣೆ ಮಾಡಿ ಅದಕ್ಕೊಂದು ಸರಿಯಾದಂತಹ ಇಂಜೆಕ್ಷ್ ಮಾಡುವಂತಹ ಕೆಲಸವನ್ನು ತಾವು ಮಾಡದೇ ಹೋದರೆ ಅದನ್ನು ಬೀಗ ಹಾಕಿ ಇಡುವಂಥದ್ದು ತುಂಬಾ ಒಳ್ಳೆಯದಾಗುತ್ತದೆ. ಇನ್ನೊಂದು ಟಿಪ್ಪಣಿ ನಂಬರ್-6, ಸಂಕ್ಷೆ ನಂಬರ್-2 ಎರಡರಲ್ಲಿ ಮೈಸೂರು ಖನಿಜ ನಿಗಮದ ವಿಚಾರ ಇದೆ. ಇದಕ್ಕೆ ಸ್ವಯಂ ನಿವೃತ್ತಿಯನ್ನು ಘೋಷಣೆ ಮಾಡಿ ನೌಕರರಿಗೆ 2.5 ಕೋಟಿ ರೂಪಾಯಿ ಸಾದಿಲ್ವಾರು ನಿಧಿಯಿಂದ ಕೊಟ್ಟಿದ್ದೀರಿ. ಅಲ್ಲಿ ಕೂಡ ಅದೇ ಪರಿಸ್ಥಿತಿ ಇದೆ. ಅದಕ್ಕೆ ಒಂದು ದೊಡ್ಡ ಹಾನಿ ಆಗಿರತಕ್ಕದ್ದು. ಎಂದರೆ ಅರಣ್ಯ

ಇಲಾಖೆಯ ವ್ಯಾಪ್ತಿಯೊಳಗೆ ಇರುವಂತಹ ಅನೇಕ ಮೈನ್ಸ್‌ಗಳನ್ನು ನಡೆಸಲಿಕ್ಕೆ ಆಗದೇ ಅಲ್ಲಿ ಮುಚ್ಚಿದ್ದರಿಂದಾಗಿ ವ್ಯಾಪಕವಾಗಿ ಅಲ್ಲಿರುವಂತಹ ನೌಕರರಿಗೆ ಸಂಬಳ ಕೊಡುವಂತಹದು ಕಷ್ಟ ಆಗಿದೆ. ಆದರೆ ನಾವು ಹೇಳುವಂತಹದು, ಕಳೆದ ಅಧಿವೇಶನದಲ್ಲಿ ಹಾಗೂ ಅದರ ಹಿಂದಿನ ಅಧಿವೇಶನದಲ್ಲಿ ಕೂಡ ನಾನು ಪ್ರಸ್ತಾಪ ಮಾಡಿದ್ದೆ. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಜನ ನೌಕರರು ಇದ್ದಾರೆ. ಸಾವಿರಾರು ಜನ ಇದ್ದಾರೆ. ದಯವಿಟ್ಟು ಬೇರೆ ಬೇರೆ ಇಲಾಖೆಯಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳು ಇದ್ದಾವೆ. ನೀವು ಅವರಿಗೆ ಸ್ವಯಂ ನಿವೃತ್ತಿ ಘೋಷಣೆ ಮಾಡುವ ಬದಲು ಬೇರೆ ಬೇರೆ ಇಲಾಖೆಯಲ್ಲಿ ಖಾಲಿ ಇರುವಂತಹ ಡ್ರೈವರ್ ಹುದ್ದೆ, ನಾಲ್ಕನೇ ದರ್ಜೆ ಹುದ್ದೆಗಳಿಗೆ ತುಂಬಬಹುದು. ಎಲ್ಲ ಹುದ್ದೆಗಳೂ ಇವೆ ಇದನ್ನು ಏಕೆ ಅಲ್ಲಿಗೆ ಡೈವರ್ಟ್ ಮಾಡಬಾರದು? ಏಕೆ ಈ ರೀತಿ ಸಾದಿಲ್ವಾರು ನಿಧಿಯಿಂದ ಕೊಡಬೇಕು? ಆದರ ಆಡಳಿತಕ್ಕೋಸ್ಕರ ಮೂರು ಮೂರು ತಿಂಗಳಿಗೊಮ್ಮೆ ಒಬ್ಬೊಬ್ಬ ಎಂಡಿಯನ್ನು ಹಾಕುತ್ತೀರಿ. ಅವರು ಹೋಗಿ ಛಾರ್ಜ್ ತೆಗೆದುಕೊಂಡು ಸೀಟಿನಲ್ಲಿ ಕೂರುವುದರೊಳಗಾಗಿ ಅವರ ಬದಲಾವಣೆ ಆಗುತ್ತದೆ. ಆ ಎಂ.ಡಿ.ಗಳಿಗೆ ಅಲ್ಲಿಯ ಕೆಲಸ ಏನೂ ಎತ್ತ ಎಂದು ಒಂದೂ ಗೊತ್ತಾಗುವುದಿಲ್ಲ. ಇಂತಹ ಒಂದು ಸ್ಥಿತಿಯಲ್ಲಿ ಆ ಇಲಾಖೆ ಕೂಡ ನಡೆಯುತ್ತಿದೆ. ಹೀಗೆ ಸಾದಿಲ್ವಾರು ನಿಧಿಯಿಂದ ಇದಕ್ಕೆಲ್ಲಾ ತೆಗೆದುಕೊಡುತ್ತಾ ಹೋದರೆ ಇನ್ನೆಷ್ಟು ಪೂರಕ ಬಜೆಟ್‌ಗಳನ್ನು ಮಂಡನೆ ಮಾಡಬೇಕಾಗುತ್ತದೋ ಇನ್ನೆಷ್ಟು ಕೋಟಿ ರೂಪಾಯಿಗಳನ್ನು ಅಭಿಯೋಜನೆ ಮಂಡನೆ ಮಾಡಬೇಕಾಗುತ್ತದೋ ಎನ್ನುವಂತಹದು ನಮಗೆ ಅರ್ಥ ಆಗುವುದಿಲ್ಲ. ವಿಶೇಷವಾಗಿ ಬಳ್ಳಾರಿ ಜಿಲ್ಲೆಗೆ ಕೊಟ್ಟಿದ್ದೀರಿ. ಟಿಪ್ಪಣಿ ನಂಬರ್ 44, 46ರಲ್ಲಿ ತಾವು ಪ್ರಸ್ತಾಪ ಮಾಡಿ 170 ಲಕ್ಷ ಮತ್ತು 1456 ಲಕ್ಷ ಕೊಟ್ಟಿದ್ದೀರಿ. ಅಲ್ಲಿ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದ ರಸ್ತೆಯ ಅಭಿವೃದ್ಧಿಗೋಸ್ಕರ ಕೊಟ್ಟಿದ್ದೀರಿ. ಬಹಳ ಸಂತೋಷ ಆಯಿತು. ಅಷ್ಟೇ ಹಿಂದುಳಿದಿರತಕ್ಕ ಬೇರೆ ಬೇರೆ ಜಿಲ್ಲೆಗಳು ಇದ್ದಾವೆ. ಅದಕ್ಕಿಂತಲೂ ಹಿಂದುಳಿದಿರತಕ್ಕಂತಹ ಜಿಲ್ಲೆಗಳು ಇವೆ. ನಿಮ್ಮ ಪಕ್ಷದ ಶಾಸಕರನ್ನೇ ಅಲ್ಲಿಂದ ಗೆಲ್ಲಿಸಿದ್ದಾರೆ. ಬೇರೆ ಜಿಲ್ಲೆಗಳಿಗೆ ಸಿಗದಿರುವುದು ಬಳ್ಳಾರಿ ಜಿಲ್ಲೆಗೆ ಸಿಕ್ಕಿತು? ಅದು ಹೇಗೆ ಸಿಕ್ಕಿತು ಎನ್ನುವಂಥದ್ದು ನಮಗೆ ಆತಂಕದ ವಿಚಾರ. ನಿಮ್ಮ ಪಕ್ಷದ ಅಧ್ಯಕ್ಷರನ್ನು ಅಲ್ಲಿ ನಿಲ್ಲಿಸಿ ಗೆಲ್ಲಿಸಿ ಆ ಜನರಿಗೆ ಏನೋ ಆಶ್ವಾಸನೆ ಕೊಟ್ಟಿದ್ದಾರೆ ಎನ್ನುವ ಕಾರಣಕ್ಕಾಗಿ ಇಷ್ಟೊಂದು ದುಡ್ಡು ಕೊಟ್ಟಿದ್ದೀರಿ. ನಿಮ್ಮ ಪಕ್ಷದ ಶಾಸಕರನ್ನೇ ಬೇರೆ ಬೇರೆ ಭಾಗದಲ್ಲಿ ಜನ ಗೆಲ್ಲಿಸಿದ್ದಾರಲ್ಲ, ಆ ಹಿಂದುಳಿದಿರತಕ್ಕಂಥಹ ಪ್ರದೇಶಕ್ಕೂ ಕೂಡ ಇಷ್ಟೇ ಕೊಡಬಹುದಾಗಿತ್ತಲ್ಲ. ಸ್ಪೆಷಲ್ ಪ್ಯಾಕೇಜನ್ನು ಮಾಡಬಹುದಾಗಿತ್ತು. ಒದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಏಕೆ? ಇದನ್ನು ಏಕೆ ಈ ರೀತಿ ಮಾಡುತ್ತಿದ್ದೀರಿ ಎನ್ನುವಂತಹದನ್ನು ಕೂಡ ನೀವು ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಆಮೇಲೆ ನಮ್ಮ ಪಶುಸಂಗೋಪನಾ ಇಲಾಖೆ ಇದೆ. ಕೇವಲ ಐದು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಏನೂ ದುಡ್ಡು ಇಲ್ಲ. ಒಂದು ಹಸುವಿಗೆ 50 ಪೈಸೆ. ಒಟ್ಟಾರೆ ರಾಜ್ಯದಲ್ಲಿರತಕ್ಕಂಥ

ಹಸುವಿನ ಸಂಖ್ಯೆ ಮತ್ತು ಇವರು ಕೊಟ್ಟಿರುವಂತಹ ಹಣದ ಸಂಖ್ಯೆ ಲೆಕ್ಕಾಚಾರ ಮಾಡಿದರೆ 50 ಪೈಸೆ ಆಗುತ್ತದೆ. ಮೊನ್ನೆ ದಿನ ನನಗೆ ಸ್ವಲ್ಪ ಬೇಜಾರು ಆಯಿತು. ನಮ್ಮೂರಿನಲ್ಲಿ ಕಾಲುಬಾಯಿ ಜ್ವರ ಔಟ್‌ಬ್ರೇಕ್ ಆಗಿದೆ. ನಾನು ನಿಮ್ಮ ಹತ್ತಿರ ಪ್ರಸ್ತಾಪ ಮಾಡಿದ ಮೇಲೆ ಜಾಯಿಂಟ್ ಡೈರೆಕ್ಟರ್ ಬಂದು ನಮ್ಮೂರಿನ ಜಾನುವಾರುಗಳಿಗೆ ಹೇಳಿ ಹೋಗಿದ್ದಾರೆ. ನಮ್ಮ ಸರ್ಕಾರದಲ್ಲಿ ದುಡ್ಡು ಇಲ್ಲ. ನಿಮ್ಮ ಈ ಖಾಯಿಲೆ ವಾಸಿ ಮಾಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ನೀವು ಏನಾದರೂ ಆಗಿರಿ ಎಂದು ಹೇಳಿದ್ದಾರೆ. ಅವೆಲ್ಲಾ ಕುಣಿದು ಕುಪ್ಪಳಿಸಿ, ಸಂತೋಷಪಟ್ಟು ಸಾಯುತ್ತವೆ. ನಾನು ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ ಆಗಿರತಕ್ಕಂಥ ರೀತಿ ಇದು. ಏಕೆಂದರೆ ಅದಕ್ಕೆ ಸ್ವಲ್ಪ ನಿಮ್ಮ ಸಾದಿಲ್ವಾರು ನಿಧಿಯಿಂದ ಕೊಡಲಿಕ್ಕೆ ಏನಾಗಿತ್ತು? ಸ್ವಲ್ಪ ಔಷಧಿ ಕೊಡಬಹುದಲ್ಲ. ಇಂತಹ ಔಟ್‌ಬ್ರೇಕ್ ಆದಂತಹ ಪರಿಸ್ಥಿತಿಯಲ್ಲಿ ಯಾರನ್ನಾದರೂ ಇಲ್ಲಿಂದ ಕಳುಹಿಸಿ ಏನಾದರೂ ಒಂದಿಷ್ಟು ಔಷಧಿ ಕೊಂಡುಕೊಳ್ಳುವುದಕ್ಕೆ ಹೋಗಲಿಕ್ಕೆ ಅವರ ಹತ್ತಿರ ಒಂದು ಪೈಸೆ ದುಡ್ಡು ಅಲ್ಲಿ ಇಲ್ಲ. ಒಂದಿಷ್ಟು ಸರ್ಕಾರಿ ನೌಕರರಿಗೆ ಸಂಬಳ ಕೊಟ್ಟುಕೊಂಡು ಆರಾಮವಾಗಿ ಇರಲಿಕ್ಕೋಸ್ಕರ ಒಂದು ಇಲಾಖೆ, ಒಬ್ಬರು ಮಂತ್ರಿಯನ್ನು ಏತಕ್ಕಾಗಿ ನೇಮಿಸಬೇಕು ಎಂಬುದನ್ನು ದಯವಿಟ್ಟು ಹೇಳಿ. ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಉಪಕಾರ ಮಾಡತಕ್ಕಂಥಹ 5-10 ಕೋಟಿ ರೂಪಾಯಿಗಳು ಜಾಸ್ತಿ ಕೊಟ್ಟಿದ್ದರೆ ಏನಾಗುತ್ತಿತ್ತು ಹೇಳಿ. ಇನ್ನೊಂದು ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರಿಗೆ ಸಂಬಳವನ್ನು ಕೊಡದೇ ಮೂರು ತಿಂಗಳಿಗೆ ಒಂದು ಸಾರಿ ಸಂಬಳ. ಸಂಬಳ ಕೊಡಲಿಕ್ಕೆ ದುಡ್ಡು ಇಲ್ಲ. ಏಕೆಂದರೆ ಕೆಲವು ಬಜೆಟ್‌ನ ಹೆಡ್‌ನಲ್ಲಿ ದುಡ್ಡು ಇಲ್ಲ ಎಂದು ಶಿವಮೊಗ್ಗ ಜಿಲ್ಲಾ ಪರಿಷತ್‌ನಲ್ಲಿ ಹೇಳುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದಾರೆ. ಜಗಳ ಮಾಡಿ ಅವರೆಲ್ಲಾ ಸ್ಟ್ರೈಕ್ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಬರುವ ದಿವಸ ದೊಡ್ಡ ಸ್ಟ್ರೈಕ್ ಮಾಡಬೇಕು ಎಂದು ಹೇಳಿ ವಿಚಾರ ಮಾಡಿದ್ದರು. ಶಿವಮೊಗ್ಗ ಜಿಲ್ಲೆಯಲ್ಲಿ ನಾನು ಹೇಳಿದೆ, ಪ್ರಥಮ ಬಾರಿಗೆ ನಮ್ಮ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ. ನಾವು ಏನಾದರೂ ಅವರಿಂದ ವಿಶೇಷವಾದಂತಹ ಅನುದಾನವನ್ನು ಪಡೆಯಬೇಕಾಗುತ್ತದೆ. ದಯವಿಟ್ಟು ನೀವು ಸ್ಟ್ರೈಕ್ ಮಾಡುವುದಕ್ಕೆ ಕಪ್ಪು ಬಾವುಟ ಹಾರಿಸುವುದಕ್ಕೆ ನೀವು ಅಲ್ಲಿಗೆ ಹೋಗುವುದು ಬೇಡ. ನಾವು ಅವರ ಹತ್ತಿರ ಪ್ರಸ್ತಾಪ ಮಾಡಿ ಏನಾದರೂ ಪರಿಹಾರ ಸಿಗುವ ಹಾಗೆ ಮಾಡುತ್ತೇವೆ ಎಂದು ಹೇಳಿದೆ. ಜಿಲ್ಲಾ ಪಂಚಾಯತಿನಲ್ಲಿ ಕೇಳಿದರೆ ಅವರು ಹೇಳುತ್ತಾರೆ, ಸಾರ್ ಪ್ರತಿ ವರ್ಷ ಬಜೆಟ್‌ನಲ್ಲಿ ಸೇರಬೇಕಾಗುತ್ತದೆ, ಹದಿಮೂರು ವರ್ಷದಿಂದ ಖೋತಾ ಆಗುತ್ತಿದೆ ಎಂದು ಹೇಳಿದರು. ಇದನ್ನೆಲ್ಲಾ ಪೂರಕ ಬಜೆಟ್‌ನಲ್ಲಿ ತಂದು ಸೇರಿಸಿ ಇದನ್ನು ಸರಿಪಡಿಸತಕ್ಕಂಥಹ ಕೆಲಸ ಆಗಬೇಕು. ಇದಾಗದಿದ್ದರೆ ಸಂಬಳ ಒಂದನೇ ತಾರೀಖು ಕೊಡದೇ ಹೋದರೆ ಯಾರು ದುಡಿಯುತ್ತಾರೆ ಹೇಳಿ? ಇನ್ನೊಂದು ವಿಚಾರ ಎಂದರೆ ಲೋಕೋಪಯೋಗಿ ಇಲಾಖೆಯಲ್ಲಿ ಹೊಂಡ ಮುಚ್ಚುವುದಕ್ಕೆ ದುಡ್ಡು ಇಲ್ಲ. 30:54ನಲ್ಲಿ ಎರಡು ವರ್ಷದಿಂದ ಬಿಲ್ ಎಲ್ಲಾ

ಬಾಕಿ ಉಳಿದಿದ್ದಾವೆ. ನಮ್ಮ ಊರಿನ ರಸ್ತೆಯ ಹೊಂಡ ಮುಚ್ಚುವುದಕ್ಕೆ ಯಾವ ಕಂಟ್ರಾಕ್ಟ್‌ದಾರರೂ ಮುಂದೆ ಬರುವುದಿಲ್ಲ. ಗುತ್ತಿಗೆದಾರರೆಲ್ಲಾ ಅವರವರ ಆಸ್ತಿ, ಬಂಗಾರಗಳನ್ನು ಅಡವಿಟ್ಟು ಹಣಕಾಸು ಸಂಸ್ಥೆಗಳಲ್ಲಿ ಸಾಲ ತಂದು ದುಡ್ಡು ಸಿಗುತ್ತದೆ ಎಂದು ಕೆಲಸ ಮಾಡಿದ್ದಾರೆ. ಕೆಲಸ ಮಾಡಿ ಹರಾಜು ಆಗಿ ಹೋಗಿದ್ದಾರೆ. ನಾವು ಹೊಂಡ-ಗುಂಡಿ ಮುಚ್ಚುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಒಂದು ಬ್ಯಾರೆಲ್ ಟಾರನ್ನು ಕೂಡ ಅಲ್ಲಿಗೆ ಕಳುಹಿಸುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಒಂದೂ ಹೊಂಡ ತುಂಬಲಿಲ್ಲ. ರಾಜ್ಯದಲ್ಲಿರುವ ನಮ್ಮ ತೀರ್ಥಹಳ್ಳಿ ಕ್ಷೇತ್ರದಲ್ಲೂ ಪರಿಸ್ಥಿತಿ ಹಾಗೆಯೇ ಇದೆ. ಏಕೆ 30 : 54 ನಲ್ಲಿ ದುಡ್ಡು ಬರುತ್ತಿಲ್ಲ? ವಾರ್ಷಿಕ ದುರಸ್ತಿ ಅನುದಾನ ಏಕೆ ಬರುತ್ತಿಲ್ಲ? ಇದಕ್ಕೆ ದಯಮಾಡಿ ಉತ್ತರ ಹೇಳಬೇಕು.

ಶ್ರೀ ಆರ್. ಧರ್ಮಸಿಂಗ್ (ಮಾನ್ಯ ಲೋಕೋಪಯೋಗಿ ಸಚಿವರು) :— ಆಗುಂಬೆ ಘಾಟ್ ಕೆಲಸ ಆಗಿದೆ. ನಾನೇ ಸ್ವತಃ ಅಲ್ಲಿಗೆ ಬಂದಿದ್ದೆ, ತಾವು ಕೂಡ ಇದ್ದಿರಿ, ಸಾಕಷ್ಟು ವರ್ಣನೆ ಮಾಡಿದ್ದೀರಿ. ಅದೆಲ್ಲ ಕೆಲಸ ಮಾಡಿದ್ದೇವೆ. ಎಷ್ಟು ಕೆಲಸ ಆಗಿದೆ ಎಂದು ನೀವು ಹೇಳಿ. ನಾವು 1.96 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಿಮ್ಮ ಆಗುಂಬೆ ಘಾಟ್ ಬಿದ್ದ ಮೇಲೆ ಅವೆಲ್ಲಾ ಸರಿಪಡಿಸಿಲ್ಲವೇ? ನಿಮ್ಮ ಜೊತೆಗೆ ಬಂದು ಕೆಲಸ ಮಾಡಿದ್ದೇವೆ. ನೀವು ಸುಮ್ಮನೆ ಸಾರಾಸಗಟಾಗಿ ಹೇಳತಕ್ಕದ್ದು ಸರಿಯಲ್ಲ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲಾ ವೀಕ್ಷಣೆಗೆ ಬಂದಿದ್ದಾಗ ಮಾಣಿ ಮತ್ತು ಮೈಸೂರು-ಮಡಿಕೇರಿ ರಸ್ತೆಗೆ ಒಂದೂವರೆ ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿ. ನಾನು ಅವರು ಹೇಳುವುದಕ್ಕೆ ಪೂರಕವಾಗಿ ಹೇಳುವುದು. ಮೊನ್ನೆ ನಾನು ಲೋಕೋಪಯೋಗಿ ಡಿವಿಜನ್‌ನಲ್ಲಿ ಕೇಳಿದಾಗ ಅವರು ಹೇಳುತ್ತಾರೆ ಮಾನ್ಯ ಮುಖ್ಯಮಂತ್ರಿಗಳು ಸಂಪಾಜೆಯಿಂದ ಮಾಣಿಯವರೆಗೆ ಒಂದೂವರೆ ಕೋಟಿ ರೂಪಾಯಿ ಎಂದು ಹೇಳಿದ್ದಾರೆ, ಹೌದು. ಆ ರೀತಿಯಲ್ಲಿ ಆಗಿದೆ ಎಂದು ಹೇಳುವಂತಹದು. ಆದರೆ ಈಗ ಮೈಸೂರಿನಿಂದ ಮಾಣಿವರೆಗೆ ಅದನ್ನು ಪೂರ್ತಿ ವಿನಿಯೋಗ ಮಾಡಬೇಕು ಎಂದು ಇಲ್ಲಿಂದ ಚೀಫ್ ಇಂಜಿನಿಯರ್ ಅವರು ಹೇಳುದ್ದಾರಂತೆ, ಕೇವಲ ಆ ಸ್ಟ್ರೆಚ್‌ಗೆ ಮಾತ್ರವಲ್ಲ, ಅದು, ಮೈಸೂರಿನಿಂದ ಮಾಣಿಯವರೆಗೆ ಎಂದು ಹೇಳಿದ್ದಾರೆ. ಅಲ್ಲಿಯವರೆಗೆ ಹೊಂಡ ಮುಚ್ಚುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ತಾವು ಹುಡ್ಕೋದಿಂದ ಸಾಲವನ್ನು ತೆಗೆದುಕೊಂಡು ಅದನ್ನು ಎಲ್ ಅಂಡ್ ಟಿ ಅವರಿಗೆ ಹಸ್ತಾಂತರ ಮಾಡುವುದನ್ನು ನಾವೆಲ್ಲರೂ ನಿಜವಾಗಿ ಸ್ವಾಗತ ಮಾಡಿದ್ದೇವೆ. ಆದರೆ ತಾವು ಮೊನ್ನೆ ಏನು ಆಶ್ವಾಸನೆ ಕೊಟ್ಟಿದ್ದೀರಿ, ಅದನ್ನು ತಕ್ಷಣ ಈಡೇರಿಸುವಂತಹದು ಆಗಬೇಕು. ಒಂದೂವರೆ ಕೋಟಿಯನ್ನು ಖರ್ಚು ಮಾಡದೇ ಇದ್ದರೆ ನಡೆದುಕೊಂಡು ಹೋಗಲು ಆಗುವುದಿಲ್ಲ. ನಿನ್ನೆ ನಾನು ಮಡಿಕೇರಿಗೆ ಹೋಗಿದ್ದೆ. ಪ್ರಾಕ್ಟಿಕಲ್ ಆಗಿ ನಡೆದುಕೊಂಡು

ಹೋಗುವಂತಹ ಪರಿಸ್ಥಿತಿ ಸಹ ಆ ರಸ್ತೆಯಲ್ಲಿ ಇಲ್ಲ. ಸಂಪಾಜೆಯಿಂದ ಮಾಣಿವರೆಗೆ ನಡೆದುಕೊಂಡು ಹೋಗುವ ಪರಿಸ್ಥಿತಿ ಇಲ್ಲ. ಈಗಾಗಲೇ ಮೊನ್ನೆ ತಾವು ಆಶ್ವಾಸನೆ ಕೊಟ್ಟಿದ್ದೀರಿ ಜಿಲ್ಲಾ ಕಾರ್ಯಕ್ರಮಕ್ಕೆ ಬಂದಾಗ, ಅದನ್ನು ತಾವು ಈಡೇರಿಸುವಂತಹ ಕೆಲಸಗಳಿಗೆ ಸೂಕ್ತ ನಿರ್ದೇಶನ ಕೊಡಬೇಕು ಎಂದು ಸಹ ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳಿದರು. ಅವರಿಗೆ ಖಂಡಿತವಾಗಿಯೂ ಯಾವಾಗಲೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ನಡುವೆ ಸಂಪರ್ಕವೇ ಕಡಿದು ಹೋಗಿರುವಂತಹ ರಸ್ತೆಯನ್ನು ಬಹಳ ಬೇಗ ಮಾಡಿಕೊಟ್ಟಿದ್ದೀರಿ. ನಮ್ಮ ಗುತ್ತಿಗೆದಾರರು ನಿಮ್ಮನ್ನು ನಂಬಿ ಕೆಲಸ ಮಾಡಿ ಕೊಟ್ಟರು. ನೀವು ಅದರ ಹಣವನ್ನು ಪೂರೈಸಿದ್ದೀರಿ, ಧನ್ಯವಾದಗಳು. ಅದನ್ನು ಮಾಡಿದ್ದೀರಿ ಎನ್ನುವ ಕಾರಣಕ್ಕಾಗಿ ನಮ್ಮ ರಸ್ತೆಯ ಹೊಂಡ ಬಿಡುವುದೇ? ಅದನ್ನು ಇದನ್ನು ತಾಳೆ ಹಾಕುವುದಕ್ಕೆ ಆಗುತ್ತದೆಯೇ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ನಾವು ಏನು ಕೆಲಸ ಮಾಡಿದೆವು ಎನ್ನತಕ್ಕದ್ದು ಜ್ಞಾಪಿಸಿ ಅವರಿಂದ ನಾವು ಧನ್ಯವಾದಗಳನ್ನು ತೆಗೆದುಕೊಳ್ಳಬೇಕು. ತಾವು ಹೇಳಿದಿರಿ. ಮಾನ್ಯ ಲೋಕೋಪಯೋಗಿ ಸಚಿವರು ಬಂದಿದ್ದರು, ಅಲ್ಲಿ ಏನು ಸಂಪರ್ಕ ಕಡಿತ ಆಗಿತ್ತು. ಆ ಸಂಪರ್ಕವನ್ನು ಪುನರ್ ಸ್ಥಾಪನೆ ಮಾಡಿದರು, ಅದಕ್ಕೆ ಧನ್ಯವಾದಗಳು. ಆದರೆ ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನನ್ನ ಎತ್ತರದ ಗುಂಡಿಗಳು ಇವೆ. ಅವುಗಳನ್ನೆಲ್ಲಾ ಮುಚ್ಚುವುದಕ್ಕೆ ಸಹಕಾರ ಮಾಡಬೇಕು ಎಂದು ಹೇಳಿದ್ದರೆ ಅದು ರಚನಾತ್ಮಕವಾದಂತಹ ಟೀಕೆ ಆಗುತ್ತಿತ್ತು.

ಶ್ರೀ ಡಿ.ವಿ. ಸದಾನಂದ ಗೌಡ :— ಹಾಗಲ್ಲ ಅಧ್ಯಕ್ಷರೆ, ನಮ್ಮ ಜವಾಬ್ದಾರಿ ಏನು ಎಂದು ಹೇಳಿದರೆ ಒಂದು ಕೆಲಸ ಮಾಡಿದ್ದನ್ನು ಹೇಳು ಧನ್ಯವಾದಗಳನ್ನು ಅರ್ಪಿಸಿದರೆ ಇನ್ನು ಮುಂದೆ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಅದಕ್ಕೆ ಧನ್ಯವಾದ ಮತ್ತೆ, ಮೊದಲು ಬೇಡಿಕೆ ಇಡುವುದು.

ಶ್ರೀ ಅರಗ ಜ್ಞಾನೇಂದ್ರ :— ನಾವು ಇಲ್ಲಿ ಕುಳಿತುಕೊಂಡು ಎಲ್ಲದಕ್ಕೂ ಧನ್ಯವಾದಗಳನ್ನು ಹೇಳುತ್ತಾ ಹೋದರೆ ಹೇಗೆ ಆಗುತ್ತದೆ?

ಅಧ್ಯಕ್ಷರು :— ಒಳ್ಳೆಯ ಕೆಲಸ ಮಾಡಿದರೆ ಧನ್ಯವಾದ ಹೇಳಬೇಕಲ್ಲ.

ಶ್ರೀ ಅರಗ ಜ್ಞಾನೇಂದ್ರ :— ಮೊನ್ನೆ ಡಾ: ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬಂದರು. ಇಲ್ಲಿ ನಾವು ಮುಕ್ತವಾಗಿ ಹೇಳಿದ್ದೇವೆ. ನಾವು ವಿರೋಧ ಮಾಡುವುದಕ್ಕೋಸ್ಕರ

ವಿರೋಧ ಪಕ್ಷದಲ್ಲಿ ಕುಳಿತುಕೊಂಡಿಲ್ಲ. ಅವತ್ತು ಮಂತ್ರಿಗಳು ಬಂದಿದ್ದರು, ಬಹಳ ಧನ್ಯವಾದ ಹೇಳಿ ನಿಮ್ಮ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದೆವು. ಸಾವಿರಾರು ಜನರ ಎದುರುಗಡೆ ನಾವು ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಿದ್ದೇವೆ. ಶ್ರೀ ಎಸ್.ಎಂ. ಕೃಷ್ಣರವರು ನಮ್ಮ ಊರಿನ ಅಳಿಯಂದಿರು. ಅವರಿಗೆ ಬೈಯ್ಯುವುದನ್ನು ನೋಡಿ ನಮಗೆ ಸಹಿಸುವುದಕ್ಕಾಗುವುದಿಲ್ಲ, ಬಹಳ ಬೇಜಾರಾಗುತ್ತದೆ. ಜನರು ಬಸ್ಸಿನಲ್ಲಿ ಕುಳಿತುಕೊಂಡು ಬೈಯ್ಯಬಾರದು. ಆದರಿಂದ ನಮಗೆ ಸಂಕಟವಾಗುತ್ತದೆ. ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿರುವುದು ನಮಗೆ ಹೆಮ್ಮೆಯೆನಿಸಿದೆ. ಹೀಗಾಗಿ ನಾನು ಅವರ ಗಮನಕ್ಕೆ ತರುವುದೇನೆಂದರೆ, ರಸ್ತೆಗಳಲ್ಲಾಗಿರುವ ಸಣ್ಣ-ಸಣ್ಣ ಹೊಂಡಗಳನ್ನು ಮುಚ್ಚುವುದಕ್ಕೆ ಟಾರ್ ಸೌಲಭ್ಯ ಒದಗಿಸಿಕೊಡುವುದಲ್ಲದೆ ಹಳೆಯ ಬಿಲ್‌ಗಳನ್ನು ದಯವಿಟ್ಟು ಪಾಸ್ ಮಾಡಿಸಿಕೊಡಬೇಕು. ಎಲ್ಲಕ್ಕಿಂಥ ಮುಖ್ಯವಾಗಿ ತಮ್ಮ ಗಮನಕ್ಕೆ ತರಲು ಪ್ರಯತ್ನಿಸುತ್ತಿರುವುದೇನೆಂದರೆ, ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾಗಿದ್ದು ಸದರಿ ಸಮಿತಿಯಲ್ಲಿ ಎಲ್ಲಾ ಪಕ್ಷದವರೂ ಮಾನ್ಯ ಸದಸ್ಯರುಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ಇಲಾಖೆಗಳಲ್ಲಿ ಕಂದಾಯ ವಸೂಲಾತಿ ಕುರಿತು ದೊಡ್ಡ ಅಸಡ್ಡೆಯೇ ಇದೆ. ಕಂದಾಯ ವಸೂಲಾತಿಗೆ ಕಂದಾಯ ಇಲಾಖೆಯ ಎ.ಸಿ. ಮತ್ತು ಡಿ.ಸಿ.ಯವರಿಗೆ ಕಳುಹಿಸಿಕೊಟ್ಟಿದ್ದರೂ ಅವರು ಅದನ್ನು ಕಣ್ಣೆತ್ತಿ ನೋಡುತ್ತಿಲ್ಲ ಹಾಗೂ ವಸೂಲಾತಿ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಅಲ್ಲದೆ, ಆ ಬಗ್ಗೆ ಏನೆಂದೂ ಕೂಡ ಗಮನಹರಿಸಿಲ್ಲ. ಹಾಗಾಗಿ, ಏತಕ್ಕೋಸ್ಕರ ಇದನ್ನು ಆ ಇಲಾಖೆಗೆ ವಹಿಸಿಕೊಡಬೇಕು? ಇದೊಂದು ರೀತಿಯಲ್ಲಿ ಸ್ಮಶಾನಕ್ಕೆ ಹಾಕಿದಂತಾಗಿದೆ! ಯಾವುದೂ ವಸೂಲಾಗುವುದಿಲ್ಲ. ಬ್ಯಾಡ್‌ಡೆಟ್ ಅನ್ನು ಅದಕ್ಕೆ ಟ್ರಾನ್ಸ್‌ಫರ್ ಮಾಡುವುದಾದರೆ ಆ ಇಲಾಖೆಯ ಅವಶ್ಯಕತೆಯೇ ಇಲ್ಲ. ಬಹಳಷ್ಟು ವರ್ಷಗಳಿಗೆ ಸಂಬಂಧಿಸಿದಂತೆ ಬಾಕಿಯಿರುವುದರಿಂದ ಇದರ ಬಗ್ಗೆ ದಯವಿಟ್ಟು ಕ್ರಮ ಕೈಗೊಳ್ಳಬೇಕು. ಇನ್ನು ಅರಣ್ಯ ಇಲಾಖೆ ಬಗ್ಗೆ ಒಂದು ಸಣ್ಣ ಉದಾಹರಣೆ ಹೇಳುವುದಾದರೆ, ಉತ್ತರ ಕನ್ನಡದ ಒಂದು ವಲಯದ ಡಿ.ಎಫ್.ಓ. ಕಛೇರಿಯಲ್ಲಿ ಸುಮಾರು ನಲವತ್ತೆದು ಲಕ್ಷ ರೂಪಾಯಿಗಳ ನಾಟಾ ಹರಾಜಾಯಿತು. ನಲವತ್ತೆದು ಲಕ್ಷ ರೂಪಾಯಿಗಳ ಡಿ.ಡಿ. ತೆಗೆದುಕೊಂಡ ಬಳಿಕ ಅದನ್ನು ನಗದು ಮಾಡಿಸಿಕೊಳ್ಳದೆ ಸಂಬಂಧಪಟ್ಟ ಅಧಿಕಾರಿ ಅದನ್ನು ಅಲ್ಮಾರಿನಲ್ಲಿ ಹಾಗೇ ಮೂರು ವರ್ಷಗಳ ಕಾಲ ಇಟ್ಟು ಹೋಗಿದ್ದಾರೆ! ಇಂತಹ ಹಲವಾರು ಪ್ರಕರಣಗಳಿವೆ. ಒಂದೊಂದೂ ಇಲಾಖೆಗೆ ಸಂಬಂಧಿಸಿದಂತೆಯೂ ಎ.ಜಿ.ಯವರು ಆಡಿಟ್ ಮಾಡುತ್ತಾರಲ್ಲದೆ ಕೆಲವೊಂದನ್ನು ಅವರು ಬಹಳ ರ್‍ಯಾಂಡಮ್ ಆಗಿ ಮಾಡುತ್ತಾರೆ. ಆಡಿಟ್ ಆಕ್ಷೇಪಣೆಗಳು ಏನೇನು ಬಂದಿವೆ, ಯಾರ್‍ಯಾರ ಮೇಲೆ ಎಷ್ಟೆಷ್ಟು ಆಕ್ಷೇಪಣೆಗಳಿವೆ, ಯಾರಿಂದ ಎಷ್ಟು ವಸೂಲಾತಿಯಾಗಿದೆ, ಯಾರ ಮೇಲೆ ಭ್ರಷ್ಟಾಚಾರದ ಅಪಾದನೆ ಹೊರಿಸಲಾಗಿದೆಯೋ ಅವರಿಗೆ ಮುಂಬಡ್ತಿ ಕೊಟ್ಟು ತೂರಿಸಲಾಗಿದೆ! ಇದರಿಂದ ಸಮಾಜಕ್ಕೆ ನಮ್ಮಿಂದ ಏನು ಸಂದೇಶ ಹೋಗುತ್ತದೆ? ಯಾರನ್ನು ಜೈಲಿನಲ್ಲಿ ಇಡಬೇಕಾಗಿತ್ತೋ ಅಂತಹವರಿಗೆ ಮುಂಬಡ್ತಿ

ನೀಡಿ ತಲೆ ಮೇಲೆ ಕೂರಿಸಿಕೊಳ್ಳುವುದಾದರೆ ನಾವು ಭ್ರಷ್ಟಾಚಾರ ತಡೆಯುವುದಕ್ಕಾಗುವುದಿಲ್ಲ ಮತ್ತು ರಾಜ್ಯಕ್ಕೆ ಬರುವಂಥ ರೆವಿನ್ಯೂ ಸಹ ವಸೂಲು ಮಾಡುವುದಕ್ಕಾಗುವುದಿಲ್ಲ. ನಿಮ್ಮ ಬಗ್ಗೆ ನಾವು ಹಾಗೂ ನಮ್ಮ ಬಗ್ಗೆ ನೀವು ಹೇಳಿ ನಾವುಗಳು ಮಾತ್ರ ಗುದ್ದಾಡಬೇಕೇ ವಿನಾ ಅವರೆಲ್ಲರೂ ಚೆನ್ನಾಗಿ ಮಾಡಿಕೊಂಡು ಹೋಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಎ.ಜಿ.ಯವರ ಆಡಿಟ್ ಆಕ್ಷೇಪಣೆಗಳಿಗೆ ಒಳಗಾಗಿರುವಂಥ ಅಧಿಕಾರಿಗಳಿಗೆ ಮುಂಬಡ್ತಿ ಕೊಡುವಾಗ, ನಿವೃತ್ತಿ ವೇತನವನ್ನು ಸೆಟ್ಲ್ ಮಾಡುವಾಗ ಅವರನ್ನು ಹಿಡಿದು ಸಂಪೂರ್ಣವಾಗಿ ಮಟ್ಟಹಾಕಿ, ಅವರಿಂದ ವಸೂಲಾತಿ ಸಂದಾಯವಾಗದೆ ಅವರನ್ನು ಬಿಟ್ಟು ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗಬಾರದು. ಈ ರೀತಿ ಆದಾಗ ಮಾತ್ರ ರೆವಿನ್ಯೂ ಬರುತ್ತದೆ. ರೆವಿನ್ಯೂ ವಸೂಲಾತಿ ಬಗ್ಗೆ ಪ್ರತಿಯೊಬ್ಬ ಮಂತ್ರಿಗಳು ಕೂಡ ಆಯಾ ಇಲಾಖೆಯ ಬಗ್ಗೆ ನಿಗಾ ವಹಿಸಿ ವಸೂಲು ಮಾಡುವುದು ಅಗತ್ಯ. ರೆವಿನ್ಯೂ ವಸೂಲಾದರೆ ಅಭಿವೃದ್ಧಿ ಕಾರ್ಯಗಳಿಗೆ ಒಂದಿಷ್ಟು ಜಾಸ್ತಿ ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ಹೇಳಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡಿ ಪುನಃ 3.15 ಗಂಟೆಗೆ ಸೇರುವುದು.

(ಸದನವನ್ನು 2 ಗಂಟೆ 03 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಿ ಪುನಃ 3.15 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮತ್ತೆ 3.30ಕ್ಕೆ ಸಮಾವೇಶಗೊಂಡಿತು, ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಸನ್ಮಾನ್ಯ ಅಧ್ಯಕ್ಷರೆ, ಬಡ್ಡಿ ಮನ್ನಾ ಮಾಡಿದ ಆರು ಕೋಟಿ ರೂಪಾಯಿಗಳು ಇನ್ನು ಸಹಕಾರಿ ಸಂಘಗಳಿಗೆ ಕಟ್ಟಬೇಕಾಗಿದೆ. ಅದು ಬಜೆಟ್‌ನಲ್ಲೂ ಬರಲಿಲ್ಲ, ಈ ಪೂರಕ ಅಂದಾಜಿನಲ್ಲೂ ಸೇರಿಸಿಲ್ಲ. ಆ ಸೊಸೈಟಿಗಳು ಎಲ್ಲಾ ಹಾಳಾಗಿ ಹೋಗುತ್ತವೆ. ನಾಲ್ಕು ವರ್ಷಗಳಿಂದ ಬಡ್ಡಿ ಮನ್ನಾ ಮಾಡಿದ್ದನ್ನು ಕಟ್ಟಿಕೊಂಡು ಬಂದು ಇನ್ನು ಆರು ಕೋಟಿ ರೂಪಾಯಿಗಳು ಉಳಿದಿವೆ. ಇದರಲ್ಲಿ ಕೂಡ ಅದನ್ನು ತರಲಿಲ್ಲ. ಇನ್ನು ಯಾವಾಗ ಮಾಡುತ್ತಾರೆ. ಸಹಕಾರ ಸಂಘಗಳಿಗೆ ಬಡ್ಡಿ ಮನ್ನಾ ಮಾಡಿದ್ದು ಅದನ್ನು ಸರ್ಕಾರ ತುಂಬತಕ್ಕಂಥದ್ದು ಇನ್ನು ಆರು ಕೋಟಿ ರೂಪಾಯಿ ಇದೆ. ಅದನ್ನೂ ಕೂಡ ಸಹಕಾರ ಸಂಘಗಳಿಗೆ ತುಂಬಬೇಕು. ಸಿಂಧ್ಯಾರವರು ಹೇಳಿದ ಹಾಗೆ ಆರ್ಥಿಕ ಪರಿಸ್ಥಿತಿ ಸರಿ ಇಲ್ಲವೆಂದು ಇವರ ಶ್ವೇತ ಪತ್ರದ ಮುಖೇನ ನಾವು ನೋಡಿದ್ದೇವೆ. ಶ್ವೇತ ಪತ್ರದ ಬಗ್ಗೆ ಚರ್ಚೆ ಮಾಡಬೇಕೆಂದು ಹೋದ ವಿಧಾನ ಸಭೆಯ ಅಧಿವೇಶನದಲ್ಲಿ ಹೇಳಿದ್ದಕ್ಕೆ ಮುಖ್ಯಮಂತ್ರಿಗಳು ಚರ್ಚೆ ಮಾಡೋಣ ಎಂದು ಹೇಳಿದ್ದರು. ಅದೂ ಕೂಡ ಆಗಲಿಲ್ಲ. ಈ ರೈತರ ಸಹಕಾರಿ ನೂಲಿನ ಗಿರಣಿ

ಹುಲಕೋಟಿ, ಗದಗ ನೂಲಿನ ಗಿರಣಿ ಇವೆರಡಕ್ಕೂ ಏನು ಮಾಡಿದ್ದಾರೆಂದರೆ ಹಣಕಾಸು ಸಂಸ್ಥೆಗಳು ಎಂದು ಹೇಳಿದ್ದಾರೆ. ಹಣಕಾಸು ಸಂಸ್ಥೆಗಳು ಎಂದರೆ ಯಾವ್ಯಾವು? ಅಂದರೆ ಕೆ.ಸಿ.ಸಿ. ಬ್ಯಾಂಕ್ ಸೇರುತ್ತದೆಯೋ ಹೇಗೆ? ಸನ್ಮಾನ್ಯ ಅಧ್ಯಕ್ಷರೆ, ಫಾರ್ಮರ್ಸ್ ಕೋ-ಆಪರೇಟಿವ್ ಮಿಲ್ಸ್ ಲಿಮಿಟೆಡ್, ಹುಲಕೋಟಿ, ಇಲ್ಲಿ ಐದು ಕೋಟಿ ರೂಪಾಯಿಗಳ ಅಸಲು ಇದೆ. ಒಂದು ಕೋಟಿ 12 ಲಕ್ಷ ರೂಪಾಯಿ ಅವರು ಬಡ್ಡಿ ಕೊಡಬೇಕು. ಅದರಲ್ಲಿ ಇದು ಸೇರಿದೆಯೋ ಹೇಗೆ? ಅದು ಸೇರದೆ ಇದ್ದರೆ ದಯವಿಟ್ಟು ಡಿ.ಸಿ.ಸಿ ಬ್ಯಾಂಕ್‌ಗೆ ಕೊಡತಕ್ಕಂಥದ್ದು ಕೂಡ ಒನ್ ಟೈಮ್ ಸೆಟ್ಲಮೆಂಟ್‌ನಲ್ಲಿ ಮಾಡಬೇಕು. ಇಲ್ಲದಿದ್ದರೆ ಡಿ.ಸಿ.ಸಿ ಬ್ಯಾಂಕ್‌ನವರು ತೊಂದರೆಗೆ ಒಳಗಾಗುತ್ತಾರೆ. ಅದೇ ರೀತಿಯಲ್ಲಿ ವೆಂಕಟೇಶ್ವರ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ ಅಣ್ಣಿಗೇರಿ, ತುಂಗಭದ್ರ ಫಾರ್ಮರ್ಸ್ ಕೋ-ಆಪರೇಟಿವ್ ಮಿಲ್ಸ್ ರಾಣೆಬೆನ್ನೂರು, ಫಾರ್ಮರ್ಸ್ ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ ಹನುಮನಹಟ್ಟಿ, ಇವುಗಳಿಂದ ಬಾಕಿ ಇದೆ. ಲಕ್ಷ್ಮೇಶ್ವರ್ ಮಿಲ್ ಮತ್ತು ಗದಗ್ ಟೆಕ್ಸ್‌ಟೈಲ್ ಮಿಲ್ ಇವೆರಡೂ ಇವೆ. ಉಳಿದ ಎಲ್ಲ ಮಿಲ್ ಸೇರಿ, ಮಲಪ್ರಭ ಕೋ-ಆಪರೇಟಿವ್ ಆಯಿಲ್ ಮಿಲ್ ಮತ್ತು ನರಗುಂದ ಅವರು 12 ಕೋಟಿ ಕೊಡಬೇಕು. ಗದಗ್ ಕೋ-ಆಪರೇಟಿವ್ ಆಯಿಲ್ ಸೀಡ್ಸ್ 289 ಕೋಟಿ ಕೊಡಬೇಕು. ದಿ. ಫಾರ್ಮರ್ಸ್ ಕೋಆಪರೇಟಿವ್ ಆಯಿಲ್ ಸೀಡ್ಸ್ ಬಿಂಕದಕಟ್ಟಿ ಅವರು 2.15 ಕೋಟಿ ಕೊಡಬೇಕು. ಹೀಗೆ ಕೆ.ಸಿ.ಸಿ ಬ್ಯಾಂಕಿಗೆ ಸುಮಾರು 48 ಕೋಟಿ ರೂಪಾಯಿ ಬರಬೇಕಾಗುತ್ತದೆ. ಈ ಎರಡು ಮಿಲ್‌ಗಳು ಒನ್ ಟೈಮ್ ಸೆಟ್ಲಮೆಂಟ್ ಯೋಜನೆ ಅಡಿಯಲ್ಲಿ ಬರುವ ಹಾಗೆ ಮಾಡಿದ್ದಾರೆ, ಬಹಳ ಸಂತೋಷ. ಇದು ಮೊದಲೇ ಆದುದು. ಇದು ಬಜೆಟ್‌ನಲ್ಲಿ ಬರಬೇಕಾಗಿತ್ತು, ಪೂರಕ ಅಂದಾಜಿನಲ್ಲಿ ಬೇಕಾಗಿಲ್ಲ. ಇದು ಬಹಳ ಹಿಂದೆ ಆಗಿರುವುದರಿಂದ ಇದನ್ನು ಪೂರಕ ಅಂದಾಜಿನಲ್ಲಿ ಮಾಡುವುದು ಬೇಕಾಗಿರಲಿಲ್ಲ. ಬಜೆಟ್ ಮಾಡುವಾಗ ಇದನ್ನು ಯಾರೂ ನೋಡಲಿಲ್ಲ. ಅದೇ ಮಾದರಿ ಮೇಲೆ ತಯಾರು ಮಾಡಿದ್ದಾರೆ. ಈ ಎರಡು ಮಿಲ್‌ಗಳು ಕೆ.ಸಿ.ಸಿ ಬ್ಯಾಂಕ್‌ಗೆ ಸೇರುತ್ತವೆ ಅಥವಾ ಇಲ್ಲವೆಂದು ಗೊತ್ತಿಲ್ಲ. ಕೆಸಿಸಿ ಬ್ಯಾಂಕ್ ಕೂಡ ಆದರಿಂದ ಏಳು ಕೋಟಿ ರೂಪಾಯಿ ಕೊಡಬೇಕು. ಅದನ್ನೂ ಕೂಡ ಕೊಡುವುದಕ್ಕಾಗದೆ ಇರುವ ಸ್ಥಿತಿಯಲ್ಲಿ ಈ ಮಿಲ್‌ಗಳಿವೆ. ಧಾರವಾಡ ಜಿಲ್ಲೆಯಲ್ಲಿರುವ ಟೆಕ್ಸ್‌ಟೈಲ್ ಮಿಲ್ ಮತ್ತು ಆಯಿಲ್ ಮಿಲ್‌ಗಳು ಕೆಸಿಸಿ ಬ್ಯಾಂಕಿಗೆ 48 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆ ಕೆ.ಸಿ.ಸಿ ಬ್ಯಾಕಿನದ್ದು ಕೂಡ ಒಂದು ಸಾರಿ ಸೆಟ್ಲಮೆಂಟ್ ಮಾಡಿ ಕೊಟ್ಟರೆ ರೈತರ ಸಂಸ್ಥೆಗಳು ಉಳಿಯುತ್ತವೆ. ಇಲ್ಲದಿದ್ದರೆ ಈ ಎಲ್ಲ ಸಂಸ್ಥೆಗಳು ನಾಶವಾಗಿ ಹೋಗುತ್ತವೆ. ನಾವು ಹೊಸದಾಗಿ ಕಟ್ಟುವುದಕ್ಕಾಗುವುದಿಲ್ಲ. ಈ ಎಲ್ಲ ಮಿಲ್‌ಗಳಿಗೂ ದಯವಿಟ್ಟು ಒಂದು ಸಾರಿ ಸೆಟ್ಲಮೆಂಟ್ ಮಾಡಿ ಕೊಡಬೇಕು. ಕೆ.ಸಿ.ಸಿ ಬ್ಯಾಂಕ್ ಈ ಮಿಲ್ಲುಗಳ ಗುಂಪಿನಲ್ಲಿ ಸೇರಿಸಿದ್ದಾರೆಯೇ ಅಥವಾ ಇಲ್ಲವೆಂದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಉತ್ತರದಲ್ಲಿ ಹೇಳಬೇಕು. ಧಾರವಾಡ ಕೆ.ಸಿ.ಸಿ ಬ್ಯಾಂಕ್‌ನವರು ಸುಮಾರು 48

ಕೋಟಿ ರೂಪಾಯಿಗಳನ್ನು ಕೊಡಬೇಕು, ಇದನ್ನು ಒನ್ ಟೈಮ್ ಸೆಟ್ಲ್‌ಮೆಂಟ್‌ನಲ್ಲಿ ಸೇರಿಸಬೇಕು. ಕೋ-ಆಪರೇಟಿವ್ ಅಂದ ಕೂಡಲೇ ಇಲ್ಲವೆಂದು ಹೇಳುತ್ತಾರೆ. ಆಗ್ರೋ ಇಂಡಸ್ಟ್ರೀಸ್‌ಗೆ 89 ಕೋಟಿ ರೂಪಾಯಿಗಳನ್ನು ಸಹಾಯಮಾಡಿದ್ದೇವೆ, 89 ಕೋಟಿ ರೂಪಾಯಿಗಳನ್ನು ಒನ್ ಟೈಮ್ ಸೆಟ್ಲ್‌ಮೆಂಟ್‌ನಲ್ಲಿ ತಂದಿದ್ದಾರೆ, ಅದೇ ರೀತಿ ನಮ್ಮ ಕೋ-ಆಪರೇಟಿವ್ ಮಿಲ್ಸ್ ಏನಿವೆ ಎಲ್ಲಾ ಸೇರಿ ಸುಮಾರು 40 ರಿಂದ 50 ಕೋಟಿ ರೂಪಾಯಿ ಆಗಬಹುದು. ಅದನ್ನು ಒಂದು ಸಾರಿ ಸೆಟ್ಲ್‌ಮೆಂಟ್ ಮಾಡಿದರೆ ಈ ಸಂಸ್ಥೆಗಳು ಉದ್ಧಾರ ಆಗುತ್ತವೆ. ರೈತರಿಗೆ ಬೇಕಾದ ಸಂಸ್ಥೆಗಳು ಇದು ಆಗಲೇ ಬೇಕು. ಈ ಹಣತುಂಬದೆ ಇದ್ದರೆ ಡಿ.ಸಿ.ಸಿ ಬ್ಯಾಂಕ್ ಕೂಡ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಬರುತ್ತದೆ. ನಾವು ಪ್ರಶ್ನೆ ಹಾಕಿದರೆ ಸರ್ಕಾರದವರು ಹೇಗೆ ಉತ್ತರ ಕೊಡುತ್ತೀರಿ ಎನ್ನುವುದನ್ನು ಹೇಳುತ್ತೇನೆ. ರೈತರ ಇನ್‌ಶೂರೆನ್ಸ್ ತುಂಬುವ ಬಗ್ಗೆ ಒಂದು ಪ್ರಶ್ನೆ ನಾನು ಕೇಳಿದ್ದೆ. 1978-79ರಲ್ಲಿ ಎಂದು ಹೇಳಿದ್ದೆ. ಆದರೆ ಅದು ಬಹುಶಃ 1977-78ಕ್ಕೆ ಸಂಬಂಧಪಟ್ಟದ್ದು ಅಂದರೆ ಹಿಂದಿನ ವರ್ಷದ ಹಣವನ್ನೂ ಇವರು ತುಂಬಿಲ್ಲ, ಮಂಜೂರೂ ಆಗಿಲ್ಲವೆಂದು ಒಂದು ಮಾತಿನಲ್ಲಿ ಉತ್ತರ ಕೊಟ್ಟಿದ್ದೀರಿ ತಾವು ಹಾಗೆ ಹೇಳಬಾರದಾಗಿತ್ತು. ತಾವು ರೈತರ ಮಕ್ಕಳಾಗಿ ಪೂರಕ ಅಂದಾಜಿನಲ್ಲಿ ಹಣ ಕೊಡುತ್ತೇವೆಂದು ಹೇಳಲಿಲ್ಲ. ಇದನ್ನೂ ಕೂಡ ನೀವು ಕೊಡುತ್ತೀರಾ ಅಥವಾ ಈಗಾಗಲೇ ತುಂಬಿದ್ದೀರಾ ಎಂದು ಉತ್ತರದಲ್ಲಿ ತಾವು ಹೇಳಬೇಕಾಗುತ್ತದೆ. ಎಕ್ಸೈಸ್ ನಿಂದ ಬಹಳ ಉತ್ಪನ್ನ ಇದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಇಲ್ಲಿದ್ದಾರೆ, ರಾಜ್ಯದಲ್ಲಿ ಹೆಣ್ಣು ಮಕ್ಕಳು ಎಕ್ಸೈಸ್ ಬಗ್ಗೆ ಬಹಳ ತಯಾರಾಗಿದ್ದಾರೆ. ಹಳ್ಳಿಗಳಲ್ಲಿ ಕೆಲವು ಹೆಣ್ಣು ಮಕ್ಕಳು ಎಕ್ಸೈಸ್‌ನ್ನು ಊರಿನಲ್ಲಿ ಬಂದ್‌ಮಾಡಿ ಪಾನ ರಹಿತವಾದ ಊರನ್ನಾಗಿ ಮಾಡಬೇಕೆಂದು ನಿರ್ಧಾರ ಮಾಡಿ ಡಿಸಿ ಕಛೇರಿ ಮುಂದೆ ಬಂದು ಧರಣಿ ಕೂತರು. ನಮ್ಮ ಊರಿನ ಒಬ್ಬ ಹರಿಜನ ಹೆಮ್ಮಿಗೆ ಎಂಬ ಗ್ರಾಮಕ್ಕೆ ಮಗಳನ್ನು ಕೊಟ್ಟು ಮದುವೆ ಮಾಡಿದ್ದಾರೆ. ರಾತ್ರಿ ಗಂಡ ಕುಡಿದು ಬಂದು ಹೊಡೆಯುವುದು ಬಡಿಯುವುದು ಮಾಡುತ್ತಾನೆ ಎಂದು ಆ ಊರಿನಲ್ಲಿ ಪಾನೀಯವನ್ನು ಬಂದ್ ಮಾಡಿದ್ದಾರೆ. ನಮ್ಮ ಎಕ್ಸೈಸ್ ಮಿನಿಸ್ಟರ್ ಅವರಿಗೆ ಹೇಳುತ್ತಿದ್ದೇವೆ, ಪ್ರೋತ್ಸಾಹ ಪುಕ್ಕಟೆಯಾಗಿ ನಮ್ಮ ಡಿಪಾರ್ಟ್‌ಮೆಂಟಿನವರು ಕೊಡುತ್ತಿದ್ದಾರೆ. ಇಲ್ಲಿ ಒಂದು ಅರ್ಜಿ ಕೊಟ್ಟಿದ್ದಾರೆ ಇದನ್ನು ನಾನು ಓದುತ್ತೇನೆ. ಈ ಕುಡುಕರೆಲ್ಲ ಸೇರಿ ಇದನ್ನು ಮುಖ್ಯಮಂತ್ರಿಗಳಿಗೂ ಮತ್ತು ಜಿಲ್ಲಾಧಿಕಾರಿಗಳಿಗೂ ಕೊಟ್ಟಿದ್ದಾರೆ. ಈ ಕುಡುಕರು ಅಂದರೆ ಈ ಗಂಡಂದಿರಲ್ಲಿ ಸೇರಿ ಒಂದು ಅರ್ಜಿ ಕೊಟ್ಟು ಅದರಲ್ಲಿ ನಮ್ಮ ಹಕ್ಕು ಹೋಗುತ್ತದೆ ಎಂದು ತಿಳಿಸಿದ್ದಾರೆ. ನಮ್ಮ ಕಡೆಯಲ್ಲಿ ಕುಡಿದು ಬಂದ ಗಂಡರ ಕಾಟವನ್ನು ತಡೆಯಲಾರದೆ ಇದರ ವಿರುದ್ಧವಾಗಿ ಹೆಣ್ಣುಮಕ್ಕಳೆಲ್ಲರೂ ಡಿ.ಸಿ. ಕಛೇರಿ ಮುಂದೆ ಸತ್ಯಾಗ್ರಹ ಕುಳಿತರು. ಆದರೆ ಇನ್ನೊಂದು ಕಡೆ ಗದಗ್‌ನಲ್ಲಿ ಎಕ್ಸೈಸ್‌ನವರೆ ಜನರಿಗೆ ಕುಡಿಯಲು ಪುಕ್ಕಟೆಯಾಗಿ ಮದ್ಯವನ್ನು ಕೊಡುತ್ತಿದ್ದಾರೆ. ಇಲ್ಲಿ ಕುಡಿದು ಮನೆಗೆ ಹೋಗಿ ತಮ್ಮ ಹೆಂಡತಿಗೆ ಹೊಡೆಯುತ್ತಿದ್ದಾರೆ. ಇದು ಪ್ರತಿದಿನ

ನಡೆಯುತ್ತಿದೆ. ಇದನ್ನು ತಪ್ಪಿಸಲು ಮಹಿಳಾ ಮತ್ತು ಕಲ್ಯಾಣ ಇಲಾಖಾ ಸಚಿವರು ಗಮನಹರಿಸಬೇಕು. ತಮ್ಮ ಹಕ್ಕಿನ ಬಗ್ಗೆ ಅಲ್ಲಿಯ ಜನರು ಏನು ಹೇಳುತ್ತಿದ್ದಾರೆನ್ನುವುದಕ್ಕೆ ಅವರುಗಳೇ ಹೇಳಿರುವುದನ್ನು ತಮ್ಮ ಗಮನಕ್ಕೆ ತರಲು ಓದುತ್ತೇನೆ. ಯಾವುದೇ ರಾಜಕೀಯ ವ್ಯವಸ್ಥೆಯಾಗಲಿ ಅಥವಾ ಯಾವುದೇ ಸಂಘ ಸಂಸ್ಥೆಗಳಾಗಲಿ ನಮ್ಮ ಹಕ್ಕನ್ನು ಕಿತ್ತುಕೊಳ್ಳುವುದು ಅಪರಾಧವಾಗುತ್ತದೆಯಾದ ಕಾರಣ ನಮ್ಮ ಹಕ್ಕನ್ನು ನಮಗೆ ಮರುಳಿಸಬೇಕೆಂದು ತಮ್ಮ ಕಾನೂನಿನ ಚೌಕಟ್ಟಿನಲ್ಲಿ ಸೂಕ್ತ ಬಂದೋಬಸ್ತ್ ಮಾಡಿ ಅಂಗಡಿ ಪ್ರಾರಂಭಿಸಬೇಕು ಎಂದು ಕುಡುಕರುಗಳೆಲ್ಲರೂ ಸೇರಿ ಅರ್ಜಿಯನ್ನು ಕೊಟ್ಟಿದ್ದಾರೆ. ಇದರಿಂದಾಗಿ ಊರಿನ ಎಲ್ಲಾ ಹೆಣ್ಣು ಮಕ್ಕಳುಗಳಿಗೆ ಬಹಳ ಬೇಜಾರಾಗಿದೆ. ಇದು ಆರ್ಥಿಕ ಪರಿಸ್ಥಿತಿಯ ಮೇಲೆ ಕೂಡ ಕೆಟ್ಟ ಪರಿಣಾಮ ಬೀರುತ್ತದೆ. ಇಂದು ಹಳ್ಳಿಗಾಡಿನ ಹೆಣ್ಣು ಮಕ್ಕಳಿಗೆ ಕುಡಿತದಿಂದಾಗಿ ಬಹಳ ತೊಂದರೆಯಾಗಿದೆಯಾದ ಕಾರಣ ಅವರೆಲ್ಲ ಸೇರಿ ಅಂಗಡಿಯನ್ನು ಬಂದ್ ಮಾಡಿಸಿದರೂ ಕೂಡ ಅವರ ಗಂಡಂದಿರುಗಳೇ ಎಲ್ಲರೂ ಕೂಡ ಡಿ.ಸಿ.ಗೆ ಅರ್ಜಿ ಸಲ್ಲಿಸಿ ಅಂಗಡಿ ತೆರೆಯಲು ಮನವಿ ಕೊಟ್ಟಿದ್ದಾರೆ. ಇದರ ವಿರುದ್ಧವಾಗಿ ಆ ಊರಿನ ಸಾವಿರಾರು ಹೆಣ್ಣುಮಕ್ಕಳು ಡಿ.ಸಿ. ಕಛೇರಿ ಮುಂದೆ ಕುಳಿತು ಸತ್ಯಾಗ್ರಹ ಮಾಡಿ ಜೈಲಿಗೆ ಹೋದರೂ ಪರವಾಗಿಲ್ಲ ಮದ್ಯದಂಗಡಿಯನ್ನು ಮಾತ್ರ ತೆರೆಯಲು ಅವಕಾಶ ಕೊಡಬಾರದೆಂದು ಹೇಳುತ್ತಿದ್ದಾರೆ. ಆ ಸಂದರ್ಭದಲ್ಲಿ ಡಿ.ಸಿ.ಯವರು ಅವರಿಗೆ ಸಮಾಧಾನ ಮಾಡಿ ಕಳುಹಿಸಿದ್ದಾರೆ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು) :— ನೀವು ಗಂಡಸರಾಗಿ ಈ ವಿಷಯದಲ್ಲಿ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಕೊಟ್ಟಿದ್ದೀರಾ?

ಶ್ರೀ ಎಸ್.ಎಸ್. ಪಾಟೀಲ್ :— ನಾವು ಸರಾಯಿ ವಿರುದ್ಧವಾಗಿ ಹೆಣ್ಣು ಮಕ್ಕಳು ಮಾಡಿದ ಸತ್ಯಾಗ್ರಹಕ್ಕೆ ಬೆಂಬಲ ಕೊಟ್ಟಿದ್ದೇವೆ. ಕೊನೆಯದಾಗಿ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ ಹಾಗೆ ಸಹಕಾರ ಸಂಘಗಳಿಗೆ ಬಡ್ಡಿ ಮನ್ನಾ ಕೊಡಬೇಕಾದ 6 ಕೋಟಿ ರೂಪಾಯಿಗಳನ್ನು ಸರ್ಕಾರ ಯಾವಾಗ ತುಂಬುತ್ತದೆ ಎಂಬ ಬಗ್ಗೆ, ಮತ್ತು ಈ ಒನ್ ಟೈಮ್ ಸೆಟ್ಲ್‌ಮೆಂಟ್‌ನಲ್ಲಿ ಏನು ಮಾಡಿದ್ದಾರೆ ಅದೇ ರೀತಿ ಸಹಕಾರ ಸಂಸ್ಥೆಗಳದ್ದು ಸುಮಾರು 30 ರಿಂದ 40 ಕೋಟಿ ರೂಪಾಯಿಗಳು ಏನು ಕೊಡಬೇಕು ಎಂಬುದರಲ್ಲಿ ಸರ್ಕಾರ ಹತ್ತು ಅಥವಾ ಹನ್ನೆರಡು ಕಂತುಗಳಲ್ಲಿ ಸಾಲ ಕೊಡಬೇಕು ಎಂಬುದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು. ಈ ರೀತಿ ಕೊಟ್ಟರೆ ಮಾತ್ರ ಡಿ.ಸಿ.ಸಿ. ಬ್ಯಾಂಕ್ ಹಾಗೂ ಸಹಕಾರ ಸಂಸ್ಥೆಗಳು ಉಳಿಯುತ್ತವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ಸುಮಾರು 676.16 ಕೋಟಿ ರೂಪಾಯಿಗಳ ಪೂರಕ ಅಂದಾಜು ಪಟ್ಟಿಯನ್ನು ಸರ್ಕಾರ

ರಾಜ್ಯ ವಿಧಾನಮಂಡಲದ ಮುಂದೆ ಏನು ಮಂಡಿಸಿದ್ದಾರೆ ಅದರ ಬಗ್ಗೆ ನನ್ನ ಕೆಲವೊಂದು ಅನಿಸಿಕೆಗಳನ್ನು ಮತ್ತು ಸಂಶಯಗಳನ್ನು ಮಂಡಿಸುವುದಕ್ಕೆ ಇಚ್ಛಿಸುತ್ತೇನೆ. ಮೊದಲನೆಯದಾಗಿ 12ನೇ ಅಭಿಯಾಚನೆಯಲ್ಲಿ ಕ್ರೀಡೆಗೆ ಸಂಬಂಧಪಟ್ಟ ಹಾಗೆ ಹಾಸ್ಟೆಲ್‌ಗೆ ಸಂಬಂಧಪಟ್ಟ ಹಾಗೆ ಅನುದಾನ ಬಿಡುಗಡೆಗೆ ಸಂಬಂಧಪಟ್ಟಂತೆ ಮಾಹಿತಿ ಕೊಟ್ಟಿದ್ದಾರೆ. ಮಂಗಳೂರು ಕ್ಷೇತ್ರದಲ್ಲಿರುವ ಕ್ರೀಡಾ ಹಾಸ್ಟೆಲ್‌ಗಳಿಗೆ ಅನುದಾನ ಬರದೇ ಅವುಗಳು ನಡೆಯದ ಹಾಗೆ ದುಸ್ಥಿತಿ ಬಂದಿದೆ. ಆದಕಾರಣ ಅನುದಾನವನ್ನು ಇವುಗಳಿಗೆ ಸಕಾಲದಲ್ಲಿ ಒದಗಿಸಬೇಕೆಂದು ಹೇಳಬಯಸುತ್ತೇನೆ. ಮೂರು ವರ್ಷಗಳ ಹಿಂದೆ ಮೂಡಬಿದ್ರೆಯಲ್ಲಿ ಬಾಡಿ ಬಿಲ್ಡಿಂಗ್‌ನಲ್ಲಿ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ ಏನು ನಡೆದಿತ್ತೋ ಅಲ್ಲಿಗೆ ಬಿಡುಗಡೆ ಮಾಡಬೇಕಾದ ನಾಲ್ಕುವರೆ ಲಕ್ಷ ರೂಪಾಯಿಗಳ ಬಾಕಿ ಹಣವನ್ನು ಕೊಡುತ್ತಿಲ್ಲ ಮತ್ತು ಹೊಸದಾಗಿ ಬಿಡುಗಡೆ ಮಾಡಬೇಕಾದ ಅನುದಾನವನ್ನು ಕೂಡಕೊಡಿತ್ತಿಲ್ಲ. ಇದು ಸರಿಯಲ್ಲವೆನ್ನುವುದನ್ನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ. ಇನ್ನು ಅಭಿಯಾಚನೆ ಸಂಖ್ಯೆ 1350 ರಲ್ಲಿ ಕನ್ನಡ ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾಹಿತಿ ಇದೆ. ಬಹುಶಃ ತುಳು, ಕೊಂಕಣಿ, ಕೊಡವ ಭಾಷೆಯ ಅಕಾಡೆಮಿಗಳಿಗೆ ಹೆಚ್ಚಿನ ಪ್ರೋತ್ಸಾಹ ಧನವನ್ನು ಕೊಡುವ ಮೂಲಕ ಅದನ್ನು ಅಭಿವೃದ್ಧಿಪಡಿಸಬಹುದು ಎನ್ನುವ ನಿರೀಕ್ಷೆ ನಮ್ಮದಾಗಿತ್ತು. 15 ಲಕ್ಷ ರೂಪಾಯಿಗಳನ್ನು ಕೊಡಬೇಕಾದ್ದನ್ನು ಕೇವಲ 8 ಲಕ್ಷ ರೂಪಾಯಿಗಳಿಗೆ ಸೀಮಿತಗೊಳಿಸಿದ್ದಾರೆ. ಇವಕ್ಕೆ ಅನುದಾನವನ್ನು ಇನ್ನು ಹೆಚ್ಚು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನೂ ರಂಗಮಂದಿರಕ್ಕೆ ಸಂಬಂಧಪಟ್ಟಂತೆ ಮಂಡ್ಯ ಜಿಲ್ಲೆಗೆ ಕೊಟ್ಟ ಆದ್ಯತೆಯಷ್ಟೆ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನಲ್ಲೂ ಕೊಟ್ಟಿದ್ದರೆ ನಮಗೆ ತುಂಬಾ ಸಂತೋಷವಾಗುತ್ತಿತ್ತು. ಆದಕಾರಣ ಇದರ ಜೊತೆಗೆ ಬೇರೆ ಜಿಲ್ಲೆಗಳಿಗೂ ಕೂಡ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ಅಭಿಯಾಚನೆ ಸಂಖ್ಯೆ 23 ರಲ್ಲಿ ಆಡಳಿತ ಸುಧಾರಣಾ ಆಯೋಗಕ್ಕೆ 55 ಲಕ್ಷ ರೂಪಾಯಿಗಳು ಮತ್ತು ತೆರಿಗೆ ಸುಧಾರಣಾ ಆಯೋಗಕ್ಕೆ 100 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ಬಿಡುಗಡೆಯಾಗುವಂಥದ್ದು 10 ಲಕ್ಷ ರೂಪಾಯಿಗಳೇ ಇರಬಹುದು. ಇಲ್ಲಿ ನನ್ನ ಆಕ್ಷೇಪ ಏನೆಂದು ವ್ಯಕ್ತಮಾಡುತ್ತೇನೆ. ಇಲ್ಲಿ ಕೇವಲ ಆಯೋಗಕ್ಕೆ ಇಷ್ಟು ಹಣವನ್ನು ವಿನಿಯೋಗ ಮಾಡಲಾಗುತ್ತಿದೆ, ಮುಖ್ಯವಾಗಿ ಆಡಳಿತ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಖಂಡಿತವಾಗಿಯೂ ಇದರಿಂದ ಏನು ಪ್ರಯೋಜನವಾಗುವುದಿಲ್ಲ. ಒಂದು ಉದಾಹರಣೆಯನ್ನು ನಿಮಗೆ ಹೇಳಬೇಕೆಂದರೆ ಒಬ್ಬ ಜಂಟಿ ಆಯುಕ್ತರ ಮಟ್ಟದ ಅಧಿಕಾರಿ ಭ್ರಷ್ಟರೆಂದು ಇಂಟಲಿಜೆನ್ಸ್‌ರವರಿಂದ ಗುರುತಿಸಲ್ಪಟ್ಟು ಅವರನ್ನು ವರ್ಗಾವಣೆ ಮಾಡಿದ ಕೇವಲ 7 ದಿನಗಳಲ್ಲಿಯೇ ಪುನಃ ಮಂಗಳೂರು ಕ್ಷೇತ್ರದಲ್ಲಿ ಅಧಿಕಾರಿಯಾಗಿ ಕುಳಿತುಕೊಂಡಿದ್ದಾರೆ. ಇಂದು ಕೋಟಿಗಟ್ಟಲೆ ಅಡಿಕೆ ವ್ಯಾಪಾರ ಹಾಗೂ ಇನ್ನಿತರ ಪದಾರ್ಥಗಳ ವ್ಯಾಪಾರದಲ್ಲಿ ಭ್ರಷ್ಟಾಚಾರದಿಂದಾಗಿ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಬೇರೆಲ್ಲಾ ಜಿಲ್ಲೆಗಳಲ್ಲಿ ಇದರ ಉಸ್ತುವಾರಿಯನ್ನು ಡಿ.ಸಿ. ನೇತೃತ್ವದಲ್ಲಿ ನಡೆಯುತ್ತಿದ್ದರೆ

ಮಂಗಳೂರಿನಲ್ಲಿ ಮಾತ್ರ ಅಸಿಸ್ಟಂಟ್ ಕಮಿಶನರವರನ್ನು ಹಾಕಿದ್ದಾರೆ. ಮಹಾರಾಷ್ಟ್ರ ಹಾಗೂ ಕೇರಳದ ಕಡೆಗಳಿಂದ ಬರುವ ವಾಹನಗಳ ತಪಾಸಣೆ ಮಾಡುವುದರಲ್ಲಿ ಇಲ್ಲಿ ವಿಫಲರಾಗಿದ್ದಾರೆ. ಆದುದರಿಂದ ಇಂಥ ವ್ಯವಸ್ಥೆಗಳಲ್ಲಿ ಸುಧಾರಣೆ ಮಾಡದೇ ಕೇವಲ ಆಯೋಗಕ್ಕೆ ಹಣ ಕೊಟ್ಟರೆ ಏನು ಪ್ರಯೋಜನವಾಗುವುದಿಲ್ಲವೆನ್ನುವುದನ್ನು ಹೇಳಬಯಸುತ್ತೇನೆ. ಇನ್ನು ಅಭಿಯಾಚನೆ ಸಂಖ್ಯೆ 39 ರಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಸಂಬಂಧಪಟ್ಟಂತೆ 1200 ಲಕ್ಷ ರೂಪಾಯಿಗಳು ಬಾಕಿ ಕೊಡಬೇಕು ಎಂದು ಹೇಳಿದ್ದಾರೆಯೇ ಹೊರತು ಯಾವ ಬಿಲ್‌ಗಳಲ್ಲಿ ಬಾಕಿ ಕೊಡಬೇಕಾಗಿದೆ ಎಂಬ ಬಗ್ಗೆ ಉಲ್ಲೇಖ ಮಾಡಿಲ್ಲ. ಇನ್ನು ಅಭಿಯಾಚನೆ ಸಂಖ್ಯೆ 41 ರಲ್ಲಿ ಹೆಚ್ಚುವರಿ ನ್ಯಾಯಾಲಯ ಸ್ಥಾಪನೆ ಬಗ್ಗೆ ಏನು ಹೇಳಿದ್ದಾರೆ ಅದಕ್ಕೆ ಸ್ವಾಗತ ಕೋರುತ್ತೇನೆ. ಆದರೆ ಮಂಗಳೂರು ಜಿಲ್ಲೆಯ ನ್ಯಾಯಾಲಯದ ಬಗ್ಗೆ ಯಾವುದೇ ಕಾಳಜಿ ಸರ್ಕಾರಕ್ಕಿಲ್ಲವೆಂದು ಹೇಳುತ್ತೇನೆ. 18 ವರ್ಷಗಳಿಂದ ಕಟ್ಟಡ ಪೂರ್ಣಗೊಳಿಸದೇ ಅರ್ಧದಲ್ಲಿಯೇ ನಿಂತಿದೆ. ಇದರ ಬಗ್ಗೆ ಹಾಗೂ ಬೇರೆ ಜಿಲ್ಲೆಗಳಲ್ಲಿ ಅರ್ಧದಲ್ಲಿ ನಿಂತಿರುವ ಕಟ್ಟಡವನ್ನು ಪೂರ್ಣಗೊಳಿಸಲು ಹಾಗೂ ಸೋರಿ ಹೋಗುತ್ತಿರುವ ಕಟ್ಟಡವನ್ನು ದುರಸ್ಥಿಪಡಿಸಲು ಅನುದಾನವನ್ನು ಕೊಟ್ಟಿದ್ದರೆ ಸಂತೋಷವಾಗುತ್ತಿತ್ತು. ಆದರೆ ಇದರ ಬಗ್ಗೆ ಯಾವುದೇ ಉಲ್ಲೇಖ ಮಾಡಿಲ್ಲ ಎಂಬುದರ ಬಗ್ಗೆ ತಿಳಿಸುತ್ತೇನೆ. ಇನ್ನು ಅಭಿಯಾಚನೆ ಸಂಖ್ಯೆ 44ಕ್ಕೆ ಸಂಬಂಧಪಟ್ಟಂತೆ ಬಳ್ಳಾರಿ ರಸ್ತೆಯಲ್ಲಿ ರಸ್ತೆಗಳಿಗಾಗಿ ವಿಶೇಷವಾದ ಪ್ಯಾಕೇಜ್ ಪ್ರೋಗ್ರಾಂ ಹಾಕಿಕೊಂಡ ಹಾಗೆ ಬೇರೆ ಜಿಲ್ಲೆಗಳಿಗೂ ಹಾಕಿಕೊಳ್ಳಬೇಕೆಂದು ವಿನಂತಿಸುತ್ತೇನೆ. ಇನ್ನು ಅಭಿಯಾಚನೆ ಸಂಖ್ಯೆ 49 ರಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ 'ಸ್ತ್ರೀಶಕ್ತಿ' ಯೋಜನೆ ಬಗ್ಗೆ ಹೇಳಿದ್ದಾರೆ. ಈ ಯೋಜನೆಗೆ 72ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗುವುದೆಂದು ಹೇಳಿದ್ದಾರೆ. ಇದರಲ್ಲಿ ವಿಶೇಷವಾಗಿ ಒಂದು ಲಕ್ಷ ಸ್ವಸಹಾಯ ಗುಂಪುಗಳಲ್ಲಿ ಸುಮಾರು 20 ಲಕ್ಷ ಮಹಿಳೆಯರಿಗೆ ಸಹಾಯ ಮಾಡುವುದೇ ಈ ಯೋಜನೆ ಉದ್ದೇಶವಾಗಿದೆ. ಇದರ ಜಾರೀಕರಣಕ್ಕೆ ಅಂಗನವಾಡಿ ಶಿಕ್ಷಕಿಯರನ್ನು ಬಳಸಿಕೊಳ್ಳಲಾಗುತ್ತದೆ. ಆದರೆ ಇವರಿಗೆ ಕೇವಲ 50 ರೂಪಾಯಿಗಳನ್ನು ಮಾತ್ರ ಹೆಚ್ಚುವರಿಯಾಗಿ ಕೊಡಲು ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ನಾನು ವಿನಂತಿ ಮಾಡುವುದೇನೆಂದರೆ ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿಯಾಗಿ 500 ರೂಪಾಯಿಗಳನ್ನು ಹಾಗೂ ಅಂಗನವಾಡಿ ಸಹಾಯಕಿಯರಿಗೆ ಹೆಚ್ಚುವರಿಯಾಗಿ 300 ರೂಪಾಯಿಗಳನ್ನು ಸಹಾಯಧನವಾಗಿ ಕೊಡಬೇಕೆಂದು ವಿನಂತಿಸುತ್ತೇನೆ. ಮಾನ್ಯ ಸಚಿವರು ಈ ಬಗ್ಗೆ ಆಶ್ವಾಸನೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ಅಭಿಯಾಚನೆ ಸಂಖ್ಯೆ 51 ರಲ್ಲಿ ಔಷಧಿ ಖರೀದಿಸಲು ಒಂದು ಟಾಸ್ಕ್‌ಫೋರ್ಸ್ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಕಳೆದ ಹತ್ತೆನ್ನರಡು ವರ್ಷಗಳಿಂದ ಔಷಧಿ ಖರೀದಿಸುವ ಇಲಾಖೆಯಲ್ಲಿ ಇರುವ ಭ್ರಷ್ಟ ಅಧಿಕಾರಿಗಳನ್ನು ಎಲ್ಲಿಯವರೆಗೂ ನೀವು ವರ್ಗಾವಣೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಟಾಸ್ಕ್‌ಫೋರ್ಸ್ ಮಾಡುವುದರಿಂದ ಏನೂ ಪ್ರಯೋಜನಕಾರಿ

ಆಗುವುದಿಲ್ಲವೆಂದು ಹೇಳುತ್ತೇನೆ. ಆಯುರ್ವೇದದ ಇಲಾಖೆಗೆ ಸಂಬಂಧಪಟ್ಟಹಾಗೆ ಒಬ್ಬ ಡ್ರಗ್ ಇನ್ಸ್‌ಪೆಕ್ಟರ್ ಹನ್ನೆರಡು ವರ್ಷಗಳಿಂದ ಒಂದೇ ಕಡೆ ಇದ್ದಾರೆ. ಇವರು ಕೋಟ್ಯಾಂತರ ರೂಪಾಯಿಗಳ ಆಸ್ತಿಮಾಡಿದ್ದಾರೆ. ಸರ್ಕಾರದ ಗಮನಕ್ಕೆ ಈ ವಿಷಯ ತಿಳಿದಿದ್ದರೂ ಕ್ರಮ ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದುದರಿಂದ ಖರೀದಿ ಇಲಾಖೆಯಲ್ಲಿ ಹತ್ತು-ಹನ್ನೆರಡು ವರ್ಷಗಳಿಂದ ಯಾರಿದ್ದಾರೆ ಅವವನ್ನು ವರ್ಗ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ರಾಜ್ಯದ ಅಭಿವೃದ್ಧಿ ಬಗ್ಗೆ ಇನ್ನು ಹಲವಾರು ಯೋಜನೆಗಳನ್ನು ಇದರಲ್ಲಿ ಸೇರಿಸಿರುತ್ತಾರೆಂದು ಆಶಯ ಇತ್ತು. ಆದರೆ ಅಂಥವುಗಳು ಯಾವುವು ಇಲ್ಲದಿರುವುದರಿಂದ ಪೂರಕ ಅಂದಾಜು ಪಟ್ಟಿಗೆ ನನ್ನ ವಿರೋಧವನ್ನು ದಾಖಲಿಸಲು ಇಚ್ಛೆಪಡುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ನೀಡಿ. ತಾವು ಬೇಡ ಎಂದರೆ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು :— ಐದು ನಿಮಿಷದಲ್ಲಿ ಮುಗಿಸಿ.

+ಶ್ರೀ ಸಿ. ಬೈರೇಗೌಡ (ವೇಮಗಲ್) :— ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಎದುರಿಗೆ ಪೂರಕ ಬೇಡಿಕೆಗಳನ್ನು ಒಪ್ಪಿಗೆಗಾಗಿ ಇಟ್ಟಿದ್ದಾರೆ. ಇದನ್ನು ನಾನು ವಿರೋಧ ಮಾಡುತ್ತೇನೆ. ಏಕೆಂದರೆ ನಾನು ವಿರೋಧ ಮಾಡುವುದರ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ. ಈ ರೀತಿಯಾದಂತಹ ಪೂರಕ ಬೇಡಿಕೆಗಳನ್ನು ಇಡುವುದು ಹೊಸದೇನಲ್ಲ. ಎಲ್ಲಾ ಸರ್ಕಾರಗಳು ಎಲ್ಲಾ ಸಂದರ್ಭದಲ್ಲಿ ಕೂಡ ಆರ್ಥಿಕ ವರ್ಷದಲ್ಲಿ ಅನೇಕ ಸಾರಿ ಪೂರಕ ಬೇಡಿಕೆಗಳನ್ನು ಇಡತಕ್ಕಂಥಾದ್ದು ಸರ್ವೇಸಾಮಾನ್ಯ. ಸರ್ಕಾರ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಮುಂದೆ ಏನಾಗುತ್ತದೆಂದು ಯೋಚನೆ ಮಾಡುವುದು ಕಷ್ಟ. ಅಂತಹ ಸಂದರ್ಭಗಳಲ್ಲಿ ಖರ್ಚು ಮಾಡಿ, ಈ ಸದನದ ಒಪ್ಪಿಗೆ ಪಡೆಯುವುದು ನಮ್ಮ ಸಂವಿಧಾನದಲ್ಲಿ ಇರತಕ್ಕಂಥ ಒಂದು ವಿಧಾನ. ಆ ವಿಧಿ ಪ್ರಕಾರ ಈ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಒಂದನೇ ಬೇಡಿಕೆ ಕೃಷಿಗೆ ಸಂಬಂಧಪಟ್ಟಿರತಕ್ಕಂಥಾದ್ದು. ಮಲೆನಾಡು ಅಭಿವೃದ್ಧಿ ಮಂಡಲಿ ಬಿಟ್ಟು ಉಳಿದಿರತಕ್ಕಂಥಾದ್ದು ಒಂದನೇ ಬೇಡಿಕೆ ಇಟ್ಟಿದ್ದಾರೆ. ಇಲ್ಲಿ ನಾನು ಮುಖ್ಯವಾಗಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇಚ್ಛಿಸುತ್ತೇನೆ. ಒಂದನೇ ಬೇಡಿಕೆಯಲ್ಲಿ ಐಟಂ ನಂಬರ್ 6ರಲ್ಲಿ ಸುಮಾರು 6.6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ವ್ಯವಸ್ಥೆ ಮಾಡಿ ಅದಕ್ಕೆ ದೊಡ್ಡ ಪ್ರಚಾರ ಕೊಟ್ಟು, ಅನೇಕ ರೀತಿಯಲ್ಲಿ ಹೊಸದಾಗಿ ಏನೇನೋ ಮಾಡುತ್ತಿದ್ದೇವೆ ಎಂದು ಸಹ ಹೇಳಿದ್ದಾರೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಧಾರವಾಡದಲ್ಲಿ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯ ವ್ಯವಸ್ತೆ ಮಾಡಿದಂತಹ ಕೃಷಿ

ಮೇಳಕ್ಕೆ ಕೂಡ ಹೋಗಿಬಂದರು. ಅಲ್ಲಿ ಅವರು ಒಂದು ಹೇಳಿಕೆಯನ್ನು ನೀಡಿದ್ದಾರೆ. ಏನೆಂದರೆ ನಮ್ಮ ಸರ್ಕಾರ ಬಂದಮೇಲೆ ಕೃಷಿಗೆ ಬೆಳೆ ವಿಮೆಗೋಸ್ಕರ ನೂರು ಕೋಟಿ ರೂಪಾಯಿಯನ್ನು ಮೀಸಲಾಗಿಟ್ಟಿದ್ದೇವೆ. ಈ ಕೆಲಸವನ್ನು ಯಾವ ಸರ್ಕಾರ ಕೂಡ ಮಾಡಿಲ್ಲವೆಂದು ಸಹ ಹೇಳಿದ್ದಾರೆ ನಿಜ. ಆದರೆ ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರಿಗಳಾಗಿರುವುದು ಯಾವ ರೀತಿ ಮಾಹಿತಿಯನ್ನು ನೀಡಿದ್ದರೋ ಗೊತ್ತಿಲ್ಲ. ಈ ಬೆಳೆ ವಿಮೆ ಯೋಜನೆ ಹೊಸದಾಗಿ ಬಂದಿರತಕ್ಕಂಥ ಯೋಜನೆ. ಇದಕ್ಕಿಂತ ಮೊದಲು ಯೋಜನೆ ಬೇರೆ ಬೇರೆ ರೂಪದಲ್ಲಿ ಇತ್ತು. ಎಲ್ಲಾ ಸಂದರ್ಭದಲ್ಲಿ ಸಹ ರಾಜ್ಯಸರ್ಕಾರ ಅದಕ್ಕೆ ಭಾಗಿಯಾಗತಕ್ಕಂಥಾದ್ದು ಇದೆ. ಈಗ ಬಂದಿರತಕ್ಕಂಥ ಯೋಜನೆ ಪ್ರಕಾರ ಈ ಪ್ರೀಮಿಯಮ್ ಕೊಡಬೇಕಾಗಿರುವುದು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ಹಾಗೂ ರೈತರು ಸಹ ಕೊಡಬೇಕಾಗುತ್ತದೆ. ಅದರ ಬಗ್ಗೆ ನಾನು ಅನೇಕರ ಜೊತೆ ಮಾತನಾಡಿದೆ. ಈಗ ಬಂದಿರತಕ್ಕಂಥ ಬೆಳೆ ವಿಮೆ ಯೋಜನೆ ವಿಶೇಷವಾಗಿ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಈಗ ಇರತಕ್ಕಂಥ ಈ ಬೆಳೆ ವಿಮೆ ಯೋಜನೆಗೆ ವಿಶೇಷವಾಗಿ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಈಗ ಇರತಕ್ಕಂಥ ಈ ಬೆಳೆ ವಿಮೆ ಕಂಪನಿಗಳು ಯಾರೂ ಕೂಡ ಈ ಕಾರ್ಯಕ್ರಮವನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇದಕ್ಕೋಸ್ಕರ ಒಂದು ವಿಮಾ ಕಂಪನಿಯನ್ನು ಸ್ಥಾಪನೆ ಮಾಡಿ ಅದರ ಮೂಲಕ ಈ ಬೆಳೆ ವಿಮಾ ಮಾಡಬೇಕೆಂದು ಕೇಂದ್ರ ಸರ್ಕಾರದ ಯೋಚನೆ ಇದೆ. ಈ ವಿಚಾರದಲ್ಲಿ ಹೇಳಬೇಕಾದರೆ ನನ್ನ ದೃಷ್ಟಿಯಲ್ಲಿ ಇದು ರೈತರಿಗೆ ಅನುಕೂಲ ಆಗುವುದಕ್ಕಿಂತ ಬದಲಿಗೆ ಈ ಹುಟ್ಟು ಹಾಕತಕ್ಕಂಥ ಸಂಸ್ಥೆ ಅಥವಾ ಈಗಿರತಕ್ಕಂಥ ಈ ವಿಮಾ ಸಂಸ್ಥೆಗಳು ಏನಿವೆ ಇವರಿಗೆ ಅನುಕೂಲವಾಗುತ್ತದೆಯೇ ವಿನಃ ರೈತರಿಗೆ ಅನುಕೂಲವಾಗುವುದರ ಬಗ್ಗೆ ಅನುಮಾನ ಇದೆ. ಮತ್ತೆ ಆ ಪ್ರೀಮಿಯಮ್ ರೇಟ್ ಇರತಕ್ಕಂಥಾದ್ದು ಸಹ ಬಹಳ ಹೆಚ್ಚಾಗಿ ಅಕ್ಯುಮಲೇಟೆಡ್ ಪ್ರೀಮಿಯಮ್ ಎನ್ನುವುದನ್ನು ಸೇರಿಸಿ ಶೇಕಡ 10-12 ರವರೆಗೆ ಸಹ ಹೋಗತಕ್ಕಂಥ ಪರಿಸ್ಥಿತಿ ಇದೆ. ಇದರಿಂದ ರೈತರಿಗೆ ಪ್ರಯೋಜನವಾಗುತ್ತದೆಂದು ನಾನಂತೂ ಕೂಡ ಭಾವಿಸಿಲ್ಲ. ಮತ್ತೆ 100 ಕೋಟಿ ರೂಪಾಯಿಗಳು ಏನು ಈ ಒಂದು ವಿಮಾ ಯೋಜನೆ ಬಗ್ಗೆ ಹೇಳಿದ್ದಾರೆ ಅಷ್ಟು ಕೂಡ ಹಣ ಖರ್ಚಾಗುವುದಿಲ್ಲ. ಏಕೆಂದರೆ ರೈತರು ಮುಂದೆ ಬಂದು ಪ್ರೀಮಿಯಮ್ ಕಟ್ಟುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆದರೆ ಬಹಳ ದೊಡ್ಡ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಒಂದು ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವುದಕ್ಕೆ ಬಂದಿದ್ದರು. ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಬಂದಂತಹ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಏನೆಂದರೆ ನಮ್ಮ ಸರ್ಕಾರ ಬಂದಮೇಲೆ ರಾಜ್ಯದಲ್ಲಿ ಮಾಯಾಬಜಾರ್ ಸೃಷ್ಟಿ ಮಾಡಿದ್ದೇವೆ ಎಂದು. ನಾನು ಹುಡುಗ ಆಗಿದ್ದಾಗ ಈ ಮಾಯಾಬಜಾರ್ ಅನ್ನು ಸಿನಿಮಾದಲ್ಲಿ ನೋಡಿದ್ದೇನೆ, ಹಾಗೂ ಓದಿದ್ದೇನೆ. ಮೊನ್ನೆ ದೀಪಾವಳಿ ಹಬ್ಬ ಬಂತು. ಹಳ್ಳಿಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿದ್ದೇವೆ ಹಾಗೂ ಇವತ್ತಿನ

ದಿವಸ ಮಾಯಾಬಜಾರ್ ಸೃಷ್ಟಿ ಮಾಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ನಾನು ಸ್ವಾಭಾವಿಕವಾಗಿ ಏನು ಮಾಯಾಬಜಾರ್‌ನಲ್ಲಿ ನಡೆಯುತ್ತಿದೆ ನೋಡೋಣ ಎಂದು ಬೆಂಗಳೂರು ಪೇಟೆಯಲ್ಲಿ ಇರತಕ್ಕಂಥ ಅಂಗಡಿಗೆ ಹೋಗಿದ್ದೆನು. ಮಾನ್ಯ ಮುಖ್ಯಮಂತ್ರಿಗಳು ಸೃಷ್ಟಿ ಮಾಡಿರತಕ್ಕಂಥ ಮಾಯಾಬಜಾರ್‌ನಲ್ಲಿ ರೈತರ ಪರಿಸ್ಥಿತಿ ಏನಾಗಿದೆ ಎಂದು ಈ ವಿಚಾರದಲ್ಲಿ ನಾನು ಮಾತನಾಡಿದ್ದೇನೆ. ನಾನು ಮಾತನಾಡಿದ ಮೇಲೆ ಈ ಹೇಳಿಕೆ ಬಂದಿರತಕ್ಕಂಥಾದ್ದು ಮತ್ತು ಇದರ ವಾಸ್ತವಾಂಶ ಏನಿದೆ ಎಂದು ಮಾನ್ಯ ಮುಖ್ಯಮಂತ್ರಿಗಳ, ಸರ್ಕಾರದ, ಸದನದ ಹಾಗೂ ರಾಜ್ಯ ಜನತೆಯ ಗಮನಕ್ಕೆ ತರಬೇಕಾಗಿರುವುದು ನನ್ನ ಕರ್ತವ್ಯ ಎಂದು ನಾನಂತೂ ಭಾವಿಸಿದ್ದೇನೆ. ಹೋದ ವರ್ಷ ದೀಪಾವಳಿ ಸಂದರ್ಭದಲ್ಲಿ ಅಕ್ಕಿ ಬೆಲೆ ಸೂಪರ್ ಫೈನ್ 20ರಿಂದ 21 ರೂಪಾಯಿಯವರೆಗೂ ಇತ್ತು. ಮಾನ್ಯ ಕೃಷ್ಣರವರು ಸೃಷ್ಟಿ ಮಾಡಿರತಕ್ಕಂಥ ಮಾಯಾಬಜಾರ್‌ನಲ್ಲಿ ಇವತ್ತು ಅದೇ ಅಕ್ಕಿ ಬೆಲೆ 120 ರಿಂದ 12 ರೂಪಾಯಿಯವರೆಗೆ ಬಂದಿದೆ. ಇದನ್ನು ಮಾಯಾಬಜಾರ್ ಸೃಷ್ಟಿಯಾಗಿದೆ ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ತೊಗರಿ ಬೇಳೆ ಬೆಲೆ ಮೂರರಿಂದ ಐದು ರೂಪಾಯಿಯವರೆಗೂ ಕಡಿಮೆಯಾಗಿದೆ. ಇದು ಹೋದ ವರ್ಷದ ದೀಪಾವಳಿ ಮತ್ತು ಮೊನ್ನೆ ಬಂದಂತಹ ದೀಪಾವಳಿಯಲ್ಲಿ ಕಡಿಮೆಯಾಗಿರುವುದು. ಕಡಲೇಬೇಳೆ ಎರಡು ರೂಪಾಯಿ ಕಡಿಮೆಯಾಗಿದೆ. ಒಂದು ಕೆ.ಜಿ. ತೆಂಗಿನ ಕಾಯಿ ಎಣ್ಣೆಗೆ 20 ರೂಪಾಯಿ ಕಡಿಮೆಯಾಗಿದೆ. ಹತ್ತು ರೂಪಾಯಿಗೆ ನಾಲ್ಕು ತೆಂಗಿನಕಾಯಿ ಬರುತ್ತದೆ. ಇವರು ಸೃಷ್ಟಿಸಿರತಕ್ಕಂಥ ಮಾಯಾಬಜಾರ್‌ನಲ್ಲಿ 10 ರೂಪಾಯಿಗೆ ನಾಲ್ಕು ತೆಂಗಿನಕಾಯಿ ಬರುತ್ತದೆ. ತೆಂಗಿನ ಎಣ್ಣೆಗೆ 20 ರೂಪಾಯಿ ಒಂದು ಕೆ.ಜಿ.ಗೆ ಕಡಿಮೆಯಾಗಿದೆ. ಮೆಣಸಿನಕಾಯಿ ಹದಿನೈದರಿಂದ ಇಪ್ಪತ್ತು ರೂಪಾಯಿಯವರೆಗೆ ಕಡಿಮೆಯಾಗಿದೆ. ನಿನ್ನೆ ಪತ್ರಿಕೆಯಲ್ಲಿ ಕೂಡ ಓದಿದ್ದೇನೆ. ಈಗ ನುಗ್ಗಿ ಪ್ರಾರಂಭವಾಗಿದೆ. ನಾನು ಈಗ ರೇಟ್ ಹೇಳುತ್ತಿರುವುದು ದೀಪಾವಳಿ ದಿವಸದ ಧಾರಣೆನಯನ್ನು. ಇನ್ನು ಬೆಳೆ ಜಾಸ್ತಿಯಾಗಿರುವ ಕಾರಣ ಬೆಲೆ ಕಡಿಮೆಯಾಗಿದೆ. ಹೊರಗಡೆಯಿಂದ ಬರತಕ್ಕಂಥ ಸೇಬು 100 ರೂಪಾಯಿ ಇದ್ದದ್ದು 30 ರೂಪಾಯಿಗೆ ಇಳಿದಿದೆ. ವೀಳೆದೆಲೆ ಕೂಡ ಯಾರೂ ಕೇಳದಂತಹ ಪರಿಸ್ಥಿತಿ ಇದೆ. ಅಡಿಕೆ ಪರಿಸ್ಥಿತಿ ಮಾನ್ಯ ಸದಸ್ಯರು ಎಲ್ಲಾ ಹೇಳಿದರು.

ಅಧ್ಯಕ್ಷರು :— ಮಾನ್ಯ ಬೈರೇಗೌಡರೇ ಪೂರಕ ಅಂದಾಜಿನ ಮೇಲೆ ಮಾತನಾಡಬೇಕು. ಇದಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಸಿ. ಬೈರೇಗೌಡ :— ಆಗ್ರೋ ಶೃಂಗ ಸಭೆ ಎಂದು ಮಾಡಿ 6.6 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇವರು ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ.

4.00 ಪಿ.ಎಂ.

ನಮ್ಮ ಭಾಗದಲ್ಲಿ ಹೂಗಳು ಅದರಲ್ಲೂ ಸೇವಂತಿಗೆ ಹೆಚ್ಚಿಗೆ ಬೆಳೆಯುತ್ತಾರೆ. ಇದು ನೂರು ರೂಪಾಯಿಗಳು ಇದ್ದದ್ದು 30 ರೂ 20 ರೂ.ಗಳಿಗೆ ಬಂದಿದೆ ಸುಗಂಧರಾಜ ಹೂವಿನ ಹಾರ ಇದು 50 ರೂ.ಗಳು ಇದ್ದದ್ದು 30 ರೂಪಾಯಿಗಳಿಗೆ ಬಂದಿದೆ. ಇನ್ನು ತೆಂಗಿನಕಾಯಿಯ ಬೆಲೆಯನ್ನು ಆಗಲೇ ಹೇಳಿದ್ದೇನೆ. ಹೀಗೆ ಮಾನ್ಯ ಮುಖ್ಯಮಂತ್ರಿಯವರು ಸೃಷ್ಟಿಸಿರುವಂತಹ ಮಾಯಾಬಜಾರ್‌ನಲ್ಲಿ ಕೃಷಿ ಶೃಂಗ ಸಭೆಯನ್ನು ಧಾರವಾಡದಲ್ಲಿ ಮಾಡಿ ಅದಕ್ಕೆ 6.6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಮಾಡಿರುವಂಥಾದ್ದು ಇದೆ. ಮೊನ್ನೆ ಎರಡು ಪ್ರಮುಖವಾದಂತಹ ಘಟನೆಗಳು ಬೆಂಗಳೂರಿನಲ್ಲಿ ನಡೆಯಿತು. ಮೊದಲನೆಯದಾಗಿ ಇನ್‌ಫರ್ಮೇಷನ್ ಟೆಕ್ನಾಲಜಿ ಬಗ್ಗೆ ಪ್ಯಾಲೆಸ್ ಗ್ರೌಂಡ್‌ನಲ್ಲಿ ಎಕ್ಸಿಬಿಷನ್ ಪ್ರಾರಂಭವಾಯಿತು. ಇದನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಓದಿದ್ದೀರಿ. ಕೆಲವು ಸ್ಟಾಲ್‌ಗಳ ಬಳಿ ಮೈಲಿಗಟ್ಟಲೆ ಜನರು ನಿಂತಿದ್ದರು. ಮಾನ್ಯ ಅಧ್ಯಕ್ಷರೆ, ನಾವು ಎಲ್ಲಿಗೆ ಹೋಗುತ್ತಿದ್ದೇವೆನ್ನುವುದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಅದೇ ಸಂದರ್ಭದಲ್ಲಿ ಅದೇ ದಿವಸ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದವರು ಕೃಷಿ ಮೇಳವನ್ನು ಮಾಡಿದ್ದರು. ಅಲ್ಲಿ ಜನರೇ ಇರಲಿಲ್ಲ, ಆದರೆ ಅರಮನೆ ಮೈದಾನದಲ್ಲಿ ವ್ಯವಸ್ಥೆ ಮಾಡಿದ್ದಂತಹ ಪ್ರದರ್ಶನಕ್ಕೆ ಜನರು ಕ್ಯೂ ನಿಂತಿದ್ದರು. ತಾವು ಇವತ್ತಿನ ದಿವಸ ಏನು ಮಾಯಾ ಬಜಾರ್ ಅನ್ನು ಮಾಡಿದ್ದೀರಿ?

ಶ್ರೀಮತಿ ಮೋಟಮ್ಮ:— ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಅಲ್ಲಿಗೆ ಬಂದಿಲ್ಲವೆಂದು ರೈತರು ಈ ಕೃಷಿ ಮೇಳಕ್ಕೆ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ :— ಇರಬಹುದು, ನಾನು ಅದನ್ನು ಕೇಳಿಕೊಂಡು ಬಂದು ತಮಗೆ ಹೇಳುತ್ತೇನೆ. ಈ ರೀತಿಯ ಮಾಯಾಬಜಾರ್ ಅಲ್ಲ ಸೃಷ್ಟಿಯಾಗಬೇಕಾದಂಥಾದ್ದು ನಾನು ಈ ಬಗ್ಗೆ ಆಗಲೇ ಸಾಕಷ್ಟು ರೈತರ ಕಷ್ಟದ ಬಗ್ಗೆ ಹೇಳಿದ್ದೇನೆ. ಅದರ ವಿವರವನ್ನು ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಾಕಷ್ಟು ಚರ್ಚೆಯಲ್ಲಿ ಮಾತನಾಡುವಾಗ ಹೇಳಿದ್ದೇನೆ. ಇವತ್ತು ಈ ವಿಚಾರದಲ್ಲಿ ಏನು ಆಗುತ್ತಿದೆ ಎನ್ನುವಂಥಾದ್ದನ್ನು ಯೋಚನೆ ಮಾಡಬೇಕಾಗುತ್ತದೆ. ತಾವು ಮಾಯಾಬಜಾರ್‌ಅನ್ನು ಸೃಷ್ಟಿ ಮಾಡಿದ್ದೇವೆಂದು ಹೇಳಿ, ಇದನ್ನು ಸಿನಿಮಾಗಳಲ್ಲಿ ತೋರಿಸಿದ ಹಾಗೆ ತೋರಿಸುವುದಕ್ಕೆ ದಯವಿಟ್ಟು ಹೋಗಬೇಡಿ. ಇದರ ವಾಸ್ತವಾಂಶ ಏನು ಎಂಬುದನ್ನು ದಯವಿಟ್ಟು ಗಮನಿಸಿ, ನಾನು ಉದಾಹರಣೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದಂತಹ ಪ್ರದರ್ಶನ, ಇನ್ನೊಂದು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದಂತಹ ಕೃಷಿ ಮೇಳ ಇವೆರಡನ್ನೂ ಹೋಲಿಕೆ ಮಾಡಿದರೆ ಪರಿಸ್ಥಿತಿ ಎಲ್ಲಿಗೆ ಹೋಗುತ್ತಿದೆ ಎಂದರೆ ಈ ಕೃಷಿ, ಗ್ರಾಮೀಣ ಬದುಕು ಏನಾಗುತ್ತಿದೆ,

ಎಂಬುದನ್ನು ಇವತ್ತು ತೀವ್ರವಾಗಿ ಯೋಚನೆ ಮಾಡಬೇಕಾದಂತಹ ಅವಶ್ಯಕತೆ ಇದೆ, ಎನ್ನುವಂಥಾದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಾ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) :— ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಆರ್ಥಿಕ ಆರೋಗ್ಯದ ಒಂದು ಅಂಗವಾದಂತಹ ಪೂರಕ ಅಂದಾಜಿನ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ. ಈ ಪೂರಕ ಅಂದಾಜನ್ನು ಸ್ವಾಗತಿಸಬೇಕಾ? ವಿರೋಧಿಸಬೇಕಾ? ಎಂದು ಯೋಚನೆ ಮಾಡುತ್ತಿದ್ದಾಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅನೇಕ ಯೋಜನೆಗಳ ಮಂಜೂರಾತಿಗೆ ಪೂರಕವಾಗಿ ಹಣವನ್ನು ಒದಗಿಸಿರುವುದರಿಂದ ಅವೆಲ್ಲವನ್ನು ಸ್ವಾಗತಿಸುತ್ತೇವೆಂದು ಹೇಳಿದರು. ಅದೇ ರೀತಿಯಲ್ಲಿ ಸಂಯುಕ್ತ ಜನತಾ ದಳದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ನಾವು ಅಧಿಕಾರ ಮಾಡುವಾಗ ಕೆಲವು ವಿಷಯಗಳಿಗೆ ಮಾತು ಕೊಟ್ಟಿದ್ದೆವು. ಈ ಕಮಿಟ್‌ಮೆಂಟ್ ಫುಲ್ ಫಿಲ್ ಮಾಡುವುದಕ್ಕೆ ತಮ್ಮ ಮಾತನ್ನು ಉಳಿಸುವಂಥಾದ್ದಕ್ಕೆ ಹಣವನ್ನು ಒದಗಿಸಿಕೊಟ್ಟಿದ್ದೀರಿ, ಆದುದರಿಂದ ನಾವು ಇದನ್ನು ಸ್ವಾಗತಿಸುತ್ತೇವೆಂದು ಹೇಳಿದರು. ಈ ಪೂರಕ ಅಂದಾಜಿನ ಮತ್ತೊಂದು ವಿಚಾರವನ್ನು ನೋಡಿದಾಗ ಈ ಎರಡು ಮಾತುಗಳು ನಿಜವಾಗುತ್ತದೆ. ಕೆಲವು ಹೊಸ ಯೋಜನೆಗಳಿಗೆ ಪೂರಕವಾಗಿಯೇ ಅನುದಾನವನ್ನು ಕೊಟ್ಟಿರುವಂಥಾದ್ದು. ಇನ್ನು ಕೆಲವು ಕಳೆದ ವರ್ಷ ಮಾಡಿರುವಂತಹ ಖರ್ಚುಗಳಿಗೆ, ಕಮಿಟ್‌ಮೆಂಟ್‌ಗಳನ್ನು ತೀರಿಸುವಂಥಾದ್ದು ಈ ಎರಡನ್ನೂ ಅವರೇ ಸ್ವಾಗತಿಸಿರುವಾಗ ನಾನು ಆ ದೃಷ್ಟಿಯಿಂದ ಇದನ್ನು ಸ್ವಾಗತಿಸುವುದನ್ನು ಬಿಟ್ಟರೆ ಅದು ಅಪಚಾರವಾಗುತ್ತದೆಂದು ಹೇಳುತ್ತಾ, ನಮ್ಮ ಸ್ನೇಹಿತರು ಸ್ವಾಗತಿಸಿರುವುದರ ಜೊತೆಗೆ ನಾನು ಈ ಪೂರಕ ಅಂದಾಜನ್ನು ಸ್ವಾಗತಿಸುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವೆಲ್ಲ ಸಹಜವಾದಂಥಾದ್ದು, ಈ ಯೋಜನಾ ವೆಚ್ಚ, ಯೋಜನಾ ಗಾತ್ರ ಅದರ ಕಡಿತ, ಸಂಪನ್ಮೂಲಗಳ ಕ್ರೋಢೀಕರಣ ಅದರ ವಿಫಲತೆ, ಇವುಗಳಿಂದ ಯೋಜನಾ ಗಾತ್ರವನ್ನು ಕಡಿತ ಮಾಡಬೇಕಾಗುತ್ತದೆ. ಸರ್ಕಾರ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ವಿಫಲವಾಗುತ್ತಿದೆ, ಅದಕ್ಕಾಗಿ ಯೋಜನಾ ಗಾತ್ರವನ್ನು ಕಡಿತಗೊಳಿಸಬೇಕಾಗುತ್ತದೆ. ನನಗೆ ತಿಳಿದಮಟ್ಟಿಗೆ ಕಳೆದ ವರ್ಷದ ಪೂರಕ ಅಂದಾಜನ್ನು ನೋಡಿದೆ, ಈ ವರ್ಷ 600 ಕೋಟಿ ರೂಪಾಯಿಗಳು ಇದ್ದರೆ, ಹೋದ ವರ್ಷ ಸಾವಿರ ಕೋಟಿ ರೂಪಾಯಿಗಳು ಇದೆ. ನಾನು ಕಳೆದ ಒಂದೆರಡು ವರ್ಷಗಳ ಪೂರಕ ಅಂದಾಜಿನ ಪ್ರತಿಗಳನ್ನು ನೋಡಿದೆ. ಈ ವರ್ಷದ ಪೂರಕ ಅಂದಾಜನ್ನು ಮಂಡಿಸುವುದು ಮತ್ತು ಅದರ ಚರ್ಚೆ ಆಗುವಂಥಾದ್ದು ಅಷ್ಟೇ ಸಹಜವಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಂಪನ್ಮೂಲಗಳ ಕ್ರೋಢೀಕರಣದ ವಿಫಲತೆಯಿಂದಲೇ ಯೋಜನಾ ಗಾತ್ರವನ್ನು ಕಡಿತಮಾಡುವಂಥಾದ್ದು ಅತ್ಯಂತ ಸಹಜವಾದಂತಹ ಪ್ರಕ್ರಿಯೆಯಾಗಿದೆ. ಮಾನ್ಯ ಅಧ್ಯಕ್ಷರೆ, ನಾನು ಯಾರನ್ನೂ ದೂಷಿಸಬೇಕೆಂಬ ಆಸೆ ಇಲ್ಲ.

ಇರುವಂತಹ ವಿಷಯವನ್ನು ತಮ್ಮ ಮುಖಾಂತರ ಹೇಳಲಿಚ್ಛಿಸುತ್ತಿದ್ದೇನೆ. ರಾಜ್ಯದಲ್ಲಿ ಜನತಾ ದಳ ಸರ್ಕಾರವಿದ್ದಾಗ ಕೇಂದ್ರದಲ್ಲೂ ಜನತಾ ದಳ ಸರ್ಕಾರವಿದ್ದ ಸಂದರ್ಭದಲ್ಲಿ ಶ್ರೀ ವೈ.ಕೆ. ಅಲಗ್‌ ಎನ್ನುವವರು ಯೋಜನಾ ಮಂತ್ರಿಗಳಾಗಿದ್ದರು. ಅವರು ಪಾರ್ಲಿಮೆಂಟ್‌ನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. These are the exact words he used: "Government of Karnataka has no option except, to cut the size of the Plan bacause they have failed to mobilise the resources." These are the exact words used not in the bazaar, but on the floor of the Parliament. ಆದುದರಿಂದ ಮೊಬಲೈಜೇಷನ್ ಅನ್ನು ಅಥವಾ ಇದರಲ್ಲಿ ವಿಫಲವಾಗಿ ಕಟ್ ಮಾಡುವಂಥಾದ್ದು ಅಥವಾ ಯೋಜನಾ ಬೆಳವಣಿಗೆಯಲ್ಲಿ ಸ್ವಲ್ಪ ಕುಂಠಿತವಾಗುವಂಥಾದ್ದು, ಚೇತರಿಸಿಕೊಳ್ಳುವಂಥಾದ್ದು ಇವೆಲ್ಲವೂ ನನ್ನ ಪ್ರಕಾರ ಸಹಜವಾದಂತಹ ಕ್ರಿಯೆಯೆನ್ನುವ ಮಾತನ್ನು ಹೇಳುತ್ತೇನೆ. ಈ ಪೂರಕ ಅಂದಾಜಿನಲ್ಲಿ ಯಾವ ಯಾವುದಕ್ಕೆ ಹಣವನ್ನು ಒದಗಿಸಿಕೊಟ್ಟಿದ್ದಾರೆ, ಅದನ್ನು ಕೆಲವು ಆಡಳಿತಕ್ಕೆ ಸಂಬಂಧಪಟ್ಟಹಾಗೆ ಇದೆ, ಕೆಲವು ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಇದೆ, ಇವೆಲ್ಲವನ್ನು ಮಾಡಬೇಕಾಗುತ್ತದೆ. ಆದುದರಿಂದ ನಾನು ಈ ಪೂರಕ ಅಂದಾಜನ್ನು ಅತ್ಯಂತ ತುಂಬು ಹೃದಯದಿಂದ ಸ್ವಾಗತಿಸುತ್ತಾ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ಅಧ್ಯಕ್ಷರೆ, ಪೇಜ್ ನಂ. 71ರಲ್ಲಿ ಅಡ್‌ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಎನ್ನುವುದರ ಮೇಲೆ ಕೆಲವು ವಿಷಯಗಳ ಬಗ್ಗೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಎಸ್ಟಿಮೇಟ್ ಕೊಟ್ಟಿದ್ದಾರೆ, ಅದು ಒಳ್ಳೆಯದೇ ಆಗಿದೆ. I welcome the move. But it is stated in the Explanatory note in page 72, " In view of the new additional courts to be established in the State budget, provision is npot sufficient and hence additional grant of sum of Rs. 50/- lakhs has to be done." It is proper and appropriate also. ಆದರಲ್ಲಿ ಎರಡು ವರ್ಷಗಳ ಹಿಂದೆ ನಮ್ಮ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಒಂದು ತೀರ್ಮಾನವಾಯಿತು. ಅದು ಏನೆಂದರೆ to release Rs.50'- lakhs for construction of "Vakeelara Bhavana" in Bangalore and for that an undertaking was also given. They have filed an Affidavit also that effect. ನೀವು ಅಫಿಡವಿಟ್ ಹಾಕಿ 50 ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಲ್ಲ, ಸಪ್ಲಿಮೆಂಟರಿ ಬಜೆಟ್‌ನಲ್ಲೂ ಸಹ ಇಲ್ಲ. ಇದರ ಬಗ್ಗೆ Contempt proceedings ತೆಗೆದು ನೋಡಿದಾಗ ಸರ್ಕಾರ ಹಿಂದೆಯೇ ಇದನ್ನು ತಕ್ಷಣ ಕೊಡುತ್ತೇವೆಂದು ಹೇಳಿದ್ದರು.

ಈಗ ಡ್ರಾಪ್ ಮಾಡಿದ್ದಾರೆ. ಇದುವರೆಗೂ ವಕೀಲರ ಸಂಘದ ಬಿಲ್ಡಿಂಗ್‌ಗೆ 50 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡುತ್ತೇವೆಂದು they have filed an affidavit before the High Court. But so far they have not taken any staps in this direction. ಮಾನ್ಯ ಮುಖ್ಯಮಂತ್ರಿಯವರು ಈ 50 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಏಕೆ ನಿಧಾನವಾಯಿತು, ಇದು ಬಜೆಟ್‌ನಲ್ಲೂ ಇಲ್ಲ, ಸಪ್ಲಿಮೆಂಟರಿಯ ಬಜೆಟ್‌ನಲ್ಲೂ ಇಲ್ಲ. ಇನ್ನು ಮತ್ತೊಂದು ವಿಷಯ ಬಹಳ ಮುಖ್ಯವಾದಂಥಾದ್ದು ಇದು ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುವುದು ಅಗತ್ಯ. ಏಕೆಂದರೆ ಇದು ಕೋರ್ಟ್ ಬಗ್ಗೆ. ಎರಡು ಅಡಿಷನ್‌ನಲ್ಲಿ ಅಕಾಮಡೇಷನ್ ಬೆಂಗಳೂರಿನಲ್ಲಿ ಮಾಡಬೇಕೆಂದು ಆಯವ್ಯಯವನ್ನು ಇಟ್ಟಿದ್ದಾರೆ. ಸರ್ಕಾರದವರು ಇದುವರೆಗೆ ಮಾಡಲಿಲ್ಲ. ಜ್ಯುಡಿಷಿಯರಿ ಮೇಲೆ ಹಣಕಾಸು ಇಲಾಖೆಯವರಿಗೆ ಅಷ್ಟೊಂದು ಗಮನ ಬರುತ್ತಿಲ್ಲ, ಕಾರಣವೇನೊ ಗೊತ್ತಿಲ್ಲ. ಇನ್ನೊಂದು ವಿಚಾರ. ಭಾರತದ ಪ್ರಮುಖ ರಾಜ್ಯಗಳಿಗೆ ನಮ್ಮ ಸದನದ ಸಮಿತಿ ಪ್ರವಾಸ ಹೋಗಿತ್ತು, ಅಲ್ಲೆಲ್ಲಾ ಪ್ರತಿಯೊಂದು ಶಾಸಕರ ಕ್ಷೇತ್ರಕ್ಕೆ ಒಂದುಕೋಟಿ, ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಲಾಗುತ್ತಿದೆ, ಅದೇ ರೀತಿ ನಮ್ಮ ಮುಖ್ಯಮಂತ್ರಿಗಳು ಸಹ ಮಾಡಬೇಕೆನ್ನುವ ಒಂದು ಪ್ರಸ್ತಾವನೆಯು ಆದೆ, ಬಹುಶಃ ರಾಜಕುಮಾರ್ ಅಪಹರಣದ ಹಿನ್ನೆಲೆಯಲ್ಲಿ ನಿಧಾನ ಮಾಡುತ್ತಿದ್ದಾರೆ. ಯಾವುದೇ ಹಣಕಾಸು ಇಲ್ಲದಿದ್ದರೆ, ಬಹುಶಃ ಶಾಸಕರು ಏನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಇವತ್ತು ಆ ಬಗ್ಗೆ ಪ್ರಕಟಣೆ ಮಾಡಬೇಕು. ಆ ಆಯವ್ಯಯದಲ್ಲಿ ಮಾಡೋಣವೆಂದು ಹೇಳಿದ್ದೀರಿ, ಇವತ್ತು ಇದು ಹೆಚ್ಚುವರಿ ಆಯವ್ಯಯ ಇದಕ್ಕೆ ನಾವೆಲ್ಲಾ ನಮ್ಮ ಒಪ್ಪಿಗೆಯನ್ನು ಕೊಡುತ್ತೇವೆ, ಶಾಸಕರ ಕ್ಷೇತ್ರಕ್ಕೆ ಇಷ್ಟು ಮೊತ್ತವೆಂದು ಪ್ರಕಟಣೆ ಮಾಡಿ. ಇಲ್ಲದಿದ್ದರೆ, ಬೆಂಗಳೂರಿನಲ್ಲಿರುವ ಶಾಸಕರಿಗೆ ಏನು ಕೆಲಸವಿಲ್ಲ, ಗ್ರಾಮಾಂತರ ಪ್ರದೇಶದ ಶಾಸಕರಿಗೆ ಅಲ್ಲಿ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಗ್ರಾಮಪಂಚಾಯತ್ ಇರುವುದರಿಂದ ಯಾವುದೇ ಕೆಲಸವಿಲ್ಲವಾಗಿದೆ, ಸುಮ್ಮನೆ ಹೋಗುವುದು ಬರುವುದಾಗಿದೆ. ಬೆಂಗಳೂರಿನಲ್ಲಿ ಫ್ಲಡ್ ಆಯಿತು ಹೆಚ್ಚುವರಿ ಆಯವ್ಯಯದಲ್ಲಿ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾಪವೇ ಇಲ್ಲ. ನಾವು 20 ಕೋಟಿ ರೂಪಾಯಿಗಳು ತುರ್ತಾಗಿ ಬೇಕೆಂದು ಹೇಳಿದೆವು ತಾವು ಅದಕ್ಕೆ ಪ್ರಾವಿಸನ್ ಮಾಡಿಲ್ಲ, ನಾನು ಹೇಳಿದ ಮೂರು ವಿಷಯಗಳು ಹೆಚ್ಚುವರಿ ಆಯವ್ಯಯದಲ್ಲಿ ಸೇರಬೇಕು. ಹಿಂದೆ ನಮ್ಮ ಮುಖ್ಯ ನ್ಯಾಯಾಧೀಶರು ಒಂದು ಹೊಸ ಸೈಕಲ್ ಬೇಕೆಂದು ಕೇಳಿದರು, ಆ ಸಂದರ್ಭದಲ್ಲಿ ಹಣಕಾಸು ಇಲಾಖೆಯವರು ಹಳೆಯ ಸೈಕಲ್ ಅನ್ನೆ ರಿಪೇರಿ ಮಾಡಿ ಉಪಯೋಗಿಸಿಕೊಳ್ಳಿ ಎಂದು ಹೇಳಿದರಂತೆ, ಹೀಗೆ ನಮ್ಮ ನ್ಯಾಯಾಂಗದ ಬಗ್ಗೆ ಹಣಕಾಸು ಇಲಾಖೆಯವರು ಅದನ್ನೇ ಕೊನೆಯ ಆದ್ಯತೆ ಕೊಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಜುಡಿಷರಿ ಬಗ್ಗೆ ಬಹಳ ಕಳಕಳಿ ಇದೆ. ನಮ್ಮ ಕಾನೂನು ಮಂತ್ರಿಗಳು ಸದನದಲ್ಲಿ ಇಲ್ಲ, ಬಹುಶಃ ಕೋರ್ಟ್‌ಗೆ ಕೊಟ್ಟಿರುವ

ಅಂಡರ್‌ಟೇಕಿಂಗ್ ಆಧಾರದ ಮೇಲೆ ಹೆಚ್ಚುವರಿ ಆಯವ್ಯಯದಲ್ಲಿ ಬಡ್ಜೆಟ್ ಪ್ರಾವಿಷನ್ ಮಾಡುತ್ತೇವೆಂದು ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಹೇಳುತ್ತಿದ್ದರು, ಅದು ಮುಖ್ಯ. ಆದರೆ ಹೆಚ್ಚುವರಿ ಆಯವ್ಯಯದಲ್ಲಿ ಇಲ್ಲ ಇನ್ಯಾವಾಗ ಬರುತ್ತದೆಯೊ ಏನೊ ಗೊತ್ತಿಲ್ಲ. ಕೋರ್ಟ್‌ಗೆ ಅಂಡರ್‌ಟೇಕಿಂಗ್ ಕೊಟ್ಟು ಎರಡು ವರ್ಷಗಳಾಗಿವೆ, ಇದುವರೆವಿಗೂ ಅದು ಕಾರ್ಯಗತವಾಗಿಲ್ಲ ದಯವಿಟ್ಟು ಈ ಬಗ್ಗೆ ಗಮನಹರಿಸಬೇಕೆಂದು ಹೇಳಬಯಸುತ್ತೇನೆ.

+ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜಿನ ಬಗ್ಗೆ ಮಾತನಾಡುತ್ತ ನಾನು ಒಂದೆರಡು ಅಂಶಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಇವತ್ತು ರಾಜ್ಯದಲ್ಲಿನ ಸುಮಾರು 12 ಸಹಕಾರ ನೂಲಿನಗಿರಣಿಗಳಿಗೆ ಅವುಗಳ ಟೆಕ್ನೊ ಎಕಾನಮಿ ಸಮೀಕ್ಷೆ ಮಾಡಿ ವರದಿಯನ್ನು ಕೊಟ್ಟ ನಂತರ ಅವುಗಳನ್ನು ಪುನಶ್ಚೇತನಗೊಳಿಸುವ ಕೆಲಸವನ್ನು ಮಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆ ದಿಶೆಯಲ್ಲಿ ಮೀಸಲಿಟ್ಟ ಹಣ ಈ ಪೂರಕ ಬೇಡಿಕೆಯಲ್ಲಿದೆ. ನೂರಾರು ವರ್ಷಗಳ ಹಿಂದೆ ಈ ಕೆಲಸ ಪ್ರಾರಂಭವಾಗಿ, ಉದಾರೀಕರಣದಿಂದ ಇದೆಲ್ಲಾ ಮತ್ತಷ್ಟು ಅಧೋಗತಿಗೆ ಹೋಗಿದೆ. ಈ ಕೆಲಸ ಮಾಡುವುದರ ಜೊತೆಗೆ ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಆಗ್ರಹಪಡಿಸುವುದೇನೆಂದರೆ, ಎಣ್ಣೆ ಹಾಗೂ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿಯು ಕೂಡ ಚೆನ್ನಾಗಿಲ್ಲ ಈ ಸ್ಥಿತಿಗೆ ಅದನ್ನು ನಡೆಸುವವರೇ ಸಂಪೂರ್ಣ ಕಾರಣವೆಂದು ಹೇಳಲಾಗುವುದಿಲ್ಲ. ಉದಾರೀಕರಣದಿಂದಾಗಿ ಇವತ್ತು ಎಣ್ಣೆ ಕ್ಷೇತ್ರದಲ್ಲಿ ವಿದೇಶದಿಂದ ನಲವತ್ತೈದು ಲಕ್ಷ ಟನ್ ಆಮದಾಗುತ್ತಿದೆ. ಇದರಿಂದ ದೇಶದ ಎಣ್ಣೆ ಕ್ಷೇತ್ರದಲ್ಲಿ ಏರುಪೇರಾಗಿ ಯಾವುದೇ ಕೈಗಾರಿಕೆಗಳು ನಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಇವತ್ತು ರೈತರ ಮೇಲು ದೊಡ್ಡ ಪ್ರಮಾಣದ ಪರಿಣಾಮವಾಗುತ್ತಿದೆ. ಇವತ್ತು ನೆಫೆಡ್ ನಿಂದ ಖರೀದಿ ಮಾಡಿದ ಕೋಟ್ಯಾಂತರ ರೂಪಾಯಿ ಸೂರ್ಯಕಾಂತಿ ಬೀಜ ಎತ್ತಲಿಕ್ಕೆ ಸಾಧ್ಯವಾಗಿಲ್ಲ. ಇವತ್ತು ಅದನ್ನು ಎತ್ತಿ ಪ್ರೊಸೆಸಿಂಗ್ ಮಾಡಿ ಮಾರಾಟ ಮಾಡಲು ಹೋದರೆ ಹಲವಾರು ಕೋಟಿ ರೂಪಾಯಿಗಳ ನಷ್ಟವಾಗುತ್ತದೆ. ಯಾವುದೇ ಉತ್ಪನ್ನವನ್ನು ತೆಗೆದುಕೊಂಡರೂ ಕೃಷಿಕ ಬೆಳೆದ ಉತ್ಪನ್ನದ ಬೆಲೆ ಕುಸಿದುದ್ದರಿಂದ, ಆ ಬೆಲೆಯನ್ನು ಇವತ್ತು ಲಾಭದಾಯಕವಾಗಿ ಮಾಡಬೇಕು, ಅದನ್ನು ಪ್ರೊಸೆಸ್ ಮಾಡುವ ಘಟಕಗಳನ್ನು ಕೂಡ ರಕ್ಷಣೆ ಮಾಡದಿದ್ದರೆ, ದೇಶದಲ್ಲಿ ಒಂದು ಅಪಾಯಕಾರಿ ಬೆಳವಣಿಗೆ ಉಂಟಾಗುತ್ತದೆ. ತಾವು ಯಾವರೀತಿ ಸ್ಪಿನ್ನಿಂಗ್, ಟೆಕ್ಸ್‌ಟೈಲ್ ಮಿಲ್‌ಗಳಿಗೆ ಸಂಬಂಧಿಸಿದಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೊ ಆ ರೀತಿ ಎಣ್ಣೆ ಕಾರ್ಖಾನೆಗಳಿಗೂ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಒನ್ ಟೈಂ ಸೆಟ್ಲ್‌ಮೆಂಟ್ ಮೇಲೆ ಎರಡು ಮಿಲ್‌ಗಳನ್ನು ತೆಗೆದುಕೊಂಡಿದ್ದೀರಿ, ಒಳ್ಳೆಯ ಕೆಲಸ ಹಿಂದಿನ ಸರ್ಕಾರ ಅವರಿಗೆ ಬೇಕಾದ ಎರಡು ಬಿಲ್‌ಗಳನ್ನು ಮಾಡಿದ್ದರು.

ಶ್ರೀ ಕೆ. ಶ್ರೀನಿವಾಸಗೌಡ :— ಕುದವನಹಳ್ಳಿ ಅಧ್ಯಕ್ಷರೆ, ಈಗ ಅವರಿಗೆ ಬೇಕಾದ ಮಿಲ್ ಅನ್ನು ಅವರು ಮಾಡಿಕೊಂಡಿದ್ದಾರೆ.

ಶ್ರೀ ಬಿ.ಆರ್. ಯಾವಗಲ್:— ನೀವು ಪದೇ ಪದೇ ತಪ್ಪು ಮಾಡುತ್ತಿದ್ದೀರಿ ಅದನ್ನು ಸರಿ ಮಾಡುವುದಕ್ಕೆ ಇವತ್ತು ಮಾಡಿರಬಹುದೆಂದು ನಾನು ತಿಳಿದುಕೊಳ್ಳುತ್ತೇನೆ. ಡಿ.ಸಿ.ಸಿ ಬ್ಯಾಂಕ್‌ಗೆ ಸಂಬಂಧಿಸಿದಂತೆ ಏನು ಸಮಸ್ಯೆ ಇದೆ ಅದನ್ನು ಕೂಡ ಒನ್ ಟೈಂ ಸೆಟ್ಲಮೆಂಟ್ ಮಾಡಬೇಕೆಂದು ನಾನು ಬೆಂಬಲಪೂರಕ ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಎಂ. ಕೃಷ್ಣ (ಸನ್ಮಾನ್ಯ ಮುಖ್ಯಮಂತ್ರಿರವರು) :— ಮಾನ್ಯ ಅಧ್ಯಕ್ಷರೆ, ಪೂರಕ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರಿಗೆಲ್ಲಾ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಕಳೆದ ಒಂದು ವರ್ಷದಲ್ಲಿ ಏನು ನಡೆದಿದೆ, ಜನರೇನು ನಿರೀಕ್ಷೆ ಮಾಡಿದ್ದರು, ಜನಪ್ರತಿನಿಧಿಗಳು ಏನು ನಿರೀಕ್ಷೆ ಮಾಡಿದ್ದರು ಎನ್ನುವುದರ ಬಗ್ಗೆ ಚರ್ಚೆ ನಡೆದಿದೆ. ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದಂತೆ ಸರ್ಕಾರದ ಬಣ್ಣಗಳೇನೆ ಇದ್ದರು ಸರ್ವೆಸಾಮಾನ್ಯವಾಗಿ ಪೂರಕ ಬೇಡಿಕೆ ಬರುತ್ತದೆಂದು ಹೇಳಿದರು. ಆದರೆ ಮೊದಲನೆಯ ವರ್ಷದಲ್ಲೇ ಪೂರಕ ಬೇಡಿಕೆಗಳನ್ನು ತಂದಿರತಕ್ಕಂಥಾದ್ದು ಸರ್ಕಾರದ ವಿಷನ್ ಅಥವಾ ಸರ್ಕಾರದ ಲೆಕ್ಕಾಚಾರದಲ್ಲಿ ಮೂಲಭೂತವಾದಂಥ ತಪ್ಪು ಇರುವುದರಿಂದ ಇಂಥ ಬೇಡಿಕೆಗಳು ಬರಬೇಕಾಗುತ್ತದೆ ಎನ್ನುವ ಅಭಿಪ್ರಾಯ ಬರತಕ್ಕಂಥ ರೀತಿಯಲ್ಲಿ ತಮ್ಮ ಅನಿಸಿಕೆಗಳನ್ನು ಸದನದ ಮುಂದೆ ಇಟ್ಟರು. 1962ನೇ ಇಸವಿಯಲ್ಲಿ ಈ ಸದನಕ್ಕೆ ಮೊದಲನೇ ಸಾರಿ ನಾನು ಸದಸ್ಯನಾಗಿ ಬಂದಾಗ ನಮ್ಮ ಆಗಿನ ನಾಯಕರು ಹೊಸ ಸದಸ್ಯರುಗಳಿಗೆ ಪೂರಕ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಡುತ್ತಿದ್ದರು. ಏಕೆಂದರೆ, ಇದು ತರಬೇತಿಗೆ ಒಂದು ಫಲವತ್ತಾದಂಥ ವಿಚಾರ. ಆದರೆ ಇಲ್ಲಿ ಮಾನ್ಯ ನಾಯಕರುಗಳೆಲ್ಲರೂ ಕೂಡ ಮಾತನಾಡಿದ್ದಾರೆ. ಏಕೆಂದರೆ, ಮೂಲಭೂತವಾದಂಥ ಕೊರತೆ ಇದ್ದುದರಿಂದ ಅವರು ಇದರ ಬಗ್ಗೆ ಚರ್ಚೆ ಮಾಡಿದರು. 1998-99ನೇ ಇಸವಿಯಲ್ಲಿ ಅಸ್ತಿತ್ವದಲ್ಲಿದ್ದಂಥ ಸರ್ಕಾರ ಮೂರು ಬಾರಿ ಪೂರಕ ಬೇಡಿಕೆಗಳನ್ನು ತೆಗೆದುಕೊಂಡು ಸದನದ ಮುಂದೆ ಬಂತು. ಒಂದು ಸಾರಿ 204 ಕೋಟಿ ರೂಪಾಯಿಗಳು, ಇನ್ನೊಂದು ಸಾರಿ 446 ಕೋಟಿ ರೂಪಾಯಿಗಳು ಮತ್ತೊಂದು ಸಾರಿ 813 ಕೋಟಿ ರೂಪಾಯಿಗಳು. ಇವತ್ತಿನ ಕೊರತೆಗಳು ಅವತ್ತೂ ಇದ್ದವು ಎನ್ನುವುದನ್ನು ಈ ಅಂಕಿಸಂಖ್ಯೆಗಳೇ ವ್ಯಕ್ತಮಾಡುತ್ತವೆ ಎಂದು ನಾನು ಭಾವನೆ ಮಾಡುತ್ತೇನೆ. ಆದ್ದರಿಂದ ವಿಪರೀತವಾದಂಥ ವಿತಂಡವಾದ ಎಂದು ಏನಾದರೂ ಇದ್ದರೆ, ಅದು ಇವತ್ತು ಕೆಲವು ಮಾನ್ಯ ಸದಸ್ಯರು ಮಾಡಿದಂಥ ಭಾಷಣಗಳಿಂದ ವ್ಯಕ್ತವಾಗುತ್ತದೆ. ಅವತ್ತು ಅಸ್ತಿತ್ವದಲ್ಲಿದ್ದಂಥ ಸರ್ಕಾರದವರು ನಾಲ್ಕು ವರ್ಷಗಳಾದ ಮೇಲೂ ಕೂಡ ಅದನ್ನು ಸರಿಪಡಿಸಲು ಆಗಿರಲಿಲ್ಲ. ಈಗ ನಮಗೆ ಚೊಚ್ಚಲು ವರ್ಷ, ನಾವು ಬಂದು ಇನ್ನೂ ಒಂದು ವರ್ಷವಾಗಿಲ್ಲ, ಏನೋ ತಪ್ಪು ಮಾಡಿಬಿಟ್ಟಿದ್ದೇವೆ, ಅದಕ್ಕಾಗಿ 600 ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಗ್ರ್ಯಾಂಟ್‌ಗೆ ನಿಮ್ಮ ಮುಂದೆ ಬಂದಿದ್ದೇವೆ. ನಾಲ್ಕು ವರ್ಷಗಳ ಅನುಭವದ ಹಿನ್ನೆಲೆಯಲ್ಲಿ 800 ಕೋಟಿ,

400 ಕೋಟಿ ಮತ್ತು 200ಕೋಟಿ ರೂಪಾಯಿಗಳ ಪೂರಕ ಬೇಡಿಕೆಗಳು ಏಕೆ ಬರಬೇಕಾಗಿತ್ತು? ಯಾವ ಸರ್ಕಾರವೂ ಕೂಡ ಅವಶ್ಯಕತೆ ಇಲ್ಲದೇ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ಗೆ ಸದನದ ಮುಂದೆ ಬರುವುದಿಲ್ಲ. ಆದ್ದರಿಂದ ಅವಶ್ಯಕತೆಗಳನ್ನು ಗಮನಿಸಿ ನಾವು ಸದನದ ಮುಂದೆ ಬಂದಿದ್ದೇವೆ ಎನ್ನುವುದಕ್ಕೆ ಸೀಮಿತವಾಗಿ ಈ ಅಂಶವನ್ನು ಹೇಳುತ್ತಿದ್ದೇನೆ. ಬಹಳ ವಿಚಾರಗಳು ಬಂದವು. ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್, ಫಿಸಿಕಲ್ ಡಿಸಿಪ್ಲಿನ್, ಎಸ್.ಸಿ. ಎಸ್.ಟಿ. ಡೆವೆಲಪ್‌ಮೆಂಟ್ ಇವುಗಳ ಬಗ್ಗೆ ಹೇಳಿದರು. ನೀವು ಮಂತ್ರಿಮಂಡಲವನ್ನು ರೀ-ಷಫಲ್ ಮಾಡುತ್ತೀರಿ ಎಂದು ಮಂತ್ರಿಗಳೆಲ್ಲಾ ಅಧೀರರಾಗಿದ್ದಾರೆ, ಅಧಿಕಾರಿಗಳ್ಯಾರೂ ಮಂತ್ರಿಗಳ ಮಾತು ಕೇಳುತ್ತಿಲ್ಲ, ಹಾಗೆಲ್ಲಾ ನೀವು ತಪ್ಪು, ತಪ್ಪು ಮಾತನಾಡಬೇಡಿ ಎಂದು ಬುದ್ಧಿವಾದ ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡಿರುತ್ತೇನೆ. ಕೆಲವೊಂದು ಸಾರಿ ಪೇಪರ್‌ಗಳಲ್ಲಿ ವೈಪರೀತ್ಯಗಳಿಂದ ಕೂಡಿದಂಥ ವರದಿಗಳು ಬರುತ್ತವೆ. ಅದನ್ನೇ ನಾವು ಆಧಾರವಾಗಿ ಇಟ್ಟುಕೊಂಡು ಒಂದು ನಿಲುವು ತೆಗೆದುಕೊಳ್ಳತಕ್ಕಂಥಾದ್ದು ಸರಿಯಲ್ಲ. ಅಧಿಕೃತವಾಗಿ ಯಾರು ಏನು ಹೇಳಿದರೂ ಕೂಡ ಅದನ್ನು ನಾವು ಪರಿಶೀಲನೆ ಮಾಡಿ ನೋಡಬೇಕು. ಇನ್ನು ಮೊಬಲೈಸೇಷನ್ ಆಫ್ ರಿಸೋರ್ಸಸ್. 1998-99ರಲ್ಲಿ ಅಸ್ತಿತ್ವದಲ್ಲಿದ್ದಂಥ ಸರ್ಕಾರಕ್ಕೆ ಯಾವ ಗ್ರಹಣವೂ ಬಡಿದಿರಲಿಲ್ಲ. ನಮಗೆ ಕಳೆದ ಮೂರು ತಿಂಗಳು ಗ್ರಹಣ ಬಡಿದಿತ್ತು. ಅಂಥ ಗ್ರಹಣದಿಂದ ಅವರು ವಿಮುಕ್ತರಾಗಿದ್ದರು. ಆದರೂ ಆಗ ಅವರು ಮಾಡಿದಂಥ ಮೊಬಲೈಸೇಷನ್ ಆಫ್ ರಿಸೋರ್ಸಸ್ ಎಷ್ಟೆಂದರೆ ಶೇ. 41ರಷ್ಟು. 1999-2000ರಲ್ಲಿ ಶೇ. 49ರಷ್ಟು. ನಮಗೆ ಗ್ರಹಣ ಬಡಿದ ಆ ಮೂರು ತಿಂಗಳನ್ನೂ ಸೇರಿಸಿಕೊಂಡು ನಾವು ಮಾಡಿರುವ ಮೊಬಲೈಸೇಷನ್ ಆಫ್ ರಿಸೋರ್ಸ್ ಶೇ. 52ರಷ್ಟು. ಶೇ. 52ರಷ್ಟು, ಶೇ. 41ಕ್ಕಿಂತ ಶೇ. 10ರಷ್ಟು ಜಾಸ್ತಿ ಎಂದು ನನಗೆ ಗೊತ್ತಿದೆ. ಆದ್ದರಿಂದ ವಿಚಾರಗಳನ್ನು ವಿಮರ್ಶೆ ಮಾಡತಕ್ಕಂಥ ಕಾಲದಲ್ಲಿ ಕೊಂಚ ನಿರ್ವಿಕಾರ ಮನೋಭಾವ ಇದ್ದರೆ ಅಂಥ ಚರ್ಚೆಗೆ ಗಂಭೀರತೆ ಬರುತ್ತದೆ ಮತ್ತು ಅಂಥ ಚರ್ಚೆ ಹೆಚ್ಚು ಮೊಬಲೇಸೇಷನ್ ಆಫ್ ರಿಸೋರ್ಸಸ್ ವಿಚಾರವನ್ನು ಇಲ್ಲಿ ಹೇಳುತ್ತಿದ್ದೇನೆ. ಇನ್ನು ಆಶ್ರಯ ಮನೆಗಳು ವಿಚಾರವನ್ನು ಕೇಳಿದರು. ನಮ್ಮ ಹೌಸಿಂಗ್ ಮಿನಿಸ್ಟರ್ ಮಾನ್ಯ ಸದಸ್ಯರುಗಳಿಗೆ, ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡಿಕೊಡಿ ಎಂದು ಎಷ್ಟು ಸಾರಿ ಕಾಗದ ಬರೆದಿದ್ದಾರೆ. ನಿಮಗೆ ಏನು ತೊಂದರೆಯಾಗಿದೆ? ನೀವು ಗ್ರಾಮಸಭೆಗಳನ್ನು ಮಾಡಿ ಫಲಾನುಭವಿಗಳ ಪಟ್ಟಿಯನ್ನು ಕೊಡದೇ ಹೋದರೆ ನಾವು ಯಾರಿಗೋಸ್ಕರ ಎಂದು ಮನೆಗಳನ್ನು ಕಟ್ಟಿಸೋಣ? ಇದು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ನಾನು ನೇರವಾಗಿ ಹಾಕುತ್ತಿರತಕ್ಕಂಥ ಪ್ರಶ್ನೆ. ಇಂದಿರಾಗಾಂಧಿ ಮತ್ತು ಅಂಬೇಡ್ಕರ್ ಯೋಜನೆ ಇವೆರಡನ್ನು ಬಿಟ್ಟು ನಾವು ಒಂದು ಲಕ್ಷ 70 ಸಾವಿರ ಮನೆಗಳನ್ನು ಕಟ್ಟಬೇಕು ಎಂದು ಪ್ಲಾನ್ ಮಾಡಿ ಈಗಾಗಲೇ 63 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಕಳೆದ 50 ವರ್ಷಗಳಲ್ಲಿ, ಮೊದಲನೇ ಆರು ತಿಂಗಳಲ್ಲಿ ಯಾವ ಸರ್ಕಾರವೂ 63 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರಲಿಲ್ಲ

ಎನ್ನುವುದನ್ನು ಒತ್ತಿ ಹೇಳುತ್ತಿದ್ದೇನೆ. ಆದರೆ, ಫಲಾನುಭವಿಗಳ ಪಟ್ಟಿ ಇಲ್ಲದೇ ನಾವು ನಿರ್ವೀರ್ಯರಾಗಿದ್ದೇವೆ. ಉದಾಹರಣೆಗೆ, ಮಾನ್ಯ ಸೋಮಶೇಖರ್‌ರವರು ಫಲಾನುಭವಿಗಳ ಪಟ್ಟಿಯನ್ನು ಕೊಡಲಿಲ್ಲ. ಅವರಿಗೆ ಏನು ತೊಂದರೆ ಇದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅವರು ಕೊಡದಿದ್ದರೆ ನಾವು ಮಳವಳ್ಳಿ ಕ್ಷೇತ್ರದಲ್ಲಿ ಮನೆಗಳನ್ನು ಕಟ್ಟಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗಾಗಿ ತಮ್ಮ ಹೆಸರನ್ನು ತೆಗೆದುಕೊಂಡೆ, ಉದ್ದೇಶಪೂರ್ವಕವಾಗಿ ತೆಗೆದುಕೊಳ್ಳಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ಕುರವನಹಳ್ಳಿ ನನ್ನ ಕ್ಷೇತ್ರದಲ್ಲಿ ನಾಲ್ಕು ದಿವಸಗಳ ಹಿಂದೆ ಆಶ್ರಯ ಸಮಿತಿ ಆಗಿದೆ. ಹೀಗಿರುವಾಗ ನಾವು ಹೇಗೆ ಪಟ್ಟಿಕೊಡುವುದು? ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ :— ನಾನು ಈಗಾಗಲೇ ಆಶ್ರಯ ಸಮಿತಿಯ ಮೀಟಿಂಗ್ ಮಾಡಿದ್ದು, ಅಪ್ರೂವಲ್ ಆಗಿ, ಈಗಾಗಲೇ ದುಡ್ಡು ಕೂಡ ರಿಲೀಸ್ ಆಗಿದೆ. ತಮಗೆ ಯಾರೋ ತಪ್ಪು ಮಾಹಿತಿ ಕೊಟ್ಟಿರಬೇಕು. ಟೌನ್‌ಗೆ ಸಂಬಂಧಪಟ್ಟಂತೆ ಸ್ವಲ್ಪ ಸಮಯ ಕೊಡಬೇಕು ಎಂದು ಕೇಳಿದ್ದೇನೆ. ತಾಲ್ಲೂಕಿನಾದ್ಯಂತ ಕೊಟ್ಟು ಆಗಿದೆ. ನಾನು ಒಬ್ಬನೇ ಕೊಟ್ಟಿಲ್ಲವೇನೋ ಎನ್ನುವ ರೀತಿ ತಾವು ಹೇಳಿದಿರಿ.

ಶ್ರೀ ಎಸ್.ಎಂ. ಕೃಷ್ಣ :— ನನ್ನ ಗಮನಕ್ಕೆ ಬಂದ ಒಂದು ಉದಾಹರಣೆ ಹೇಳಿದೆ ಅಷ್ಟೇ. ನಾನು ಆಗಿಂದಾಗ್ಗೆ ಮಂತ್ರಿಗಳ ಜೊತೆ ವಿಚಾರ ವಿನಿಮಯ ಮಾಡುತ್ತೇನೆ. ಆ ಸಂದರ್ಭದಲ್ಲಿ ಇದು ತಿಳಿದು ಬಂತು. ನೀವು ಅರ್ಬನ್ ಆಶ್ರಯಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಪಟ್ಟಿಯನ್ನು ಕೊಟ್ಟಿಲ್ಲ, ರೂರಲ್‌ದು ಕೊಟ್ಟಿದ್ದೀರಿ.

ಶ್ರೀ ಬಿ. ಸೋಮಶೇಖರ್ :— ನಮ್ಮ ತಾಲ್ಲೂಕಿನ ಅಧಿಕಾರಿಗಳನ್ನು ಎಂಟೆಂಟು ದಿನಗಳಿಗೆ ವರ್ಗಾವಣೆ ಮಾಡದಿದ್ದರೆ ತಾವು ಕೊಡುವ ಟಾರ್ಗೆಟ್ ಪ್ರಕಾರ ಮಾಡುತ್ತೇವೆ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಎಂಟೆಂಟು ದಿನಗಳಿಗೆ ಒಬ್ಬೊಬ್ಬರನ್ನು ಅಲ್ಲಿಗೆ ಹಾಕುವುದು, ಮತ್ತೆ ಬದಲಾವಣೆ ಮಾಡುವುದು, ಮಂತ್ರಿಗಳು ಕೊಟ್ಟಂಥ ಅಧಿಕಾರಿಗಳನ್ನು ತಾವು ಬದಲಾವಣೆ ಮಾಡುವುದು ಆಗುತ್ತಿದೆ. ನನ್ನ ತಾಲ್ಲೂಕಿನಲ್ಲಿ ಎಂಟು ದಿನ ಕೆಲಸ ಮಾಡಿದವರನ್ನು ತಾವೇ ತಮ್ಮ ತಾಲ್ಲೂಕಿಗೆ ಹಾಕಿಕೊಂಡಿದ್ದೀರಿ. ಇದು ಎಷ್ಟು ಮುತ್ಸದ್ಧಿತನವನ್ನು ತೋರಿಸುತ್ತದೆ ಎಂದರೆ, ಒಳ್ಳೆಯ ಅಧಿಕಾರಿ ಎಂದು ನಾನು ನನ್ನ ತಾಲ್ಲೂಕಿಗೆ ಹಾಕಿಕೊಂಡರೆ ಅವರನ್ನು ತಕ್ಷಣ ತಮ್ಮ ತಾಲ್ಲೂಕಿಗೆ ಹಾಕಿಕೊಂಡಿದ್ದೀರಿ. ತಾವು ಯಾರ ಕಡೆಯಿಂದಾದರೂ ಕೆಲಸ ಮಾಡಿಸಿಕೊಳ್ಳಬಹುದು. ಆದರೆ, I am a poor M.L.A., I have to depend of efficient Officer. ಎಫಿಷಿಯೆಂಟ್ ಆಫೀಸರ್ ಅನ್ನು ತಾವು ಹಾಕಿಕೊಂಡು ನನ್ನ ಕೆಲಸಕ್ಕೆ ಬೇರೆಯವರನ್ನು ಹಾಕಿಬಿಟ್ಟರೆ ನಮ್ಮ ಗತಿ ಏನಾಗಬೇಕು ಹೇಳಿ.

ಶ್ರೀ ಎಸ್.ಎಂ. ಕೃಷ್ಣ:— ನಾನು ಈ ಸದನದ ಸಮಯವನ್ನು ಉಪಯೋಗಿಸಿಕೊಂಡು ಮಾನ್ಯ ಸದಸ್ಯರುಗಳಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಈ ತಿಂಗಳ 30ನೇ ತಾರೀಖಿನೊಳಗೆ ಆಶ್ರಯ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಚಾನೆಲ್‌ಗಳ ಮೂಲಕ ಸರ್ಕಾರಕ್ಕೆ ಕಳುಹಿಸಿ. ಇಲ್ಲದೇ ಹೋದರೆ ನಾವು ವಿಧಿಯಿಲ್ಲದೇ ಅನಿವಾರ್ಯವಾಗಿ ಜಿಲ್ಲಾಧಿಕಾರಿಗಳಿಗೆ ಹೇಳಿ ಫಲಾನುಭವಿಗಳ ಪಟ್ಟಿಯನ್ನು ತರಿಸಿ ಫೈನಲೈಸ್ ಮಾಡಬೇಕಾಗುತ್ತದೆ. ಇಂಥ ಪರಿಸ್ಥಿತಿಗೆ ನಮ್ಮನ್ನು ತಳ್ಳಬೇಡಿ ಎಂದು ಮಾನ್ಯ ಸದಸ್ಯರೆಲ್ಲರಿಗೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ನಮ್ಮಲ್ಲಿ ಆಶ್ರಯ ಸಮಿತಿ ಆಗಿದ್ದು ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ನಮಗೆ ಸಮಯಾವಕಾಶ ಇರಲಿಲ್ಲ. ಏಕೆಂದರೆ ನಾವು ದಿನನಿತ್ಯ ಸದನದಲ್ಲಿ ಇರುತ್ತಿದ್ದೆವು. 23ನೇ ತಾರೀಖಿಗೆ ಸಭೆಯನ್ನು ಇಟ್ಟಿದ್ದೇವೆ. ಒಂದು ಕ್ಲಾರಿಫಿಕೇಷನ್ ಬೇಕಾಗಿತ್ತು. ಹಿಂದಿನ ಸರ್ಕಾರವಿದ್ದಾಗ ಕೊಟ್ಟ ಪಟ್ಟಿಯನ್ನು ಈ

4.30 ಪಿ.ಎಂ.

ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದೇ? ಇಲ್ಲದಿದ್ದರೆ ಅವರ ಹೆಸರು ಈ ಪಟ್ಟಿಯಲ್ಲಿ ಬರುವುದಿಲ್ಲ. ಅವರಿಗೆ ಹಾರ್ಟ್‌ಬರ್ನ್ ಆಗಬಾರದೆಂದು ಹೇಳುತ್ತಿದ್ದೇನೆ. ಆ ಪಟ್ಟಿ ಹಿಂದೆ ಅಪ್ರೂವಲ್ ಆಗಿತ್ತು. ಕೊನೆಯಪಕ್ಷ ಬೇರೆ ಪ್ರತ್ಯೇಕ ಹಣ ಬಿಡುಗಡೆ ಮಾಡಲಿಕ್ಕೆ ಆಗದಿದ್ದರೆ ಇದರಲ್ಲಿಯೇ ಅವರಿಗೆ ಅಡ್ಜಸ್ಟ್ ಮಾಡುವುದಕ್ಕೆ ಸಾಧ್ಯವಿದೆಯೇ? ಎಂದು ಕೇಳುತ್ತಿದ್ದೇನೆ.

ಶ್ರೀ ರೇವುನಾಯಕ್ ಬೆಳಮಗಿ :— ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಆಶ್ರಯ ಕಮಿಟಿ ಸದಸ್ಯರನ್ನು ನೇಮಕ ಮಾಡಿ ಕಳುಹಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ವಿಶಾಲ ಮನಸ್ಸಿನಿಂದ ಪ್ರತಿಯೊಬ್ಬ ಸದಸ್ಯರು ಸಹ ಪಟ್ಟಿಯನ್ನು ಕಳುಹಿಸಿಕೊಡಬೇಕೆಂದು ಹೇಳಿದರು. ಆದರೆ ನಮ್ಮ ಕ್ಷೇತ್ರದಲ್ಲಿ ಆಶ್ರಯ ಕಮಿಟಿ ಸದಸ್ಯರು ಗ್ರಾಮಸಭೆ ಮಾಡುವುದು ಬೇಡ ಎಂದು ಹೇಳುತ್ತಾರೆ. ಅವರು ಕೊಟ್ಟ ಪಟ್ಟಿಯ ಪ್ರಕಾರವೇ ಆಶ್ರಯ ಮನೆಗಳನ್ನು ಹಂಚಬೇಕೆಂದು ಹೇಳುತ್ತಾರೆ. ಶೇಕಡಾವಾರು ಪ್ರಕಾರ ಅಂಗವಿಕಲರಿಗೆ, ವಿಧವೆಯರಿಗೆ, ಎಸ್‌ಸಿ : ಎಸ್‌ಟಿಗಳಿಗೆ ಇಂತಿಷ್ಟು ಮನೆಗಳನ್ನು ಕೊಡಬೇಕೆಂದು ಅಧಿಕಾರಿಗಳು ಹೇಳುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ನಮ್ಮ ಗ್ರಾಮಸಭೆಯಿಂದ ನಿಯಮಾನುಸಾರ ಒಂದು ಪಟ್ಟಿ ಮಾಡಿ ಕಳುಹಿಸುತ್ತೇವೆ. ಸರ್ಕಾರ ಸುಪ್ರೀಂ. ಏನಾದರೂ ತಪ್ಪು ಆಗಿದ್ದರೆ ಅದನ್ನು ಸರಿಪಡಿಸಬೇಕು. ನಾನು ನಿಯಮಾನುಸಾರ ಅಂಗವಿಕಲರಿಗೆ, ವಿಧವೆಯರಿಗೆ, ಎಸ್‌ಸಿ : ಎಸ್‌ಟಿಗಳಿಗೆ ಇಂತಿಷ್ಟು ಎಂದು ಪಟ್ಟಿ ಮಾಡಿ ಸರ್ಕಾರಕ್ಕೆ ಕೊಟ್ಟಿದ್ದೇವೆ. ಆಶ್ರಯ ಕಮಿಟಿಯ ಕೆಲವರು ಗ್ರಾಮಸಭೆಯಲ್ಲಿ ಮಾಡಿದ ಪಟ್ಟಿ ಸರಿಯಿಲ್ಲ, ನಾವು ಕೊಟ್ಟ ಪಟ್ಟಿಯೇ ಆಗಬೇಕೆಂದು ಹೇಳಿ ಅವರು ಕೋರ್ಟಿಗೆ ಹೋಗಿದ್ದಾರೆ. ಹೀಗಾದರೆ ನಾವು

ಹೇಗೆ ಕೆಲಸ ಮಾಡುವುದು? ನಿಯಮಾನುಸಾರ ಪಟ್ಟಿ ಮಾಡಿ ಸರ್ಕಾರಕ್ಕೆ ಕಳುಹಿಸುವುದು ಆ ಆಶ್ರಯ ಸಮಿತಿಯ ಸದಸ್ಯರಿಗೆ ಬೇಕಾಗಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ಇಂಥ ತೊಂದರೆಗಳನ್ನು ಪರಿಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಮಾತುಗಳಲ್ಲಿ ವಾಸ್ತವಿಕತೆ ಏನು ಇದೆ ಎನ್ನುವುದನ್ನು ಅಸಿಸ್ಟೆಂಟ್ ಕಮಿಷನರ್ ಅವರ ಮೂಲಕ ನಾನು ಪರಿಶೀಲನೆ ಮಾಡುತ್ತೇನೆ. ಆದರೆ ಈಗ ಕೋರ್ಟ್‌ಗೆ ಹೋಗತಕ್ಕಂಥ ಯಾರನ್ನೂ ಸಹ ನಾವು ಬಂಧಿಸುವುದಕ್ಕೆ ಆಗುವುದಿಲ್ಲ. ಕೋರ್ಟಿಗೆ ಹೋಗಲಿಕ್ಕೆ ಸಾಮಾನ್ಯವಾಗಿ ಎಲ್ಲರೂ ತುದಿಗಾಲಿನಲ್ಲಿ ನಿಂತಿದ್ದಾರೆ. ನ್ಯಾಯ ಸಿಗತಕ್ಕಂಥ ಒಂದು ಸ್ಥಳ ಇದ್ದರೆ ಅದು ಕೋರ್ಟ್ ಎಂದು ಈಗ ಎಲ್ಲರೂ ಒಂದು ರೀತಿಯಲ್ಲಿ ಕೋರ್ಟ್‌ಗೆ ಹೋಗುತ್ತಾರೆ. ಆದರೆ ನಿಮ್ಮ ಈ ಆಶ್ರಯ ಮನೆಗಳನ್ನು ಹಂಚುವ ಸಲುವಾಗಿ ಮಾಡಿದ ಪಟ್ಟಿಯ ವಿಚಾರದಲ್ಲಿ: ಏಕೆ ಕೋರ್ಟಿಗೆ ಹೋಗಿದ್ದಾರೆನ್ನುವುದನ್ನು ವಿಚಾರಿಸುತ್ತೇನೆ. ಆದರೆ ಗ್ರಾಮಸಭೆಗಳ ಮೂಲಕವೇ ಫಲಾನುಭವಿಗಳನ್ನು ಗುರುತಿಸಬೇಕು ಎಂದು ಸರ್ಕಾರದಿಂದ ನಾವು ಹಾಕಿಕೊಂಡಿರತಕ್ಕ ನೀತಿಯಾಗಿರುತ್ತದೆ. ಆ ನೀತಿ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ ಹಾಗೆಯೇ ನಿಮ್ಮ ಕಮಲಾಪುರ ಕ್ಷೇತ್ರಕ್ಕೂ ಅನ್ವಯಿಸುತ್ತದೆಂದು ನಾನು ಸ್ಪಷ್ಟಪಡಿಸಲಿಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಈ ಗ್ರಾಮಸಭೆಗಳಲ್ಲಿ ನಾನಾ ತರಹದ ಗ್ರಾಮಸಭೆಗಳು ಆಗುತ್ತವೆ. ನಮ್ಮ ಊರು, ನಾನು ಹುಟ್ಟಿದ ಊರು ಬೆಳೆದ ಊರಿನಿಂದ ಒಂದು ಲಿಸ್ಟ್ ಬಂತು. ಆ ಲಿಸ್ಟಿನಲ್ಲಿ 25 ರಿಂದ 30 ಜನರ ಹೆಸರನ್ನು ಕೊಟ್ಟಿದ್ದರು, ಅದನ್ನು ನಾನು ಓದಿದೆ. ಆ ಲಿಸ್ಟಿನಲ್ಲಿ ಸರ್ಕಾರದ ಡೈರೆಕ್ಷನ್ ಪ್ರಕಾರ ಬಡವರು, ಅಸಹಾಯಕರು, ನಿರ್ಗತಿಕರು, ವಿಧವೆಯರು, ಅಂಗವಿಕಲರು ಹೀಗೆ ಇಂಥವರ ಹೆಸರು ಇರಬೇಕೆಂದು ಏನು ಇದೆ, ಆ ರೀತಿಯ ಬಡವರು ಯಾರೂ ಆ ಲಿಸ್ಟಿನಲ್ಲಿ ಇರಲಿಲ್ಲ. ಇಂಥ ಲಿಸ್ಟನ್ನು ಕೊಟ್ಟರೆ ನಾವು ಏನು ಮಾಡಬೇಕು ಹೇಳಿ. ಗ್ರಾಮಸಭೆಗಳಲ್ಲಿ ನಿಜವಾಗಿಯೂ ಸರ್ಕಾರದ ಉದ್ದೇಶವನ್ನು ಅಳವಡಿಸಿಕೊಂಡು ಚಿಂತನೆ ಮಾಡಿ ಅರ್ಹ ವ್ಯಕ್ತಿಗಳಿಗೆ ಮನೆಗಳನ್ನು ಕೊಡುವುದಕ್ಕೆ ಲಿಸ್ಟ್ ಮಾಡಿ ಕೊಟ್ಟರೆ 100ಕ್ಕೆ 100ರಷ್ಟು ಆ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆ ರೀತಿಯ ಹೆಸರು ಆ ಪಟ್ಟಿಯಲ್ಲಿ ಇರುವುದಿಲ್ಲವಲ್ಲಾ. ನಿಜವಾದ ಬಡವರನ್ನು ಗುರುತಿಸಿ ಪಟ್ಟಿ ಕಳುಹಿಸಬೇಕೆಂದು ಆ ಆಶ್ರಯ ಕಮಿಟಿಯವರು ಕೊಟ್ಟಿರುವ ಪಟ್ಟಿಯಲ್ಲಿನ ಹೆಸರುಗಳನ್ನೂ ಬಿಟ್ಟೇ ಮಾಡಬೇಕಾಗುತ್ತದೆ. ಆಗ ಅವರಿಂದ ನಾನಾ ವಿಧದಲ್ಲಿ ತಡೆಗಳು ಬರುತ್ತವೆ, ಕೆಲವು ಸಂದರ್ಭದಲ್ಲಿ ನಮಗೆ ಬಹಳ ಕಷ್ಟ ಆಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ಗ್ರಾಮಸಭೆಗಳ ಮೂಲಕ ಫಲಾನುಭವಿಗಳನ್ನು ಗುರುತಿಸಬೇಕೆನ್ನುವುದು ಒಂದು ಸಾಮಾನ್ಯ ನೀತಿಯಾಗಿದೆ. ಆ ಸಾಮಾನ್ಯ ನೀತಿಯ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಕೆಲವೊಂದು ಸಾರಿ ಇಂಥ ಅತಿರೇಕಗಳು ಆಗಬಹುದು. ಇಂಥ ಅತಿರೇಕಗಳು ಆಗಲಿಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳಲಿಕ್ಕೆ ತಯಾರಿಲ್ಲ. ಆದರೆ ಅದಕ್ಕೆ ಹೇಗೆ ಕರೆಕ್ಟೀವ್ಸ್ ತರಬೇಕೆನ್ನುವುದನ್ನು ನಾವು ಯೋಚನೆ ಮಾಡಬೇಕು.

ಶ್ರೀ ಚಂದ್ರಕಾಂತ ಬೆಲ್ಲದ್ ಗುರಪ್ಪ :— ಮಾನ್ಯ ಅಧ್ಯಕ್ಷರೆ, ನನ್ನ ಅನುಭವದ ಪ್ರಕಾರ ಹೇಳುವುದಾದರೆ ಆಶ್ರಯ ಯೋಜನೆಯಲ್ಲಿ ಇಲ್ಲಿಯವರೆಗೆ ನಿಜವಾದ ಫಲಾನುಭವಿಗಳಿಗೆ ಆಶ್ರಯ ಮನೆಗಳನ್ನು ಕೊಟ್ಟಿರುವುದಿಲ್ಲ. ಆಶ್ರಯ ಮನೆಗಳನ್ನು ಕೊಡಿಸುತ್ತೇವೆಂದು ಪಟ್ಟಿಯನ್ನು ತಯಾರು ಮಾಡುವುದಕ್ಕಾಗಿಯೇ ಕೆಲವು ಟೀಂ, ಗ್ರೂಪ್‌ಗಳು ಇವೆ. ಕೆಲವು ಕಡೆ ಯಾರ್ಯಾರೋ ಮನೆಗಳನ್ನು ಪಡೆದುಕೊಂಡಿದ್ದಾರೆ, ಅಲ್ಲಿ ನಿಜವಾಗಿ ಇರಬೇಕಾದವರು ಆ ಜಾಗದಲ್ಲಿ ಇಲ್ಲ. ಹಕ್ಕುಪತ್ರ ಇದ್ದಂಥವರು ಯಾರೂ ಆ ಮನೆಯೊಳಗೆ ಇಲ್ಲ. ಆಶ್ರಯ ಯೋಜನೆಯಲ್ಲಿ ಹಿಂದಿನಿಂದಲೂ ಈ ರೀತಿ ನಡೆದುಕೊಂಡು ಬಂದಂಥ ಅನೇಕ ಉದಾಹರಣೆಗಳು ಇವೆ. ಶ್ರೀ ನಾಯಕ್ ಬೆಳಮಗಿ ಅವರು ಹೇಳಿದ ಹಾಗೆ ಸರ್ಕಾರದಿಂದ ನೇಮಕವಾದ ಆಶ್ರಯ ಸಮಿತಿ ಸದಸ್ಯರು ಯಾರು ಇದ್ದಾರೆ, ಅವರು ಹೇಳಿದ ಪ್ರಕಾರವೇ ಆಗಬೇಕು. ಈ ಆಶ್ರಯ ಸಮಿತಿಯ ನಾಮಿನೇಟೆಡ್ ಮೆಂಬರ್ಸ್‌ನ ಕಲ್ಚರ್ ಇದೇ ರೀತಿ ಇದ್ದರೆ ಪ್ರಾಮಾಣಿಕವಾದಂಥ, ನ್ಯಾಯವಾದಂಥ ಫಲಾನುಭವಿಗಳನ್ನು ಗುರುತಿಸಿ ಅವರ ಪಟ್ಟಿ ಮಾಡಿ ಅವರಿಗೆ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ ಮತ್ತು ಈ ಯೋಜನೆಯ ಆಶ್ರಯ ಏನಿದೆ ಅದನ್ನು ನಿಜವಾದ ಬಡವರಿಗೆ ಮುಟ್ಟಿಸಲಿಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಯೋಚನೆ ಮಾಡುತ್ತಾರೆ ಎನ್ನುವುದನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ವೇಸ್ ಅಂಡ್ ಮೀನ್ಸ್ ಪೊಜಿಷನ್ ಹೇಗಿದೆ, ಎಷ್ಟು ಸಲ ಓವರ್ ಡ್ರಾಫ್ಟ್ ತೆಗೆದುಕೊಂಡಿದ್ದೀರಿ, ಎಷ್ಟು ಸಲ ವೇಸ್ ಅಂಡ್ ಮೀನ್ಸ್ ಅಡ್ವಾನ್ಸಸ್ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಸಿಂಧ್ಯಾ ಅವರು ಕೇಳಿದರು. ನಾವು ಇದುವರೆಗೂ ವೇಸ್ ಅಂಡ್ ಮೀನ್ಸ್ ಅಡ್ವಾನ್ಸಸ್‌ನ್ನು ತೆಗೆದುಕೊಂಡಿಲ್ಲ. ತೆಗೆದುಕೊಳ್ಳಬೇಕೆನ್ನುವ ಇರಾದೆ ಕೂಡ ಇಲ್ಲ. ಓವರ್ ಡ್ರಾಫ್ಟ್ ತೆಗೆದುಕೊಳ್ಳುವ ಬಗ್ಗೆ ನಾವು ಯೋಚನೆ ಕೂಡ ಮಾಡುವವರಲ್ಲ. ಇದು ಸಮಾಧಾನಕರವಾದಂಥ ಬೆಳವಣಿಗೆ ಎಂದು ನನ್ನ ಭಾವನೆಯಾಗಿದೆ. ಕಳೆದ ಮೂರು ವರ್ಷದಲ್ಲಿ ಓವರ್ ಡ್ರಾಫ್ಟ್‌ನ್ನು ತೆಗೆದುಕೊಂಡಿಲ್ಲ. ಆ ಒಂದು ಟ್ರಾಕ್ ರೆಕಾರ್ಡ್‌ನ್ನು ಮೇನ್‌ಟೈನ್ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾವು ಕೂಡ ಮಾಡುತ್ತಿದ್ದೇವೆ. ಇನ್ನು ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್

ಕಂಟ್ರೋಲ್ ಮಾಡುವುದಕ್ಕೆ ಏನು ಮಾಡುತ್ತಿದ್ದೀರಿ, ಬರೀ ಬಜೆಟ್ ಭಾಷಣ ಓದಿದಿರಿ, ನೀವು ಏನೂ ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿಲ್ಲ. ಎಂದು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಇದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಯೋಜನೇತರ ವೆಚ್ಚಕ್ಕೆ ಕಡಿವಾಣ ಹಾಕುವುದಕ್ಕೆ ಖಾಲಿ ಇರುವ ಹುದ್ದೆಗಳಲ್ಲಿ ಶೇಕಡ 80ರಷ್ಟನ್ನು ರದ್ದುಗೊಳಿಸುವುದು. ಇದು ಒಂದೇ ಸಾಕು. It becomes a permanent feature. ನಿಮ್ಮ ಹಿಂದಿನ ಸರ್ಕಾರ ಫ್ರೀಜ್ ಮಾಡಿದ್ದೇವೆಂದು ರೆಫ್ರಿಜರೇಟರ್‌ನಲ್ಲಿ ಇಟ್ಟಿದ್ದರು, ಅದೆಲ್ಲವನ್ನೂ ಒಂದೇ ಸಲಕ್ಕೆ ತೆಗೆದುಹಾಕಿಬಿಟ್ಟು ಅದನ್ನು ಈಗ ಕ್ಲೀನ್ ಸ್ಲೇಟ್ ಮಾಡಿಕೊಟ್ಟುಬಿಡುತ್ತೇವೆ. you had kept in freezed state of affairs. They have been totally eliminated. Then, regarding use of telephones. Various other thingds like restraining purchase /use of vehicles, except for Members of parliament. ಇನ್ನು ನಮ್ಮ ಸರ್ಕಾರ ಪಾರ್ಲಿಮೆಂಟ್ ಮೆಂಬರ್ಸ್‌ನ್ನು ವೈಭವೀಕರಣ ಮಾಡಲಿಕ್ಕೆ ಹೊರಟುಬಿಟ್ಟಿದ್ದೇವೆ, ಅವರಿಗೆ ಮಿನಿಸ್ಟರ್ ಸ್ಟೇಟಸ್ ಕೊಟ್ಟುಬಿಟ್ಟಿದ್ದೇವೆ ಎನ್ನುವ ಒಂದು ತಪ್ಪು ಕಲ್ಪನೆ ಕೆಲವು ಮಾನ್ಯ ಸದಸ್ಯರಲ್ಲಿ ಹುಟ್ಟಿದೆ. ನಾವು ಆ ರೀತಿಯ ಸ್ಟೇಟಸ್ ಅವರಿಗೆ ಕೊಟ್ಟಿಲ್ಲ. ನಾವು ಕೊಟ್ಟರೂ ಪಾರ್ಲಿಮೆಂಟ್ ಮೆಂಬರ್ಸ್ ಅದನ್ನು ಒಪ್ಪುವುದಿಲ್ಲ. ಏಕೆಂದರೆ ಅವರೆಲ್ಲ ಯೂನಿಯನ್ ಮಿನಿಸ್ಟರ್ ಆಗಬೇಕಾಗಿರುವಂಥವರು. ಆದ್ದರಿಂದ ನಾವು ಕೊಟ್ಟರೆ ಅವರು ಒಪ್ಪುತ್ತಾರೆನ್ನುವ ಗ್ಯಾರಂಟಿ ಇಲ್ಲ. ಆದರೆ ಕೆಲವೊಂದು ಸೌಲಭ್ಯಗಳನ್ನು ಶಾಸಕರಿಗೆ ಹೇಗೆ ನಾವು ಕೊಡುತ್ತಿದ್ದೇವೆ ಮತ್ತು ಅದನ್ನು ಮೇಲ್ದರ್ಜೆಗೇರಿಸಬೇಕೆಂದು ಏನು ಕಳಕಳಿ ಇದೆ, ಅದೇ ರೀತಿಯಾಗಿ ಸಂಸದ್ ಸದಸ್ಯರಿಗೆ ಜೆನ್ಯೂಇನ್ ಕಾರಣಕ್ಕೋಸ್ಕರ ಅಂದರೆ ಅವರು ಹೆಚ್ಚು ಕ್ಷೇತ್ರಗಳ ಜೊತೆಯಲ್ಲಿ ಸಂಪರ್ಕ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ರೀತಿ ಯೋಚಿಸಿದ್ದೇವೆ. ಪ್ರತಿಯೊಬ್ಬ ಪಾರ್ಲಿಮೆಂಟ್ ಸದಸ್ಯರೂ ಕೂಡ ಪ್ರತೀ ವರ್ಷ ಎರಡು ಕೋಟಿ ರೂಪಾಯಿಗಳನ್ನು ತನ್ನ ಕ್ಷೇತ್ರಗಳಿಗೆ ತಂದುಕೊಡುತ್ತಿದ್ದಾರೆ. ಆದ್ದರಿಂದ ಆ ಹಣ ಯಾವ ರೀತಿ ಖರ್ಚಾಗುತ್ತಿದೆ ಎನ್ನುವುದರ ಮೇಲೆ ಅವರು ಸೂಪರ್‌ವಿಜನ್ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಹಿಂದಿನಿಂದ ಇದ್ದಂಥ ಸೌಲಭ್ಯಗಳನ್ನು ಕೊಂಚಮಟ್ಟಿಗೆ ಅಪ್‌ಗ್ರೇಡ್ ಮಾಡಿದ್ದೇವೆ. ಏಕೆ ಅಪ್‌ಗ್ರೇಡ್ ಮಾಡಿದ್ದೇವೆಂದರೆ ಹಿಂದೆ ನಿಮ್ಮ ಸರ್ಕಾರ ಇದ್ದಾಗ ಅವರಿಗೆ ಅಂಬಾಸಿಡರ್ ಕಾರ್ ಕೊಟ್ಟಿದ್ದರು. ಈಗ 6 ಲಕ್ಷ ರೂಪಾಯಿಯೊಳಗೆ ನೀವು ಯಾವ ಕಾರನ್ನು ಬೇಕಾದರೂ ತೆಗೆದುಕೊಳ್ಳಬಹುದೆಂದು ಎಂ.ಪಿ.ಗಳಿಗೆ ನಾವು ಹೇಳಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ಎಂ.ಪಿ.ಗಳಿಗೆ ಅಂಬಾಸಿಡರ್ ಕಾರನ್ನು ಶ್ರೀ ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಕೊಟ್ಟಿರುವಂಥದ್ದು. ಅಂದರೆ ನಮ್ಮ ಸರ್ಕಾರ ಇದ್ದಾಗ ಕೊಟ್ಟಿರುವಂಥದ್ದು ಅಲ್ಲ ಇದು ಹಿಂದೆ ಎಂದರೆ ನಿಮ್ಮ ಸರ್ಕಾರ ಆಡಳಿತದಲ್ಲಿ ಇದ್ದಾಗ ಕೊಟ್ಟಿರುವಂಥದ್ದು.

ಶ್ರೀ ಎಸ್.ಎಂ. ಕೃಷ್ಣ:— ನನ್ನ ಕಡೆಯಿಂದ ತಪ್ಪಾಯಿತು. ಎಲ್ಲಿ ಕ್ರೆಡಿಟ್ ಕೊಡಬಾರದೋ ಅಲ್ಲಿ ಕೊಟ್ಟುಬಿಟ್ಟಿದ್ದಕ್ಕೆ ಅದನ್ನು ನಾನು ವಾಪಾಸ್ಸು ತೆಗೆದುಕೊಳ್ಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:— ತಮ್ಮ ಕಾಲದಲ್ಲಿಯೇ ಕೊಟ್ಟಿದ್ದು, ನಮ್ಮ ಕಾಲದಲ್ಲಿ ಅಲ್ಲ ಎಂದು ನಾನು ಅದನ್ನೇ ಹೇಳಿರುವುದು. ಇನ್ನು ನನ್ನ ವೈಯಕ್ತಿಕ ಅಭಿಪ್ರಾಯ ಹಾಗೂ ಅನೇಕ ಮಾನ್ಯ ಸದಸ್ಯರುಗಳ ಅಭಿಪ್ರಾಯ ಏನೆಂದರೆ ಎಂ.ಪಿ.ಗಳಿಗೆ ಕೇಂದ್ರ ಸರ್ಕಾರದಿಂದ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಕೊಡುತ್ತಿರುವುದರಿಂದ ಪುನಃ ರಾಜ್ಯಸರ್ಕಾರದಿಂದ ಅವರಿಗೆ ಸೌಲಭ್ಯಗಳನ್ನು ಕೊಡುವ ಅವಶ್ಯಕತೆ ಇದೆಯೇ? ಏಕೆಂದರೆ ಇದು ಡಬಲ್ ಬೆನಿಫಿಟ್ ಸ್ಕೀಂ ಆಗಬಾರದು. ನಮ್ಮ ರಾಜ್ಯದಲ್ಲಿ ಶಾಸಕರುಗಳಿಗೆ ಸೌಲಭ್ಯವನ್ನು ಕೊಡುವ ವಿಚಾರದಲ್ಲಿ ಸದನದಲ್ಲಿ ಚರ್ಚೆ ಆಗಿದೆ. ನಮಗೆ ಸ್ಟಾಫ್‌ನ್ನು ಕಂಟ್ರಾಕ್ಟ್ ಬೇಸಿಸ್ ಮೇಲೆ ರಿಕ್ರೂಟ್ ಮಾಡಲಿಕ್ಕೆ ಅವಕಾಶ ಕೊಟ್ಟಿರಲಿಲ್ಲ. ನಮ್ಮ ಕ್ಷೇತ್ರದಲ್ಲಿ ನಮ್ಮ ಜೊತೆಗೆ ಡೆಪ್ಯುಟೇಷನ್ ಮೇಲೆ ಒಬ್ಬ ಸ್ಟಾಫ್‌ನ್ನು ಮಾತ್ರ ಕೊಟ್ಟಿದ್ದೀರಿ. ಆದರೆ ಎಂ.ಪಿ.ಗಳಿಗೆ ಡ್ರೈವರ್, ಡಿ-ಗ್ರೂಪ್ ನೌಕರರನ್ನು, ಗನ್‌ಮ್ಯಾನ್ ಹೀಗೆ ಎಲ್ಲವನ್ನೂ ರಾಜ್ಯದಿಂದ ಕೊಟ್ಟರೆ ಸರ್ಕಾರದ ಮೇಲೆ ಈ ಹೊರೆ ಎಷ್ಟಾಗುತ್ತದೆಂದು ಎಲ್ಲರೂ ಊಹಿಸಬಹುದು. ಈಗ ನಾವು ಒಂದು ಕಡೆಯಲ್ಲಿ ಯೋಜನೇತರ ವೆಚ್ಚಕ್ಕೆ ಕಡಿವಾಣ ಹಾಕುತ್ತೇವೆಂದು ಹೇಳುವಂಥದ್ದು, ಇನ್ನೊಂದು ಕಡೆಯಲ್ಲಿ ಈ ರೀತಿಯಲ್ಲಿ ಯೋಜನೇತರ ವೆಚ್ಚವನ್ನು ಜಾಸ್ತಿ ಮಾಡುವಂಥ ದ್ವಂದ್ವ ನೀತಿ ಏಕೆ?

ಶ್ರೀ ಕೆ.ಹೆಚ್. ಹನುಮೇಗೌಡ:— ಮಾನ್ಯ ಅಧ್ಯಕ್ಷರೆ, ಪಾರ್ಲಿಮೆಂಟ್ ಸದಸ್ಯರ ಅವಾಂತರಗಳನ್ನು ಸಹ್ಯಕ್ಕೆ ತಡೆಯುವುದಕ್ಕಾಗುತ್ತಿಲ್ಲ. ನಾನು ಕಳೆದ 20-25 ವರ್ಷಗಳಿಂದಲೂ ಎಂ.ಎಲ್.ಎ.ಗಳನ್ನು ನೋಡಿದ್ದ, ನಾನೂ ಸಹ ಎಂ.ಎಲ್.ಎ. ಪಾರ್ಲಿಮೆಂಟ್ ಸದಸ್ಯರನ್ನೂ ನೋಡಿದೆ. ಆದರೆ, ಈಗಿನ ಅವಸ್ಥೆಯಲ್ಲಿ ನಾವು ಎಲ್ಲಿಯೂ ಇರುವಂತಿಲ್ಲ!

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಹನುಮೇಗೌಡರು ಹೇಳಿದ ಮಾತುಗಳನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಯಿತು)

ಪಾರ್ಲಿಮೆಂಟ್ ಸದಸ್ಯರು ತಾಲ್ಲೂಕು ಮಂಡಳಿಯ ಕಛೇರಿಗೆ ಹೋಗಿ ಪಂಚಾಯತ್ ಸದಸ್ಯರು ಮತ್ತು ಅಧಿಕಾರಿಗಳನ್ನು ಕರೆದು ಸಭೆ ನಡೆಸುವ ಅಧಿಕಾರ ಅವರಿಗಿದೆಯೇ? ನಾನು ಈ ಕುರಿತು ಹೇಳಬೇಕಾದ್ದು ಬಹಳಷ್ಟಿದೆ. ಕೆಲವು ಮಾತ್ರ ಉದಾಹರಣೆಗಾಗಿ ಹೇಳುತ್ತಿದ್ದೇನೆ. ನಮ್ಮ ಊರಿನಲ್ಲಿ ದೇವಸ್ಥಾನದಲ್ಲಿ ಪೂಜಾರಿ ಪೂಜೆ ಮಾಡುತ್ತಿದ್ದರೆ ಅವರನ್ನು ತೆಗೆದುಹಾಕುವುದಕ್ಕೆ, ಪಾರ್ಲಿಮೆಂಟ್ ಸದಸ್ಯರಿಗೆ ಏನು ಅಧಿಕಾರವಿದೆ? ಅದೇ ರೀತಿ ಯಾರಾದರೊಬ್ಬರಿಗೆ ಕಾಮಗಾರಿ ಮಾಡಲು ಗುತ್ತಿಗೆ ಕೊಟ್ಟಿದ್ದರೆ ಅದನ್ನು ಬೇರೆಯವರಿಗೆ ವಹಿಸಿಕೊಟ್ಟು ಕೆಲಸ ಮಾಡಿಸುವುದು ಎಷ್ಟು ಸರಿ? ಪಾರ್ಲಿಮೆಂಟ್ ಸದಸ್ಯರಾದವರು ಎಲ್ಲಾ ವಿಚಾರದಲ್ಲೂ ಈ ರೀತಿ ಹಸ್ತಕ್ಷೇಪವೆಸಗುವುದಾದರೆ ಎಂ.ಎಲ್.ಎ.ಗಳಾದ ನಮ್ಮ

ಗತಿ ಏನು? ನಾವು ಯಾವುದಕ್ಕೂ ಹೇಳುವಂತಿಲ್ಲ. ಜನರಿಂದ ಚುನಾಯಿತರಾಗಿ ಗೆದ್ದು ಬಂದಿರುವ ನಾವು ದನ ಕಾಯುವುದಕ್ಕೆ ಬಂದಿದ್ದೇವೆಯೇ? ಜನರು ನಮ್ಮ ಬಗ್ಗೆ ಏನು ಮಾತನಾಡಬಹುದು? ಪಾರ್ಲಿಮೆಂಟ್ ಸದಸ್ಯರ ಅವಾಂತರಗಳು ದೇವರಿಗೆ ಮುಟ್ಟುತ್ತಿದೆ. ಇದರ ಬಗ್ಗೆ ಹೇಳುವುದಕ್ಕೆ ಕೆಲವರು ಅಂಜಿಕೊಳ್ಳುತ್ತಿದ್ದಾರೆ, ನಾನು ಇರುವ ವಿಚಾರ ಹೇಳುತ್ತಿದ್ದೇನೆ. ಅವರಿಗೆ ನೀವು ಏನು ಬೇಕಾದರೂ ಕೊಡಿ, ಅವರನ್ನು ಚಿನ್ನದ ಸಿಂಹಾಸನದ ಮೇಲೆ ಕೂರಿಸಿ ಯಾರಿಂದಲಾದರೂ ಮಂಗಳಾರತಿ ಮಾಡಿಸಿ, ನಾನು ಬೇಡವೆನ್ನುವುದಿಲ್ಲ. ಒಬ್ಬ ತಾಲ್ಲೂಕು ಬೋರ್ಡ್ ಸದಸ್ಯರು, ಒಬ್ಬ ಎಂ.ಎಲ್.ಎ. ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು ಜನರಿಂದ ಮತ ಪಡೆದು ಚುನಾಯಿತರಾಗಿ ಬಂದ ಮೇಲೆ ಅವರವರ ಕೆಲಸಗಳನ್ನು ಮಾಡುವುದಕ್ಕೆ ಬಿಡಬೇಕು. ಊರಿನಲ್ಲಿರುವ ದೇವಸ್ಥಾನಗಳಲ್ಲಿ ಪೂಜೆ ಮಾಡುವುದಕ್ಕೂ ಪೂಜಾರಿಗಳಿಗೆ ಪಾರ್ಲಿಮೆಂಟ್ ಸದಸ್ಯರು ಶಿಫಾರಸ್ಸು ಮಾಡುತ್ತಾರೆ! ಹೀಗೆ ಇವರ ಅವಾಂತರಗಳು ಸರ್ವಾಂತರ್ಯಾಮಿಯಾಗಿದ್ದು, ಸರ್ವಶಕ್ತರಂತೆ ವರ್ತಿಸುತ್ತಿದ್ದು, ಎಲ್ಲವನ್ನೂ ಮೀರಿ ವ್ಯವಹರಿಸಲು ಹೊರಟಿದ್ದಾರೆ. ಅವರಿಗೆ ಜನರು ಮತ ಕೊಟ್ಟು ಗೆಲ್ಲಿಸಿರುವುದರಿಂದ ಮಾಡಲು ಬೇಕಾದಷ್ಟು ಕೆಲಸಗಳಿವೆ. ಸುಮಾರು 200-300 ಯೋಜನೆಗಳು ಪೂರ್ಣಗೊಳ್ಳದೆ ಹಾಗೇ ಇವೆ, ಒಬ್ಬರೂ ಕೂಡ ಇದರ ಬಗ್ಗೆ ಉಸಿರೆತ್ತಿಲ್ಲ. ನೆರೆಹಾವಳಿಯಿಂದ ಜಿಲ್ಲೆಯಲ್ಲಿ ಕೋಟ್ಯಂತರ ರೂಪಾಯಿಗಳಷ್ಟು ನಷ್ಟವಾಗಿ ಜನರು ತಮ್ಮ ಮನೆ-ಮಠ ಕಳೆದುಕೊಂಡಾಗ ಸರ್ಕಾರ ಪರಿಹಾರವಾಗಿ ಸ್ವಲ್ಪ ಹಣ ಕೊಟ್ಟಿರುವುದರಿಂದ ಅವರು ನೆಮ್ಮದಿಯಿಂದಿದ್ದಾರೆ. ತಾವು ಇವೊತ್ತು ಪಾರ್ಲಿಮೆಂಟ್ ಸದಸ್ಯರಿಗೆ ಬುದ್ಧಿ ಹೇಳುವುದಕ್ಕೆ ಹೊರಟಿದ್ದೀರಿ. ಅವರು ಪಂಚಾಯತ್ ಸದಸ್ಯರನ್ನು ಹೆದರಿಸಿ, ಅವಾಂತರ ಮಾಡುತ್ತಿದ್ದಾರೆ. ತಮ್ಮ ಮರ್ಜಿಗೆ ಒಳಗಾಗದ ಅಧಿಕಾರಿಗಳನ್ನು ಹೆದರಿಸುವುದು, ಅಲ್ಲಿಗೆ ಕಳುಹಿಸುತ್ತೇವೆ, ಇಲ್ಲಿಗೆ ಕಳುಹಿಸುತ್ತೇವೆ ಎಂದು ಬೆದರಿಸುವುದು ಮಾಡುತ್ತಿರುವುದರಿಂದ ತಾವು ಅವರಿಗೆ ಅವರು ಮಾಡಬೇಕಾಗಿರುವ ಕೆಲಸ-ಕಾರ್ಯಗಳನ್ನು ಪಟ್ಟಿಸಿಕೊಟ್ಟು, ನಮ್ಮನ್ನು ಅವರಿಂದ ಬಿಡುಗಡೆ ಮಾಡಿ ನಾವುಗಳು ನಮ್ಮ ಕೆಲಸ ಕಾರ್ಯಗಳನ್ನು ನಿರ್ಭೀತಿ ಹಾಗೂ ನಿರಾತಂಕದಿಂದ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಸದಸ್ಯರಾದ ಹನುಮೇಗೌಡರು ಯಾವಾಗಲಾದರೂ ಭಾಷಣ ಮಾಡಲು ಎದ್ದು ನಿಂತಾಗ ಅವರಿಗೆ ಯೀಲ್ಡ್ ಆಗಬಾರದೆಂಬ ಪಾಠವನ್ನು ನಾನು ಇವೊತ್ತು ಕಲಿತುಕೊಂಡೆ! ಅವರು ನನ್ನ ಒಳ್ಳೆಯ ಸ್ನೇಹಿತರಾಗಿದ್ದು, ನಾವಿಬ್ಬರೂ ಪ್ರಾಣ ಸ್ನೇಹಿತರಾಗಿದ್ದು ಶಾಲಾ-ಕಾಲೇಜಿನ ದಿನಗಳಲ್ಲಿ ಜೊತೆಯಲ್ಲಿಯೇ ಓದುತ್ತಿದ್ದೆವು. ಅವರಿಗೂ ಮತ್ತು ಸಂಸತ್ ಸದಸ್ಯರಿಗೂ ಇರುವ ಸಂಬಂಧ ನನಗೂ ಗೊತ್ತಿದೆ. ಈ ಅಪಭ್ರಂಶಗಳು, ಕಿರುಕುಳಗಳು ಇರುತ್ತವೆ. ನಿಮ್ಮಿಂದ ಅವರಿಗೆ ಎಷ್ಟು ಕಿರುಕುಳವಾಗಿದೆ ಎಂಬುದು ನನಗೆ ಗೊತ್ತಿಲ್ಲ! ಅದನ್ನು ಅವರಿಂದಲೇ (ಪಾರ್ಲಿಮೆಂಟ್ ಸದಸ್ಯರು) ವಿಚಾರಿಸಬೇಕಾಗುತ್ತದೆ.

(ಸದನದಲ್ಲಿ ನಗು)

ಶ್ರೀ ಕೆ.ಹೆಚ್. ಹನುಮೇಗೌಡ :— ಹೊಳೆನರಸೀಪುರದಲ್ಲಿ ಇಬ್ಬರು ಪುಣ್ಯಾತ್ಮರಿದ್ದಾರೆ! ದೇವರು ಅವರಿಂದ ನನಗೆ ಮತ್ತು ನನ್ನ ಜಿಲ್ಲೆಯ ಜನರಿಗೆ ರಕ್ಷಣೆ ಕೊಟ್ಟರೆ ಅಷ್ಟೇ ಸಾಕು!

(ಸದನ ನಗೆಗಡಲಿನಲ್ಲಿ ತೇಲಾಡಿತು)

ಶ್ರೀ ಎಸ್.ಎಂ. ಕೃಷ್ಣ :— ಇದು ಹಾಸನ ಜಿಲ್ಲೆ ಎಂಬುದನ್ನೂ ಕೂಡ ನಾವು ಮರೆಯುವಂತಿಲ್ಲ. ಏಕೆಂದರೆ, ಇದು ನಮ್ಮ ದೇಶದ ಚರಿತ್ರೆಯಲ್ಲಿ ಬಹಳ ಸುಪ್ರಸಿದ್ಧವಾದುದು. ಈ ವಿಚಾರದಲ್ಲಿ ನಮ್ಮ ಪಕ್ಷದ ಚರಿತ್ರೆಯಲ್ಲಿ ಬಹಳಷ್ಟು ಪುಟಗಳನ್ನು ಬರೆಯಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿರುವ ಧಾಟಿಯನ್ನು ನಾನು ಒಪ್ಪದಿದ್ದರೂ ಸಂಸತ್ ಸದಸ್ಯರು, ಪಂಚಾಯತ್ ಅಧ್ಯಕ್ಷರು, ಸದಸ್ಯರ ಕ್ಷೇತ್ರದ ಕೆಲಸಕಾರ್ಯಗಳಲ್ಲಿ ಮತ್ತೊಬ್ಬರು ಹಸ್ತಕ್ಷೇಪವೆಸಗದೇ ಎಲ್ಲರೂ ಸುಮಧುರವಾದ ಬಾಂಧವ್ಯ ಇಟ್ಟುಕೊಂಡು ಕೆಲಸ ಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಅಂತಹ ಸುಮಧುರವಾದ ಬಾಂಧವ್ಯಕ್ಕೇನಾದರೂ ಪೌರೋಹಿತ್ಯ ವಹಿಸುವುದಕ್ಕೆ ಸಾಧ್ಯವಾದರೆ ಅದಕ್ಕೂ ನಾವು ಪ್ರಯತ್ನಿಸುತ್ತೇವೆಂಬ ಆಶ್ವಾಸನೆಯನ್ನು ಮಾನ್ಯ ಹನುಮೇಗೌಡರಿಗೆ ಕೊಡುತ್ತೇವೆ.

(ಸದನದಲ್ಲಿ ನಗು)

ಶ್ರೀ ಕೆ.ಹೆಚ್. ಹನುಮೇಗೌಡ :— ಪೌರೋಹಿತ್ಯವನ್ನು ನಾನು ನೋಡಿದೆ, ಅದು ನಡೆಯಲಿಲ್ಲ.

(ಸದನ ನಗೆಗಡಲಿನಲ್ಲಿ ತೇಲಾಡಿತು)

ಶ್ರೀ ಎಸ್.ಎಂ. ಕೃಷ್ಣ :— ಹಾಗೆಯೇ ಮತ್ತೊಬ್ಬ ಮಾನ್ಯ ಸದಸ್ಯರು ಭಾಷಣ ಮಾಡುತ್ತಾ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲಾ ಕೃಷಿ ಉತ್ಪನ್ನಗಳ ಬೆಲೆಗಳೆಲ್ಲವೂ ಇಳಿದುಹೋಗುತ್ತದೆಂದರು. ನಿಜ, ಕೆಲವು ಸಮಯ ಚೆನ್ನಾಗಿ ಮಳೆಯಾಗುತ್ತದೆ. ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೆ ಉತ್ತಮ ಗುಣಮಟ್ಟದ ಬೀಜಗಳು ಲಭ್ಯವಾಗುತ್ತದಲ್ಲದೆ ರಸಗೊಬ್ಬರಗಳ ಉತ್ತಮ ದಾಸ್ತಾನಾಗುತ್ತದೆ. ಇದೆಲ್ಲದರಿಂದ ಒಳ್ಳೆಯ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೂ ಪುಣ್ಯ ಮಾಡಿರಬೇಕು. ಮಳೆ ಸುಮ್ಮಸುಮ್ಮನೆ ಬೀಳುವುದಿಲ್ಲ. ಆದರೆ, ಮಾರುಕಟ್ಟೆ ಎನ್ನುವುದೊಂದು ಇದೆಯಲ್ಲ. ಆ ಮಾರುಕಟ್ಟೆ ಬಗ್ಗೆ ಹೇಳುವುದಾದರೆ, ಹನುಮೇಗೌಡರು ಮತ್ತು ನಾನು ಅರ್ಥಶಾಸ್ತ್ರದ ವಿದ್ಯಾರ್ಥಿಗಳಾಗಿದ್ದೆವು. ಭೈರೇಗೌಡರು ಅರ್ಥಶಾಸ್ತ್ರದ ವಿದ್ಯಾರ್ಥಿಯಲ್ಲವಾದ್ದರಿಂದಲೇ ತಪ್ಪಾಗಿರುವುದು! ಅರ್ಥಶಾಸ್ತ್ರದಲ್ಲಿ ಡಿಮ್ಯಾಂಡ್ ಅಂಡ್ ಸಪ್ಲೈ ಎಂದು ಬರುತ್ತದೆ. ಸರಬರಾಜು ಯಾವಾಗ ಜಾಸ್ತಿಯಾಗುತ್ತದೋ ಆಗ ಬೆಲೆ

ತಂತಾನೇ ಕಡಿಮೆಯಾಗುತ್ತದೆ, ಹಾಗೆಯೇ ಬೇಡಿಕೆ ಕಡಿಮೆಯಾದಾಗ ಬೆಲೆಗಳು ಕುಸಿಯುತ್ತವೆ. ಇದು ಆಡಂಸ್ಮಿತ್ ಕಾಲದಿಂದಲೂ, ಅರ್ಥಶಾಸ್ತ್ರಜ್ಞರು ಹುಟ್ಟಿದಾಗಿನಿಂದಲೂ ನಡೆದುಕೊಂಡು ಬಂದಿರುವ ಒಂದು ಪ್ರಕ್ರಿಯೆ. ಇದೊಂದು ಮಾಯಾಬಜಾರ್ ಸೃಷ್ಟಿಸುವ ಪ್ರಕ್ರಿಯೆಯಲ್ಲ. ಇದು ಹಳೆಯ ಅರ್ಥಶಾಸ್ತ್ರಜ್ಞರಿಂದಿಡಿದು ಹೊಸ ಅರ್ಥಶಾಸ್ತ್ರಜ್ಞರವರೆಗೂ ಒಪ್ಪಿಕೊಂಡಿರುವ ಒಂದು ತತ್ವ ಅಥವಾ ಪ್ರಿನ್ಸಿಪಲ್ ಆಫ್ ಎಕನಾಮಿಕ್ಸ್. Principle of economics, how can any Government of any society or any market be free from that? The rural economics of the role of economics-- ಅದರ ಬಗ್ಗೆ ಹೇಳಿಕೆ ಮಾಡಬೇಕಾದಾಗ ಇದನ್ನು ಮಾಡುತ್ತೇವೆ. ನಾನು ಅದನ್ನು ಇದನ್ನು ಮಿಕ್ಸ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, the limited point I am trying to submit to this House is that it causes us considerable concern-- 1998-99, 99-00, 2000-01ನೇ ಸಾಲಿನಲ್ಲಿ ಒಂದೇ ರೀತಿಯ ಬೆಲೆ ಪ್ರಿವೇಲ್ ಆಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಬೆಲೆಗಳಲ್ಲಿ ಏರಿಳಿತ ಇದ್ದೇ ಇರುತ್ತದೆ. ಈ ವರ್ಷ ಅಸಾಮಾನ್ಯವಾದಂಥ ಬೆಲೆ ಇಳಿತ ಕಂಡು ಬರುತ್ತಿದೆ. ಇದಕ್ಕಾಗಿ ನಾವು ನೀವು ಒಟ್ಟಿಗೆ ಸೇರಿ ಇದಕ್ಕೊಂದು ಪರಿಹಾರವನ್ನು ಕಂಡು ಹಿಡಿದುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರದ ನೆರವನ್ನು ಕೇಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಆಹಾರ ಸಚಿವರು ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ಕೆಲವು ಮಾತುಕತೆಗಳನ್ನು ಆಡಿದ್ದಾರೆ ಆ ವಿಚಾರಗಳನ್ನು ಕೂಡ ಸಭೆಗೆ ಅವರು ತಿಳಿಸುತ್ತಾರೆ. ಆದ್ದರಿಂದ, ನಾವು ನೀವು ಎಲ್ಲರೂ ಸೇರಿ ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಕೊಂಚ ಮಟ್ಟಿಗೆ ನೆಮ್ಮದಿ ತರುವಂಥ ಕೆಲಸ ಮಾಡಬೇಕಾಗಿದೆ. ``Transfers" is a cancer ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ನಾನು ಒಪ್ಪುತ್ತೇನೆ. Cancerous growth ಇದು ಎಷ್ಟರ ಮಟ್ಟಿಗೆ ಆಗುತ್ತದೆಂದರೆ ಒಂದೇ ಹುದ್ದೆಗೆ ಕೆಲವು ಸಮಯ ಎರಡೆರಡು ಶಿಫಾರಸ್ಸುಗಳನ್ನು ನಾವೇ ಕಳುಹಿಸಿ ಕೊಡುತ್ತೇವೆ. ಹಿಂದೆ ಕಳುಹಿಸಿದ್ದೇವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳದೇ ಪುನಃ ರುಜು ಹಾಕಿ ಕಳುಹಿಸಿಕೊಡುತ್ತೇವೆ. ಹಲವಾರು ಕಾಗದ ಪತ್ರಗಳು ನಮ್ಮಲ್ಲಿ ಇವೆ. ಇದಕ್ಕೆ ಇತಿಶ್ರೀ ಹಾಡುವ ಬಗ್ಗೆ ಹೇಗೆ? ನಾವು ಗೆದ್ದು ಬಂದು ಇಲ್ಲಿ ಪ್ರತಿಜ್ಞಾವಿಧಿ ತೆಗೆದುಕೊಂಡ ನಂತರ ನಮ್ಮ ಸರ್ಕಾರದ ಮೇಲೆ ಬಂದ ಒತ್ತಡ ಬಹಳಷ್ಟು ಪ್ರಮಾಣದಲ್ಲಿತ್ತು. ಏಕೆಂದರೆ, ಕಳೆದ ಐದು ವರ್ಷಗಳಿಂದ ಜಾಂಡ ಬಿಟ್ಟುಕೊಂಡಿದ್ದ ಅಧಿಕಾರಿಗಳನ್ನು, ಹಿಂದಿನ ಶಕೆಯ ಜೊತೆಯಲ್ಲಿ ಯಾರು ಶಾಮೀಲಾಗಿದ್ದರೋ ಅಂಥ ಅಧಿಕಾರಿಗಳಿಂದ ನಮಗೆ ನ್ಯಾಯ ದೊರೆಯುವುದಿಲ್ಲವೆಂದು ನಮ್ಮ ಅನೇಕ ಜನ ಸದಸ್ಯರು ನಮ್ಮ ಮೇಲೆ ಒತ್ತಡ ತಂದರು. ಆದರೆ, we took very firm decision. We are polite, but we were firm. ಮಾರ್ಚಿನವರೆಗೆ ನಾವು ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದೆವು. ಆಗ ನಮ್ಮ ಸದಸ್ಯರು ನಮ್ಮ ನಿರ್ಧಾರವನ್ನು ಬಹಳ ವಿಶ್ವಾಸದಿಂದ

ಒಪ್ಪಿಕೊಂಡರು. ನಂತರ ಪ್ರಶ್ನೆ ಏನು ಬಂತು ಅಂದರೆ ಏಕೆ ನೀವು ವರ್ಗಾವಣೆ ಮಾಡಿದಿರಿ? ಒಬ್ಬ ಮನುಷ್ಯನನ್ನು 3, 4, ವರ್ಷ ಒಂದು ಕಡೆ ಇರಿಸುವುದಕ್ಕಾಗುವುದಿಲ್ಲ. ಆಗ ವರ್ಗಾವಣೆ ಮಾಡಬಾರದು ಎನ್ನುವ ಒಂದು ಡಿಸ್‌ಪೆನ್‌ಸೇಷನ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಆದರೆ ವರ್ಗಗಳ ಬಗ್ಗೆ ಒಂದು ಪಾಲಿಸಿ ಬೇಕಾಗುತ್ತದೆ. ಆದ್ದರಿಂದ, ನಾನು ಆಡಳಿತ ಸುಧಾರಣಾ ಆಯೋಗದವರಿಗೆ ವರ್ಗದ ಬಗ್ಗೆ ಒಂದು ಪಾಲಿಸಿ ಫ್ರೇಮ್ ಕ್ರಿಯೇಟ್ ಮಾಡಿ ಕೊಡಿ ಎಂದು ಕೇಳಿದ್ದೇನೆ. ಅದನ್ನು ನಾವು ಮಂತ್ರಿ ಮಂಡಲದ ಮುಂದೆ ಇಟ್ಟು ಇದಕ್ಕೆ ಫೈನಲ್ ಟಚ್‌ಸ್ ಕೊಟ್ಟು ಯಾವುದನ್ನು ಮಾಡಬೇಕು ಎಂಬುದರ ಬಗ್ಗೆ ನಾವು ಯೋಚಿಸುತ್ತಿದ್ದೇನೆ. ಇದಕ್ಕೂ ಕೂಡ ಈ ಸದನದ ಹಾಗೂ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು, ಬಳ್ಳಾರಿ ಥರ್ಮಲ್ ಪ್ಲಾಂಟ್‌ನಲ್ಲಿ ಏನು ಕೆಲಸ ಆಗಲಿಲ್ಲ, 3200 ಕೋಟಿ ರೂಪಾಯಿಗಳನ್ನು ಬಳ್ಳಾರಿಗೆ ಪ್ಯಾಕೇಜ್ ಎಂದು ಘೋಷಣೆ ಮಾಡಿದಿರಿ ಆದರೂ ಏನೂ ಆಗಲಿಲ್ಲವೆಂದು ಹೇಳಿದರು. 3200 ಕೋಟಿ ರೂಪಾಯಿಗಳ ಈ ಪ್ಯಾಕೇಜ್ ಏನಿದೆ ನಮ್ಮ ಮುಂದಿನ ಐದು ವರ್ಷದ ಒಂದು ಬೃಹತ್ ಯೋಜನೆ ಇದಾಗಿದೆ. ಯಾರಾದರೂ ಸರ್ಕಾರ ನಡೆಸಿದಂಥವರು 3200 ಕೋಟಿ ರೂಪಾಯಿಯ ಒಂದು ಪ್ಲಾಂಟ್‌ನ್ನು ಒಂದು ವರ್ಷದಲ್ಲಿಯೇ ಏಕೆ ಮಾಡಲಿಲ್ಲವೆಂದು ಕೇಳಿದರೆ ಇದಕ್ಕೆ ನಾನು ಏನು ಹೇಳಲಿ? ಮಾನ್ಯ ಭೈರೇಗೌಡರವರು ಏಕೆ ನಗುತ್ತಾರೋ ನನಗೆ ಗೊತ್ತಾಗಲಿಲ್ಲ? ನೀವೇನಾ ಈ ಪ್ರಶ್ನೆ ಕೇಳಿದ್ದು. ನಾನು ಜಗದೀಶ್ ಶೆಟ್ಟರ್‌ರವರು ಕೇಳಿದರು ಎಂದುಕೊಂಡಿದ್ದೆ.

ಶ್ರೀ ಜಗದೀಶ್ ಶೆಟ್ಟರ್ :— ಬಳ್ಳಾರಿಯಲ್ಲಿ ಪವರ್ ಪ್ಲಾಂಟ್ ಬಗ್ಗೆ ನಾನು ಕೇಳಿದ್ದು.

ಶ್ರೀ ಎಸ್.ಎಂ. ಕೃಷ್ಣ :— ಪವರ್ ಪ್ಲಾಂಟ್ ಸ್ಥಾಪನೆಗೆ ಈಗಾಗಲೇ ತಾತ್ವಿಕವಾಗಿ ನಾವು ಒಪ್ಪಿದ್ದೇವೆ. ಬಳ್ಳಾರಿಯಲ್ಲಿ ವಿಜಯನಗರ ಎನ್ನುವ ಹೆಸರಿನಲ್ಲಿ 500 ಮೇಘಾವಾಟ್ ಪವರ್ ಪ್ಲಾಂಟ್ ಮಾಡಬೇಕು ಎನ್ನುವ ಉದ್ದೇಶ ಇದೆ. ಇದಕ್ಕಾಗಿ ಏನು ಚರ್ಚೆ ನಡೆಯಿತು ಎಂದರೆ, ಇದು ಗ್ಯಾಸ್‌ಬೇಸ್ ಆಗಬೇಕೆ? ಅಥವಾ ಕೋಲ್‌ಬೇಸ್ಡ್ ಆಗಬೇಕೆ? ಎನ್ನುವ ಒಂದು ಜಿಜ್ಞಾಸೆ ಇತ್ತು. ಆದರೆ, ಎನ್ರಾನ್‌ರವರು ಗ್ಯಾಸ್ ತಂದು ಕೊಡುತ್ತೇವೆಂದು ಒಂದು ಕಾಲದಲ್ಲಿ ಹೇಳಿದ್ದರು. ಆದರೆ ಇತ್ತೀಚಿನ ಪೆಟ್ರೋಲಿಯಂ ಪ್ರಾಡೆಕ್ಟ್‌ನ ಪ್ರೈಸ್ ಅನ್ನು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ನಾವು ಗಮನಿಸಿದಾಗ ಬಹಳ ಗಾಬರಿ ಬರತಕ್ಕಂಥ ಬೆಳವಣಿಗೆಯಾಗಿದೆ. ಆದ್ದರಿಂದ ನಾವು ತಾತ್ಕಾಲಿಕವಾಗಿ ಏನು ತೀರ್ಮಾನ ತೆಗೆದುಕೊಂಡಿದ್ದೇವೆಂದರೆ, ಇದನ್ನು ಕೋಲ್‌ಬೇಸ್ಡ್ ಪವರ್ ಪ್ಲಾಂಟ್ ಮಾಡಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಇದಕ್ಕೆ ಪೂರಕವಾಗಿ ಎರಡು ಸಾವಿರ ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಅಲ್ಲಿ ನೂರಾರು ಜನರೇನು ಕೆಲಸ ಮಾಡುತ್ತಿಲ್ಲ, ಏನಾದರೂ ಅಲ್ಲಿ ಕೆಲಸವಿದ್ದಾಗ ಇಲ್ಲಿಂದ ಹೋಗಿ ಆ ಕೆಲಸ ಮಾಡಿ ಮುಗಿಸಿ

ಬರುತ್ತಾರೆ. ಏಕೆಂದರೆ, ಒಂದು ಥರ್ಮಲ್ ಪ್ಲಾಂಟ್‌ಗೆ ನೀರು ಬೇಕಾಗುತ್ತದೆ. Effluent discharge ಗೆ ಏನು ಬೇಕು ಅದನ್ನು ಮಾಡಬೇಕಾಗುತ್ತದೆ. ಬಳ್ಳಾರಿ ಪವರ್ ಪ್ಲಾಂಟ್ ರಾಜ್ಯಕ್ಕೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕಂಥ ಪವರ್ ಪ್ಲಾಂಟ್ ಆಗಿದ್ದು ಇದಕ್ಕೆ ಐ.ಸಿ.ಐ.ಸಿ.ಯವರು ಅಂದರೆ ಕೇಂದ್ರ ಸರ್ಕಾರದ ದೊಡ್ಡ ರಾಷ್ಟ್ರೀಕೃತ ಸಂಸ್ಥೆಯೊಂದು ಇದಕ್ಕೇನು ಹಣಕಾಸು ಬೇಕು ಅದನ್ನು ಕೊಡುತ್ತೇವೆಂದು ಮುಂದೆ ಬಂದಿರತಕ್ಕಂಥದ್ದನ್ನು ನೋಡಿದರೆ ಈ ಪ್ರಾಜೆಕ್ಟ್ ಬಗ್ಗೆ ಅವರಿಗಿರುವ ವಿಶ್ವಾಸದ ದ್ಯೋತಕವೆಂದು ಹೇಳಬಹುದು. ಈ ವಿಚಾರವನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳುವುದರ ಜೊತೆಗೆ ಅಪ್ರಿಸಿಯೇಟ್ ಮಾಡಬೇಕೆಂದು ಕೇಳುತ್ತೇನೆ. ಮಾನ್ಯ ಜ್ಞಾನೇಂದ್ರರವರು, ರೆವಿನ್ಯೂ ವಸೂಲಿ ಮಾಡುವುದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಇದೆ ಎನ್ನುವುದರ ಬಗ್ಗೆ ಹೇಳಿದರು. ಇದು ಬಹಳ ಶೋಚನೀಯವಾದಂಥ ಬೆಳವಣಿಗೆ. ಅವರು ಹೇಳಿದ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುವುದಿಲ್ಲ. ಏಕೆಂದರೆ, ರಾಜ್ಯದಲ್ಲಿರುವ ಕೆಲವು ಸಂಘ ಸಂಸ್ಥೆಗಳ ಹಾವಳಿಯಿಂದ ಹೀಗಾಗಿದೆ, ಸರ್ಕಾರಕ್ಕೆ ಕೊಡಬೇಕಾಗಿರುವುದನ್ನು ಕೊಡು ಎಂದು ಹೇಳಿದರೆ ನಾನೇಕೆ ಕೊಡಬೇಕು ಎನ್ನುವ ಪ್ರವೃತ್ತಿ ಏನಿದೆ ಇದನ್ನು ಸಂಪೂರ್ಣವಾಗಿ ನಾವು ಹತ್ತಿಕ್ಕಬೇಕಾಗಿರುವುದು ಅಗತ್ಯವಾಗಿದೆ. ಅಂದರೆ ಸಂಘಟನೆಗಳನ್ನು ಹತ್ತಿಕ್ಕುತ್ತೇವೆಂದಲ್ಲ, ಒಂದು ಪಕ್ಷ ಕೊಡಬಾರದನ್ನು ಕೇಳಿದರೆ ಕೊಡಬೇಡಿ. ಆದರೆ ಯಾವುದರಿಂದ ನೀವು ಪ್ರಯೋಜನ ಪಡೆಯುತ್ತೀರಿ ಅದಕ್ಕೆ ಇಂತಿಷ್ಟು ಕೊಡಬೇಕೆಂದು ಏನು ಈ ಸದನ ತೀರ್ಮಾನಿಸಿರುತ್ತದೆಯೋ ಅದನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳು, ವ್ಯಕ್ತಿಗಳು, ಗ್ರಾಮಾಂತರ ಅಥವಾ ಪಟ್ಟಣ ಪ್ರದೇಶಗಳಿಗೆ ಹೋಗಿ ಸರ್ಕಾರಕ್ಕೆ ಕೊಡಬೇಕಾದ್ದನ್ನು ಕೊಡಿ ಎಂದು ಕೇಳಿದರೆ ನಾವು ಕೊಡುವುದಿಲ್ಲವೆಂದು ಪ್ರತಿರೋಧ ಮಾಡುವುದರ ಬಗ್ಗೆ ಸರ್ಕಾರ ಬಹಳ ನಿಷ್ಠುರವಾದಂಥ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ, ರೈತಾಪಿ ಜನಗಳು ಉಪಯೋಗಿಸುವ ಪಂಪ್‌ಸೆಟ್ಟು ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ನಮಗೇನು ಹೇಳುತ್ತಾರೆಂದರೆ, ಬಡ್ಡಿ ಮನ್ನಾ ಮಾಡಿ ಅಸಲು ಮಾತ್ರ ಕಟ್ಟಲು ಅವಕಾಶಕೊಡಿ, ಇನ್ನೊಂದು ತಿಂಗಳು ಇದೇ ರೀತಿ ಮುಂದುವರಿಸಿ ಎಂದು ಬಹಳ ಜನ ಸದಸ್ಯರು ಹೇಳುತ್ತಾರೆ. ನಾವು ಇದನ್ನು ಸೆಪ್ಟೆಂಬರ್ ತಿಂಗಳಿನಿಂದ ಮುಂದಕ್ಕೆ ಹಾಕಿಕೊಂಡು ಬರುತ್ತಿದ್ದೇವೆ. ನಮ್ಮ ಮೇಲೆ ಒತ್ತಾಯ ತರುವ ಮಾನ್ಯ ಸದಸ್ಯರ ವಾದ ಏನೆಂದರೆ, ಈಗ ಬೆಳೆ ಬರುತ್ತದೆ, ಬೆಳೆ ಬಂದಾಗ ಅವರು ಕಟ್ಟಬೇಕಾದ ಹಣವನ್ನು ಕೆ.ಪಿ.ಸಿ.ಗೆ ಹಣ ತುಂಬಿಸುತ್ತಾರೆ ಆದ್ದರಿಂದ ನವೆಂಬರ್ ಅಂತ್ಯದವರೆಗೆ ಜಾರಿ ಮಾಡಿ ಎಂದ ಮೇಲೆ ನಾವು ಕೂಡ ಅದರಂತೆ ಮಾಡಿದೆವು ಆದರೆ ಮತ್ತೆ ಈಗ ಏನು ಪ್ರಾರಂಭವಾಗಿದೆ ಎಂದರೆ ಡಿಸೆಂಬರ್ ಅಂತ್ಯದವರೆಗೆ ಜಾರಿ ಮಾಡಿರಿ ಎಂದು ಕೇಳುತ್ತಿದ್ದಾರೆ, ಈ ರೀತಿಯಾದರೆ ಇದಕ್ಕೆ ಕೊನೆ ಯಾವಾಗ?

ಶ್ರೀ ಬಿ.ಹೆಚ್. ಬನ್ನಿಕೋಡ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದು ನಿಜ. ನಾವೆಲ್ಲರೂ ಹೇಳಿದ ಮೇಲೆ ನೀವು ಇದನ್ನು ಮುಂದಕ್ಕೆ ಹಾಕಿಕೊಂಡು ಬಂದಿದ್ದೀರಿ. ಬಡ್ಡಿಯನ್ನು ಬಿಟ್ಟು ಅಸಲು ಮಾತ್ರ ಕಟ್ಟಿ, ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಬಗ್ಗೆ, ತಾವು ಏನು ಅವರಿಗೆ ಅವಕಾಶ ಕೊಟ್ಟಿದ್ದೀರಿ ಇದು ನಿಜವಾಗಿ ರೈತರ ಹಿತದೃಷ್ಟಿಯಿಂದ ಒಳ್ಳೆಯದಾಗಿದೆ. ತಮಗೆ ಗೊತ್ತಿರುವಂತೆ ನಾವಿಂದು ರೈತರು ಬೆಳೆದಂತೆ ಉತ್ಪನ್ನಗಳ ಬೆಲೆ ಇಲ್ಲ ಎನ್ನುವ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಗೋವಿನ ಜೋಳ ಖರೀದಿ ಮಾಡುವುದಕ್ಕೆ ಸೂಕ್ತ ಬೆಲೆ ಇಲ್ಲ, ಇಲ್ಲಿಯವರೆಗೆ ಮಳೆಯಿತ್ತು ಕಟಾವು ಮಾಡಲಿಕ್ಕೆ ತೊಂದರೆಯಿತ್ತು, ಈಗ ತಾನೇ ಸರ್ಕಾರ ಗೋವಿನ ಜೋಳವನ್ನು ಕೊಳ್ಳುವುದಕ್ಕೆ

5.00 ಪಿ.ಎಂ.

ಬೇರೆ ಬೇರೆ ವ್ಯವಸ್ಥೆ ಮಾಡುತ್ತಿದ್ದೀರಿ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಿರುವುದರಿಂದ ರೈತರು ಬೆಳೆದಂಥ ಕೃಷಿ ಉತ್ಪನ್ನಗಳ ಖರೀದಿ ವ್ಯವಸ್ಥೆ ಈಗ ತಾನೇ ಪ್ರಾರಂಭವಾಗಿದೆ. ಆದ್ದರಿಂದ ಇಲ್ಲಿಯವರೆಗೆ ರೈತನಿಗೆ ಏನು ಸಮಯವನ್ನು ನಿಗದಿ ಮಾಡಲಾಗಿತ್ತೋ ಅದನ್ನು ಮಾರ್ಚ್ ಕೊನೆಯವರೆಗೆ ಅಂತಿಮ ಸಮಯವೆಂದು ವಿಸ್ತರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾರಣ ಏನೆಂದರೆ, ತಮಗೆ ಗೊತ್ತಿರುವ ಹಾಗೆ ಇವತ್ತಿನದಿವಸ ರೈತ ಕಬ್ಬು ಬೆಳೆದು ಮಾರಾಟ ಮಾಡಿದ್ದರೂ ಸಹ ಆತನಿಗೆ ಇನ್ನು ಹಣ ಸಿಕ್ಕಿರುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಮಾರ್ಚ್‌ವರೆಗೆ ಸಮಯವನ್ನು ವಿಸ್ತರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ತಾವು ಈಗಾಗಲೇ ನಿಗದಿಪಡಿಸಿದ ದಿನಾಂಕದೊಳಗೆ ಹಣವನ್ನು ತುಂಬಬೇಕೆಂದು ನಾವು ರೈತರಿಗೆ ಹೇಳಿದ್ದೇವೆ. ರೈತರು ಒಂದೇ ಸಾರಿ 2000 ರೂಪಾಯಿಗಳನ್ನು ಕಟ್ಟುವುದಕ್ಕೆ ಕಷ್ಟವಾಗುತ್ತದೆಂದು ಹೇಳಿದಾಗ, ಅವರಿಗೆ ಒಂದು ಸಾರಿ 500 ರೂಪಾಯಿಯಂತೆ ನಾಲ್ಕು ಬಾರಿ ಕಟ್ಟಿಕೊಂಡು ಹೋಗಬಹುದೆಂದು ನಾವು ತಿಳಿಸಿದೆವು. ಆದರೆ ರೈತರು ಮೊದಲು ಕಟ್ಟಿದ 500 ರೂಪಾಯಿಗಳನ್ನು ಬಡ್ಡಿ ಎಂದು ಮನ್ನಾ ಮಾಡಿಕೊಂಡಿದ್ದಾರೆ. ಒಂದೇ ಸಾರಿ 2000 ರೂಪಾಯಿ ಕಟ್ಟಿದರೆ ಮಾತ್ರ ಬಡ್ಡಿ ಮನ್ನಾ ಆಗುತ್ತದೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಹಾಗೆಯೇ ಮೊದಲು ಕಟ್ಟಿದ 500 ರೂಪಾಯಿ ಬಡ್ಡಿಗೆ ಆಯಿತು, ಮತ್ತೆ 2000 ರೂಪಾಯಿ ಕಟ್ಟಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ರೈತರು ಅಸಲು ಹಣವನ್ನು ಕಟ್ಟಿಕೊಂಡು ಹೋಗುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅವಕಾಶ ಮಾಡಿಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬನ್ನಿಕೋಡ್‌ರವರು ಹೇಳಿದ ಪ್ರಕಾರ, ರೈತರು ಬೆಳೆದಂಥ ಕೃಷಿ ಉತ್ಪನ್ನಗಳು ಈಗ ಮಾರುಕಟ್ಟೆಗೆ ಪ್ರವೇಶವಾಗುತ್ತಿದ್ದು, ಈ ಸಂದರ್ಭದಲ್ಲಿ ರೈತರಿಗೆ ಹಣ ಬರತಕ್ಕಂಥ ಕಾಲ ಈಗ ಕೂಡಬರುತ್ತಿದೆ. ಆದ್ದರಿಂದ ರೈತರು ಕಟ್ಟಬೇಕಾದ ಹಣಕ್ಕೆ ಸರ್ಕಾರ ನಿಗದಿ ಮಾಡಿದ ಸಮಯವನ್ನು ಒಂದೊಂದು ತಿಂಗಳು ಎಕ್ಸ್‌ಟೆಂಡ್ ಮಾಡುವ ಬದಲು ಮಾರ್ಚ್ ತಿಂಗಳ ಅಂತ್ಯದವರೆಗೆ ಸಮಯವನ್ನು ಅಂತಿಮವೆಂದು ನಿಗದಿ ಮಾಡಿದರೆ, ರೈತರು ಹಣ ತುಂಬುವುದಕ್ಕೆ ಅಲ್ಲಿಯವರೆಗೆ ಮಾನಸಿಕವಾಗಿ ತಯಾರಾಗುತ್ತಾರೆ. ಈಗಲೂ ಮತ್ತೆ ಒಂದು ತಿಂಗಳು ಎಕ್ಸ್‌ಟೆಂಡ್ ಮಾಡುತ್ತಾ ಹೋಗುತ್ತಾರೆ ಎನ್ನತಕ್ಕಂಥ ಕಲ್ಪನೆ ಆತನಿಗೆ ಬರುತ್ತದೆ. ಆದ್ದರಿಂದ ಮಾರ್ಚ್ 31ಕೊನೆಯ ಅವಧಿ ಎಂದು ನಿಗದಿ ಮಾಡಿದರೆ ರೈತನಿಗೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಎ. ಪಾಪಣ್ಣ:— ಮಾನ್ಯ ಅಧ್ಯಕ್ಷರೆ, ಡೊಮೆಸ್ಟಿಕ್ ಪರ್ಪಸ್‌ಗೋಸ್ಕರ ಉಪಯೋಗ ಮಾಡತಕ್ಕಂಥ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಒಂದು ತಿಂಗಳಲ್ಲಿ ವಿದ್ಯುಚ್ಛಕ್ತಿ ಬಿಲ್ 200 ರೂಪಾಯಿ ಬಂದಿದ್ದರೆ, ಇದಕ್ಕೆ 24 ಪರ್ಸೆಂಟ್‌ನಷ್ಟು ಬಡ್ಡಿಯನ್ನು ಹಾಕಿರುತ್ತಾರೆ. ಮುಂದಿನ ತಿಂಗಳಿಗೆ ಬಡ್ಡಿಗೆ ಮತ್ತೆ ಬಡ್ಡಿ ಹಾಕಿ ಹಣವನ್ನು ತುಂಬಿಸಿಕೊಳ್ಳುತ್ತಿದ್ದಾರೆ. ಇಲ್ಲಿ ವಿದ್ಯುಚ್ಛಕ್ತಿ ಬಿಲ್‌ಗಿಂತ ಬಡ್ಡಿ ಹಣವೇ ಜಾಸ್ತಿಯಾಗಿದೆ. ಆದ್ದರಿಂದ ಕೇವಲ ವಿದ್ಯುಚ್ಛಕ್ತಿ ಹಣವನ್ನು ಮಾತ್ರ ತುಂಬಿಸಿಕೊಳ್ಳುವುದಕ್ಕೆ ದಯಮಾಡಿ ಸೂಚನೆ ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, ಪ್ರತಿ ತಿಂಗಳು ವಿದ್ಯುಚ್ಛಕ್ತಿ ಬಿಲ್‌ನ್ನು ಕಟ್ಟಿಕೊಂಡು ಹೋದರೆ ಈ ತೊಂದರೆಯೇ ಬರುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿ ತಿಂಗಳು ಹಣ ಕಟ್ಟುತ್ತಾ ಹೋದರೆ, ಅವರು ವಿದ್ಯುಚ್ಛಕ್ತಿ ಕೊಡುತ್ತಾರೆ, ನೀವು ಕೇವಲ ಸ್ವಿಚ್ ಹಾಕುವುದಷ್ಟೆ ಕೆಲಸ. ಆದರೆ ಬಾಕಿ ಹಣವನ್ನು ಉಳಿಸಿಕೊಂಡು ಹೋದರೆ, ನಾನಾ ವಿಧವಾದ ಇತಿಭಾದೆಗಳು ನಮ್ಮ ರೈತಾಪಿ ಜನರಿಗೆ ತಪ್ಪಿದಲ್ಲ. ಈ ಪ್ರಶ್ನೆಯನ್ನು ನಾನು ಇತ್ಯರ್ಥ ಮಾಡಬೇಕೆಂದು ಪ್ರಯತ್ನ ಮಾಡುತ್ತಿರುವಾಗ, ಮಾನ್ಯ ಬನ್ನಿಕೋಡ್ ರವರು, ಇದನ್ನು ಸಾರೋದ್ಧಾರ ಮಾಡಬೇಕೆಂಬ ದೃಷ್ಟಿಯಿಂದ ಮುಂದಿನ ವರ್ಷ ಮಾರ್ಚ್ ತಿಂಗಳ ಕೊನೆಯವರೆಗೆ ಅವಧಿಯನ್ನು ವಿಸ್ತರಿಸಬೇಕೆಂದು ಹೇಳಿದ್ದಾರೆ. ಆದರೆ ಈ ತಿಂಗಳ ಕೊನೆಯೊಳಗೆ, ಮಾನ್ಯ ರೈತಾಪಿ ಬಂಧುಗಳು ಆದಷ್ಟು ಬೇಗ ಹಣವನ್ನು ಕಟ್ಟಿ ಕೆ.ಪಿ.ಟಿ.ಸಿ.ಎಲ್.ನಿಂದ ಋಣಮುಕ್ತರಾಗತಕ್ಕಂಥ ಮಾರ್ಗವನ್ನು ಹುಡುಕುವುದು ಬಹಳ ಅವಶ್ಯಕವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಕೆ.ಪಿ.ಟಿ.ಸಿ.ಎಲ್.ನವರು ವಿದ್ಯುತ್‌ನ್ನು ಉತ್ಪಾದನೆ

ಮಾಡುವುದಿಲ್ಲ.ವಿದ್ಯುತ್ ನ್ನು ಉತ್ಪಾದನೆ ಮಾಡತಕ್ಕಂಥ ಕೆ.ಪಿ.ಸಿ.ಯವರಿಂದ ಕೆ.ಪಿ.ಟಿ.ಸಿ.ಎಲ್ ನವರು ವಿದ್ಯುತ್ ನ್ನು ಕೊಂಡುಕೊಳ್ಳುತ್ತಾರೆ. ವಿದ್ಯುಚ್ಛಕ್ತಿಯನ್ನು ಕೊಂಡುಕೊಳ್ಳತಕ್ಕಂಥ ಸಂದರ್ಭದಲ್ಲಿ ಪ್ರತಿ ತಿಂಗಳಿಗೆ 90 ಕೋಟಿ ರೂಪಾಯಿ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಆದರೆ ಕಳೆದ ತಿಂಗಳು ಕೇವಲ 60 ಕೋಟಿ ರೂಪಾಯಿಗಳನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಯಿತು. ಈ ರೀತಿ ಕೆ.ಪಿ.ಸಿ.ಯನ್ನು ನಡೆಸುವುದಾದರೂ ಹೇಗೆ? ಈ ತಿಂಗಳು ಈಗಾಗಲೇ 20 ದಿವಸಗಳು ಮುಗಿದಿದ್ದೆ, ಇನ್ನು 40 ಕೋಟಿ ರೂಪಾಯಿಗಳಷ್ಟು ಕೆ.ಪಿ.ಸಿ.ಯವರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ, ಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಸಂಸ್ಥೆಗಳ ಕಷ್ಟವನ್ನು ಜನಪ್ರತಿನಿಧಿಗಳಾದ ನಾವೆಲ್ಲರೂ ಕೂಡ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಸಂಸ್ಥೆಯವರು ವಿದ್ಯುಚ್ಛಕ್ತಿ ಬಳಕೆದಾರರಿಗೆ ಈಗಾಗಲೇ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಇವತ್ತಿನದಿವಸ ಬಳಕೆದಾರ ಮತ್ತು ವಿದ್ಯುತ್ ಉತ್ಪಾದನೆ ಮಾಡತಕ್ಕಂಥವರನ್ನು ಮತ್ತು ವಿದ್ಯುತ್ ವಿತರಣೆ ಮಾಡತಕ್ಕಂಥ ಈ ವರ್ಗದವರ ಹಿತದೃಷ್ಟಿಯನ್ನು ನಾವು ನೋಡಬೇಕಾಗುತ್ತದೆ. ಈಗ Power Regulatory Commission ಎಂದು ಬಂದಿದೆ. -we are answerable to them also.ಆದ್ದರಿಂದ, ಈ ದೃಷ್ಟಿಯ ಹಿನ್ನೆಲೆಯಲ್ಲಿ ತಾವು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ನಮೂದು ಆಗಿರತಕ್ಕಂಥ ಎಲ್ಲಾ ವಿಚಾರಗಳಿಗೆ ಸಂಬಂಧಪಟ್ಟಂತೆ ಕೆಲವರು ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಿಮ್ಮ ಬಜೆಟ್‌ನಲ್ಲಿ ಹೇಳಿರುವುದನ್ನು ತಾವೇನು ಸಾಕ್ಷಾತ್ಕಾರ ಮಾಡಿದ್ದೀರೆಂದು ಮಾನ್ಯ ಸದಸ್ಯರೊಬ್ಬರು ಕೇಳಿದರು. ನಾವು ಈಗಾಗಲೇ ಬಜೆಟ್‌ನಲ್ಲಿ ಹೇಳಿದ ಪ್ರಕಾರ, ಹೆಣ್ಣುಮಕ್ಕಳಿಗೆ ಪಿ.ಯು.ಸಿ.ಯವರೆಗೆ ಉಚಿತ ಶಿಕ್ಷಣ ಕೊಡುವಂಥ ವ್ಯವಸ್ಥೆ ಈಗಾಗಲೇ ಜಾರಿಗೆ ಬಂದಿದೆ. ಇದೇ ರೀತಿ ಜಾರಿಗೆ ತಂದಿರತಕ್ಕಂಥ ಕಾರ್ಯಗಳ ಒಂದು ದೊಡ್ಡ ಲಿಸ್ಟ್ ನನ್ನ ಹತ್ತಿರ ಇದೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಮೊದಲನೇ ತರಗತಿಯಿಂದ ಪಿ.ಯು.ಸಿ.ಯವರೆಗೆ ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣ ಕೊಡುವಂಥ ದೃಷ್ಟಿಯಿಂದ ರಾಜ್ಯ ಸರ್ಕಾರ ಈ ಒಂದು ಕಾರ್ಯಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತದೋ, ಅಷ್ಟನ್ನು ಕೇಂದ್ರ ಸರ್ಕಾರ ಮರು ಪಾವತಿ ಮಾಡಿಕೊಡತಕ್ಕಂಥ ಒಂದು ವ್ಯವಸ್ಥೆ ಇದೆ. ಆದ್ದರಿಂದ, ಖರ್ಚು ಆಗಿರುವ ಬಗ್ಗೆ ನಮ್ಮ ರಾಜ್ಯದಿಂದ ಕೇಂದ್ರಕ್ಕೆ ಲಿಸ್ಟ್ ಹೋಗಿದೆಯೇ? ಮತ್ತು ಈ ಒಂದು ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಏನಾದರು ಹಣ ಈಗ ಬಂದಿದೆಯೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ :— ಈ ರೀತಿಯಾದ ಸ್ಕೀಂ ಇನ್ನೂ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಎ. ರಾಮದಾಸ್ :— ಈಗಾಗಲೇ ಸದರಿ ಸ್ಕೀಂ ಜಾರಿಯಲ್ಲಿದೆ. ಆಂಧ್ರಪ್ರದೇಶದವರು ಈಗಾಗಲೇ ಹಣವನ್ನು ತರಿಸಿಕೊಂಡಿದ್ದಾರೆ ಎನ್ನತಕ್ಕಂಥ ವಿಚಾರ

ತಿಳಿದು ಬಂದಿದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂಥ ಲಿಸ್ಟ್ ನಮ್ಮ ರಾಜ್ಯದಿಂದ ಸಬ್‌ಮಿಟ್ ಆಗಿದೆಯೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ಇಂಥ ಸ್ಕೀಂ ಅನ್ನು ಕೇಂದ್ರ ಸರ್ಕಾರದವರು ಮಾಡಿದ್ದರೆ, ನಾನು ಕೇಂದ್ರ ಸರ್ಕಾರವನ್ನು ಅಭಿನಂದಿಸುತ್ತೇನೆ. ಏಕೆಂದರೆ, ಇದು ಒಳ್ಳೆಯ ಪ್ರೋಗ್ರೆಸಿವ್ ಮೆಸರ್. ಇವತ್ತಿನದಿವಸ ನಮ್ಮ ದೇಶದಲ್ಲಿ ಸುಮಾರು 28ರಿಂದ 32 ಪರ್ಸೆಂಟ್‌ನಷ್ಟು ಮಾತ್ರ ಹೆಣ್ಣುಮಕ್ಕಳು ಅಕ್ಷರಸ್ಥರಾಗಿದ್ದಾರೆ. ಆದ್ದರಿಂದ ಈ ಒಂದು ದೊಡ್ಡ ಸಾಮಾಜಿಕ ಪಿಡುಗಿನಿಂದ ನಮ್ಮ ದೇಶವನ್ನು ರಕ್ಷಣೆ ಮಾಡಬೇಕಾದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ಜೊತೆ-ಗೂಡಿ ಇಂಥ ಮೂಲಭೂತವಾದ ವಿಚಾರಗಳಿಗೆ ಸಹಕರಿಸಬೇಕಾದುದು ಅಗತ್ಯ ಇದೆ.

ಶ್ರೀ ಎಸ್.ಎಸ್. ಪಾಟೀಲ್:— ಸರ್ಕಾರ ಆದೇಶದಲ್ಲಿ ಕೇವಲ ಸರ್ಕಾರಿ ಶಾಲೆಗಳಲ್ಲಿ ಓದತಕ್ಕಂಥ ಹೆಣ್ಣುಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆಂದು ನಮೂದು ಮಾಡಿದ್ದೀರಿ. ಆದರೆ ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಖಾಸಗಿ ಶಾಲಾ-ಕಾಲೇಜುಗಳು ಜಾಸ್ತಿ ಇರುವುದರಿಂದ, ಎಲ್ಲಾ ಶಾಲಾ-ಕಾಲೇಜುಗಳಿಗೆ ಈ ಒಂದು ಯೋಜನೆ ಅನ್ವಯಿಸುತ್ತದೆಂದು ದಯವಿಟ್ಟು ತಾವು ಸೂಚಿಸಬೇಕು.

ಶ್ರೀ ಎಸ್.ಎಂ. ಕೃಷ್ಣ:— ಖಾಸಗಿ ಮೇನೇಜ್‌ಮೆಂಟಿನಲ್ಲಿ ಸರ್ಕಾರದ ಹಿಡಿತ ಎಲ್ಲಿದೆ? ಆದ್ದರಿಂದ, ಇದನ್ನು ಎನ್‌ಫೋರ್ಸ್ ಮಾಡತಕ್ಕಂಥ ಬಗೆಯಾದರು ಹೇಗೆ?

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಅನುದಾನ ಪಡೆದುಕೊಳ್ಳುತ್ತಿರುವ ಶಾಲೆಗಳಲ್ಲಿ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಉತ್ತರ ಕರ್ನಾಟಕ ಭಾಗದಲ್ಲಿ ಅನುದಾನಿತ ಸಂಸ್ಥೆಗಳು ಜಾಸ್ತಿ ಇವೆ. ಅಂದರೆ, ಸರ್ಕಾರಿ ಶಾಲೆಗಳು ಕೇವಲ 5 ಪರ್ಸೆಂಟ್‌ನಷ್ಟು ಇದ್ದರೆ, ಇನ್ನು 95 ಪರ್ಸೆಂಟ್‌ನಷ್ಟು ಅನುದಾನಿತ ಸಂಸ್ಥೆಗಳಿವೆ. ಈಗ ತಾವು ತಂದಿರಿತಕ್ಕಂಥ ಯೋಜನೆಯಿಂದ ಇಲ್ಲಿರತಕ್ಕಂಥ ಹೆಣ್ಣುಮಕ್ಕಳಿಗೆ ಸಂಪೂರ್ಣವಾದ ಲಾಭವಾಗುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ:— ಬೊಂಬಾಯಿ ಕರ್ನಾಟಕ ಭಾಗದಲ್ಲಿರತಕ್ಕಂಥ ವಸ್ತುಸ್ಥಿತಿ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಹೈದರಾಬಾದ್ ಕರ್ನಾಟಕ ಹಾಗೂ ಹಳೆಯ ಮೈಸೂರಿನ ಬಹುತೇಕ ಭಾಗಗಳಲ್ಲಿ ಸರ್ಕಾರಿ ಶಾಲೆಗಳಿವೆ. ಆದರೆ ಈಗ ಮಾನ್ಯ ಸದಸ್ಯರು ಹೇಳಿರುವ ಪ್ರಕಾರ, ಸರ್ಕಾರದಿಂದ ಅನುದಾನ ಪಡೆಯುತ್ತಿರತಕ್ಕಂಥ ಶಾಲೆಗೂ ಕೂಡ ಈ ಒಂದು ಪ್ರೊಗೆಸಿವ್ ಮೆಷರ್ ಅನ್ನು ಎಕ್ಸ್‌ಟೆಂಡ್ ಮಾಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎನ್ನತಕ್ಕಂಥದನ್ನು ಅವರ ಜೊತೆ ಸಮಾಲೋಚನೆ ಮಾಡಿ ಈ ಒಂದು ಯೋಜನೆಯನ್ನು ಅಲ್ಲಿಯೂ ಕೂಡ ಜಾರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಶಾಸಕರ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ಕೋಸ್ಕರ ಹಣವನ್ನು ಕೊಡಬೇಕೆಂದು ಈಗಾಗಲೇ ನಾವೆಲ್ಲಾ ತಮ್ಮ ಹತ್ತಿರ ಮನವಿ ಮಾಡಿಕೊಂಡಿದ್ದೆವು. ಇದು ಬಹಳ ದಿನಗಳಿಂದ ಹಾಗೆ ಉಳಿದುಕೊಂಡಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಹಣ ವನ್ನು ಕೊಡುವುದರ ಬಗ್ಗೆ ಪ್ರಕಟಣೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ತತ್‌ಕ್ಷಣ ಅನೌನ್ಸ್ ಮಾಡಬಹುದಾಗಿತ್ತು, ಆದರೆ ರಾಜ್ಯ ಸರ್ಕಾರಕ್ಕೆ ಒಂದು ಕಡೆ ವೇಸ್ ಆ್ಯಂಡ್ ಮೀನ್ಸ್ ಚೆಕ್‌ಮೇಟ್ ಮಾಡು ಎಂದು ಹೇಳುತ್ತಾರೆ. ಓವರ್ ಡ್ರಾಫ್ಟ್‌ಗೆ ಕೈಹಾಕಬೇಡಿ ಎಂದು ಹೇಳುತ್ತಾರೆ. ಆವರ್ತನಿಧಿಯನ್ನು 100 ಕೋಟಿ ರೂಪಾಯಿಗಳಿಗೆ ಮಾಡಿ ಎಂದು ಹೇಳುತ್ತಾರೆ, ನಾವು 100 ಕೋಟಿ ರೂಪಾಯಿಗಳನ್ನು ವಿಮೆಗೆ ತೆಗೆದಿಟ್ಟಿದ್ದೇವೆಂದು ಹೇಳುತ್ತೇವೆ. ಆಶ್ರಯ ಮನೆಗೆ 83 ಕೋಟಿ ರೂಪಾಯಿಗಳನ್ನು ಬೇಗನೆ ಬಿಡುಗಡೆ ಮಾಡಿ ಆ ಮನೆಗಳನ್ನು ಕಟ್ಟಲು ಪ್ರಾರಂಭ ಮಾಡಿ ಎಂದು ಹೇಳುತ್ತೇವೆ. ಆದ್ದರಿಂದ ಎಲ್ಲಾ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯತಕ್ಕಂಥ ಕಾಲದಲ್ಲಿ ಮಾನ್ಯ ಸದಸ್ಯರು ಕೇಳಿದ ಹಾಗೆ, 224 ಕೋಟಿ ರೂಪಾಯಿಗಳನ್ನು ಯಾವ ರೀತಿಯಾಗಿ ಸೃಷ್ಟಿ ಮಾಡಬೇಕು, ಅದನ್ನು ಪಡೆಯುವುದಕ್ಕೆ ನಾವು ಏನು ಮಾಡಬೇಕು ಎನ್ನತಕ್ಕಂಥದ್ದು ಇದು ಬಹಳ ಕ್ಲಿಷ್ಟವಾಗಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಇದು ತಮ್ಮ ಮೇಲೆ ಇದೆ, ಇದಕ್ಕೆ ತಾವು ಒಪ್ಪಿದರೆ ಆಗುತ್ತದೆ, ಇದರ ಜವಾಬ್ದಾರಿ ತಮ್ಮ ಮೇಲೆ ಇದೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು 224 ಕೋಟಿ ರೂಪಾಯಿಗಳೆಂದು ಹೇಳಿದರೆ, ಕನಿಷ್ಠ ಅವರು ಅರ್ಧಕ್ಕಾದರೂ ಬರಬಹುದಲ್ಲವೆ ಎಂದು ನನ್ನ ಒಂದು ಸಲಹೆ. ಮಾರ್ಚ್ ಕೊನೆಯವರೆಗೆ ಕನಿಷ್ಠ 50 ಲಕ್ಷ ರೂಪಾಯಿಗಳನ್ನಾದರೂ ಕೊಟ್ಟರೆ, ಉಳಿದದ್ದನ್ನು ಮುಂದೆ ನೋಡಬಹುದು.

ಶ್ರೀ ಎಸ್.ಎಂ. ಕೃಷ್ಣ :— ಈ ಪ್ರಶ್ನೆಗೆ ಇವತ್ತು ಪೂರ್ಣ ಪ್ರಮಾಣದಲ್ಲಿ ಉತ್ತರ ದೊರಕುವುದಿಲ್ಲ. ಮೇಲ್ಮನೆಯಲ್ಲಿ 75 ಜನ ಸದಸ್ಯರಿದ್ದಾರೆ. ಶಾಸಕರು ಎಂದು ಹೇಳಿದಾಗ ಅವರಿಗೂ ಸಮಾನ ಹಕ್ಕು ಬರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಅವರಿಗೆ ಸಾರ್ವಜನಿಕರ ಒಂದು ಸಂಪರ್ಕ ಇರುವುದಿಲ್ಲ. ನಾವು ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯಲ್ಲಿ ಯಾವುದೇ ಕೆಲಸಕ್ಕೆ ಅನುದಾನ ಇಡಬೇಕೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಎಲ್ಲಾ ಶಾಸಕರು ತಮ್ಮ ಮೇಲೆ ಒತ್ತಾಯವನ್ನು ತರುತ್ತಿದ್ದಾರೆ, ಅದನ್ನು ತಾವು ಅನುಷ್ಠಾನಕ್ಕೆ ತರಬೇಕು.

ಶ್ರೀ ಸಿ. ಬೈರೇಗೌಡ :— ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಮಧ್ಯದಲ್ಲಿ ಇಷ್ಟೊಂದು ಜನ ಶಾಸಕರು ಬರುವುದನ್ನು ನಾನು ಇದೇ ಮೊದಲನೇ ಸಲ ನೋಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ :— ಎಲ್ಲಾ ಮಾನ್ಯ ಶಾಸಕರುಗಳು ಏನೆಲ್ಲ ಹೇಳಿದ್ದೀರಿ. ಅದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ, ಅದಕ್ಕೆ ಬೇಕಾದ ರೆಸ್ಪಾನ್ಸ್ ನಮ್ಮಿಂದ ಬರುತ್ತದೆ. ಆಗ್ಗಿದ್ದಾಗ ಈ ಸದನ ಪೂರಕ ಅಂದಾಜುಗಳಿಗೆ ಅನುಮೋದನೆ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು :— ನಾನು ಪೂರಕ ಅಂದಾಜುಗಳ (ಮೊದಲನೆಯ ಕಂತು) ಪಟ್ಟಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮ ಸಂಖ್ಯೆ 1, 2, 3, 4, 5, 6, 7, 8, 9, 10, 12, 13, 18, 19, 22, 23, 24, 25, 28, 29, 30, 32, 31, 33, 36, 37, 38, 39, 40, 41, 42, 43, 44, 45, 46, 47, 48, 49, 50, 51, 52 ಹಾಗೂ 53 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಿಂದ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗಿಗೆ ಮೀರದಂತೆ ಮೊತ್ತವನ್ನು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳಿಗೆ ಮಂಜೂರಾತಿ ನೀಡಲಾಯಿತು.

11. ಶಾಸನ ರಚನೆ

ಎ) ವಿಧೇಯಕ ಮಂಡನೆ ಹಾಗೂ ಪ್ರಸ್ತಾವ.

(1) ಕರ್ನಾಟಕ ಧನ ವಿನಿಯೋಗ (ಸಂಖ್ಯೆ-2) ವಿಧೇಯಕ, 2000

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.